# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 11 | ಸಂಚಿಕೆ 26 | ಪುಟ 16 | ಜೂನ್ 19–25, 2017 | ರೂ. 10/-

web: www.janashakthi.co.in | e-mail : js_weekly@yahoo.com


ಈ ಯೋಗದಿನದಂದು ರೈತರು ಶವಾಸನ ಮಾಡುತ್ತಾರೆ ಎಂದ

**ಶಿವಕುಮಾರ ಶರ್ಮ**

ಮಧ್ಯಪ್ರದೇಶ ಸಂಘಿ ಬಿ.ಕೆ.ಎಸ್. ನಾಯಕ






## ಕಾವೇರಿ ಕಣಿವೆಯಲ್ಲಿ ಕೆಂಪು ನೆರೆ

## ಕಲ್ಲಡ್ಕ: ಚೂರಿ ಇರಿತಗಳ ರಾಜಕಾರಣ





## ಮಹಾರಾಷ್ಟ್ರ ರೈತರ ಚಾರಿತ್ರಿಕ ಹೋರಾಟ



ಹಾಸ್ಟೆಲ್ ನೌಕರರ ಬೃಹತ್ ಹೋರಾಟ

## ವಿ.ವಿ. ಸ್ವಾಯತ್ತತೆಗೆ ಭಂಗ ಬೇಡ

## ಪೌರಕಾರ್ಮಿಕರ ಹೋರಾಟ





ರಾಮನಗರ ಇರುಳಿಗರ ಹೋರಾಟ

## ಪ್ರಧಾನಿಗೆ ಯೆಚುರಿ ಪತ್ರ : ಕನಿಷ್ಟ ಬೆಂಬಲ ಬೆಲೆ ಖಾತ್ರಿ ಶಾಸನ ತನ್ನಿ

# ಹಣಕಾಸು ಮಂತ್ರಿಗಳೇ, ರೈತರು ಭಿಕ್ಷೆ ಕೇಳುತ್ತಿಲ್ಲ, ತಮ್ಮ ಹಕ್ಕನ್ನು ಕೇಳುತ್ತಿದ್ದಾರೆ-ಎಐಕೆಎಸ್

ರೈತರ ಸಾಲಮನ್ನಾಕ್ಕೆ ಕೇಂದ್ರ ಸರಕಾರ ಹಣ ಕೊಡಲು ಸಾಧ್ಯವಿಲ್ಲ, ಅದರ ಸಂಪೂರ್ಣ ಹೊರೆಯನ್ನು ರಾಜ್ಯ ಸರಕಾರಗಳೇ ಹೊರಬೇಕು ಎಂಬ ಹಣಕಾಸು ಮಂತ್ರಿಗಳ ಹೇಳಿಕೆಯನ್ನು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಬಲವಾಗಿ ಖಂಡಿಸಿದೆ. ಇದು ಸಂಪೂರ್ಣವಾಗಿ ಸಂವೇದನಾಶೂನ್ಯ ಹೇಳಿಕೆ ಎಂದು ಅದು ವರ್ಣಿಸಿದೆ.

ರೈತರು ನಮಗೆ ಸ್ವಲ್ಪ ಅನುಕೂಲ ಮಾಡಿಕೊಡಿ ಎಂದೇನೂ ಭಿಕ್ಷೆ ಕೇಳುತ್ತಿಲ್ಲ, ಅವರು ತಮ್ಮ ಹಕ್ಕನ್ನು ಆಗ್ರಹಿಸುತ್ತಿದ್ದಾರೆ. ಎಲ್ಲ ಬೆಳೆಗಳಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ ನಿಗದಿಪಡಿಸಬೇಕು ಎಂಬ ಎಂಎಸ್ ಸ್ವಾಮಿನಾಥನ್ ಆಯೋಗದ ಶಿಫಾರಸನ್ನು ಜಾರಿ ಮಾಡಬೇಕಾದ್ದು ಕೇಂದ್ರ ಸರಕಾರದ ಜವಾಬ್ದಾರಿ. ಕಳೆದ ಮೂರು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಹಣಕಾಸು ಮಂತ್ರಿಗಳು ಅದನ್ನು ಮಾಡುವಲ್ಲಿ ವಿಫಲರಾಗಿದ್ದಾರೆ. ಸರಕಾರದ ತಪ್ಪು ಧೋರಣೆಗಳಿಂದಾಗಿ ರೈತರು ಸಾಲಬಲೆಯಲ್ಲಿ ಸಿಲುಕಿದ್ದಾರೆ ಎಂದು ಅದು ಹಣಕಾಸು ಮಂತ್ರಿಗಳಿಗೆ ನೆನಪಿಸಿದೆ.

**ರೈತರ ಹೋರಾಟಗಳ ಒತ್ತಡದಿಂದಾಗಿ ಸಾಲಮನ್ನಾ ಪ್ರಕಟಿಸಿರುವ ಮಹಾರಾಷ್ಟ್ರ ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿಗಳು ಅರುಣ್ ಜೇಟ್ಲಿ ಅವರ ಸಂವೇದನಾಶೂನ್ಯ ಹೇಳಿಕೆಗೆ ಉತ್ತರ ಕೊಡಬೇಕಾಗಿದೆ ಎಂದಿರುವ ಎಐಕೆಎಸ್ ಈಗಾಗಲೇ ಯೋಜಿಸಿರುವ ಜೂನ್ 16 ರ ಪ್ರತಿಭಟನೆಯಲ್ಲಿ ದೇಶಾದ್ಯಂತ ರೈತ-ವಿರೋಧಿ ಹಣಕಾಸು ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ಪ್ರತಿಕೃತಿಗಳನ್ನು ದಹಿಸಲಾಗುವುದು ಎಂದಿದೆ. ಈ ಪ್ರತಿಭಟನೆಯಲ್ಲಿ ರೈತರು ಮತ್ತು ಕೃಷಿಕೂಲಿಕಾರರು ಮತ್ತು ದಮನಿತ ಜನವಿಭಾಗಗಳ ನೂರಾರು ಸಂಘಟನೆಗಳು ಭಾಗವಹಿಸುತ್ತವೆ ಎಂದು ಅದು ಹೇಳಿದೆ.**

# ಜೂನ್ 16 ರಂದು ಬೃಹತ್ ರೈತ ಪ್ರತಿಭಟನೆ-ಭೂಮಿ ಅಧಿಕಾರ್ ಆಂದೋಲನ್

ಎಲ್ಲ ಎಡ ಮತ್ತು ಜನವಾದಿ ರೈತ ಮತ್ತು ಕೃಷಿ ಕಾರ್ಮಿಕ ಸಂಘಟನೆಗಳು ಮತ್ತು ಸಾಮಾಜಿಕ ಸಂಘಟನೆಗಳ ವೇದಿಕೆ ಭೂಮಿ ಅಧಿಕಾರ್ ಆಂದೋಲನ್(ಬಿಎಎ) ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ರೈತರ ಹೋರಾಟಗಳಿಗೆ ಬೆಂಬಲವಾಗಿ ಜೂನ್ 16ರಂದು ಬೃಹತ್ ಹೋರಾಟಗಳನ್ನು ನಡೆಸಲು ಕರೆ ನೀಡಿದೆ. ರಸ್ತೆ ತಡೆ, ರೈಲು ತಡೆ, ಪ್ರತಿಕೃತಿ ದಹನ ಮತ್ತು ಮತಪ್ರದರ್ಶನ ಮುಂತಾದ ವಿವಿಧ ಸ್ವರೂಪಗಳಲ್ಲಿ ಈ ಹೋರಾಟ ನಡೆಯುತ್ತದೆ ಎಂದು ಅದು ಹೇಳಿದೆ.

**ಈ ಹೋರಾಟದ ಮುಖ್ಯ ಬೇಡಿಕೆಗಳು ಹೀಗಿವೆ:**

1. ಎಂಎಸ್ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಎಲ್ಲ ಬೆಳೆಗಳಿಗೆ ಉತ್ಪಾದನಾ ಖರ್ಚಿನ ಮೇಲೆ 50% ಕನಿಷ್ಟ ಬೆಂಬಲ ಬೆಲೆಗಳನ್ನು ನಿಗದಿಪಡಿಸಬೇಕು ಮತ್ತು ಎಲ್ಲ ಖರೀದಿ ಕೇಂದ್ರಗಳಲ್ಲಿ ಖರೀದಿಸುವ ಗ್ಯಾರಂಟಿ ಕೊಡಬೇಕು.
2. ರೈತಾಪಿ ಜನಗಳಿಗೆ ಸಮಗ್ರ ಸಾಲಮನ್ನಾ
3. ಜಾನುವಾರು ಮಾರುಕಟ್ಟೆಗಳಲ್ಲಿ ಜಾನುವಾರು ವ್ಯಾಪಾರವನ್ನು ನಿಷೇಧಿಸುವ ಕೇಂದ್ರ ಸರಕಾರದ ರೈತ-ವಿರೋಧಿ ಅಧಿಸೂಚನೆಯನ್ನು ಹಿಂದಕ್ಕೆ ಪಡೆಯಬೇಕು.
4. ಮಂದಸೌರ್‌ನಲ್ಲಿ ಆರು ರೈತರ ಹತ್ಯೆಗೆ ಕಾರಣ-ರಾದ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ರಾಜೀನಾಮೆ ನೀಡಬೇಕು.
5. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಯೋಜನೆಗೆ ಹಣನೀಡಿಕೆಯಲ್ಲಿ ಕಡಿತ ಮಾಡಬಾರದು.

ಭೂಮಿ ಅಧಿಕಾರ್ ಆಂದೋಲನ್(ಬಿಎಎ)ಗೆ ಸೇರಿದ ಸಂಘಟನೆಗಳು ಮಹಾರಾಷ್ಟ್ರ, ಮಧ್ಯಪ್ರದೇಶ, ಪಶ್ಚಿಮ ಬಂಗಾಲ ಮತ್ತಿತರ ರಾಜ್ಯಗಳಲ್ಲಿ ನಡೆಯುತ್ತಿರುವ ರೈತರ ಹೋರಾಟಗಳ ಭಾಗವಾಗಿವೆ. ಈ ಹಿನ್ನೆಲೆಯಲ್ಲಿ ಮೊದಲು ಬಿ.ಎ.ಎ. ಜೂನ್ 14 ರಂದು ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಿತ್ತು. ಆದರೆ ದೇಶದ ಹಲವೆಡೆಗಳಲ್ಲಿ ನಡೆಯುತ್ತಿರುವ ಹೋರಾಟಗಳ ಹಿನ್ನೆಲೆಯಲ್ಲಿ ಜೂನ್ 10 ರಂದು ನವದೆಹಲಿಯಲ್ಲಿ ನಡೆದ 62 ರೈತ ಸಂಘಟನೆಗಳ ಸಭೆಯ ನಿರ್ಧಾರದ ಹಿನ್ನೆಲೆಯಲ್ಲಿ ಈ ರಾಷ್ಟವ್ಯಾಪಿ ಹೋರಾಟ ಜೂನ್ 14 ರ ಬದಲು ಜೂನ್ 16 ರಂದು ನಡೆಯುತ್ತದೆ ಎಂದು ಬಿ.ಎ.ಎ. ಹೇಳಿದೆ. ತನ್ನ ಎಲ್ಲ ಸದಸ್ಯ ಸಂಘಟನೆಗಳು ಈ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತವೆ ಎಂದು ಭೂಮಿ ಅಧಿಕಾರ್ ಆಂದೋಲನ್ ಹೇಳಿದೆ.

# ದೇಶಾದ್ಯಂತ ಜಾನುವಾರು ಮಾರಾಟ ನಿಷೇಧ ಅಧಿಸೂಚನೆ ಸುಟ್ಟು ರೈತರ ಪ್ರತಿಭಟನೆ

ಜೂನ್ 9 ರಂದು ದೇಶಾದ್ಯಂತ ಸಾವಿರಾರು ರೈತರು ಮಾಂಸಕ್ಕಾಗಿ ಜಾನುವಾರು ಮಾರಾಟ ನಿಷೇಧಿಸುವ ಕೇಂದ್ರ ಸರಕಾರದ ಅಧಿಸೂಚನೆಯ ಪ್ರತಿಗಳನ್ನು ಸುಡುವ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಹೆಚ್ಚಿನ ರಾಜ್ಯಗಳಲ್ಲಿ ಹಳ್ಳಿ-ಹಳ್ಳಿಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಯಿತು.



ಬೃಹತ್ ಪ್ರಮಾಣದಲ್ಲಿ ರೈತರು ಇದರಲ್ಲಿ ಭಾಗವಹಿಸಿರುವುದು ಜಾನುವಾರುಗಳನ್ನು ನಿಷ್ಪ್ರಯೋಜಕಗೊಳಿಸುವ ಸರಕಾರದ ರೈತ-ವಿರೋಧಿ ಕ್ರಮಕ್ಕೆ ರೈತರ ಆಕ್ರೋಶವನ್ನು ಅಭಿವ್ಯಕ್ತಗೊಳಿಸಿದೆ.. ಆರೆಸ್ಸೆಸ್-ಬಿಜೆಪಿ ಕುಟುಂಬಗಳಿಗೆ ಸೇರಿದ ರೈತರು ಕೂಡ ಇದರಲ್ಲಿ ಭಾಗವಹಿಸಿದ್ದಾರೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಹೇಳಿದೆ.

ದಿಲ್ಲಿಯಲ್ಲಿ ಜಂತರ್‌ಮಂತರ್‌ನಲ್ಲಿ ಪ್ರತಿಭಟನಾ ಕಾರ್ಯಕ್ರಮ ನಡೆಯಿತು. ಭೂಮಿ ಅಧಿಕಾರ್ ಆಂದೋಲನ ಮತ್ತು ವಿವಿಧ ಸಾಮೂಹಿಕ ಮತ್ತು ವರ್ಗ ಸಂಘಟನೆಗಳ ಮುಖಂಡರು ಇದರಲ್ಲಿ ಭಾಗವಹಿಸಿದರು. ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್, ಎನ್‌ಎಫ್‌ಐಡಬ್ಲ್ಯು ಪ್ರಧಾನ ಕಾರ್ಯದರ್ಶಿ ಅನ್ನಿ ರಾಜ, ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ, ಎಐಎಡಬ್ಲ್ಯುಎ ಜಂಟಿ ಕಾರ್ಯದರ್ಶಿ ಸುನಿತ್ ಚೊಪ್ರಾ ಮತ್ತು ಭೂಮಿ ಅಧಿಕಾರ್ ಆಂದೋಲನದ ಮುಖಂಡರಾದ ಸ್ನೇಹಲತಾ ಹಾಗು ಸಂಜೀವ್ ಭಾಗವಹಿಸಿದವರಲ್ಲಿ ಪ್ರಮುಖರು.

ನರೇಂದ್ರ ಮೋದಿ ಸರಕಾರ ಈ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳುವ ವರೆಗೆ ಈ ಹೋರಾಟ ಮುಂದುವರೆಯುತ್ತದೆ ಎಂದು ಈ ಮುಖಂಡರು ಹೇಳಿದರು.


# ಭೀಮ್ ಆರ್ಮಿ ಮುಖ್ಯಸ್ಥ ಚಂದ್ರಶೇಖರ್ ಬಂಧನ: ಡಿಎಸ್‌ಎಂಎಂ ಖಂಡನೆ

ಉತ್ತರಪ್ರದೇಶದ ಭೀಮ್ ಆರ್ಮಿ ಎಂಬ ಸಂಘಟನೆಯ ಮುಖ್ಯಸ್ಥರಾದ ಚಂದ್ರಶೇಖರ್ ಅವರನ್ನು ಜೂನ್ 8 ರಂದು ಹಿಮಾಚಲ ಪ್ರದೇಶದಲ್ಲಿ ಉತ್ತರಪ್ರದೇಶದ ವಿಶೇಷ ಕಾರ್ಯಪಡೆ(ಎಸ್‌ಟಿಎಫ್) ಬಂಧಿಸಿದೆ ಎಂದು ವರದಿಯಾಗಿದೆ. ಇದನ್ನು ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ಖಂಡಿಸಿದೆ. ಇದಕ್ಕೆ ಮೊದಲು ಜೂನ್ 5ರಂದು ಶಬ್ಬೀರ್‌ಪುರದ ಪಂಚಾಯ್ತ್ ಪ್ರಧಾನರಾದ ಶಿವಕುಮಾರ್ ಅವರನ್ನು ಬಂಧಿಸಲಾಗಿತ್ತು. ವಾಸ್ತವವಾಗಿ ಮೇಲ್ಜಾತಿ ಗಲಭೆಕೋರರು ಇವರ ಮನೆಯನ್ನು ಸುಟ್ಟಿದ್ದಾರೆ, ಅವರ 23 ವರ್ಷದ ಮಗನ ಮೇಲೆ ಮಾರಣಾಂತಿಕ ದಾಳಿ ನಡೆಸಲಾಗಿದ್ದು ಅದರಿಂದ ಉಂಟಾದ ಹಲವು ಗಾಯಗಳಿಂದಾಗಿ ನಾಲ್ಕು ಸರ್ಜರಿಗಳಿಗೆ ಒಳಗಾಗಬೇಕಾಗಿದೆ. ಇನ್ನೂ ಇತರ ಹಲವಾರು ದಲಿತರನ್ನು ಬಂಧಿಸಲಾಗಿದೆ. ಆದರೆ ಸಹರಾಪುರ್ ಮತ್ತು ಶಬ್ಬೀರ್‌ಪುರದಲ್ಲಿ ದಲಿತರ ಮೇಲೆ ದಾಳಿ, ಹಿಂಸಾಚಾರ ನಡೆಸಿದವರನ್ನು ಇನ್ನೂ ಮುಟ್ಟಿಲ್ಲ ಎಂದು ಡಿಎಸ್‌ಎಂಎಂ ಖೇದ ವ್ಯಕ್ತಪಡಿಸಿದೆ.

ದಲಿತರ ಮೇಲೆ ದಾಳಿಗಳು ಮತ್ತು ಹಿಂಸಾಚಾರಕ್ಕೆ ಕಾರಣರಾದವರನ್ನೆಲ್ಲ ಬಂಧಿಸಬೇಕು ಮತ್ತು ಅವರನ್ನೆಲ್ಲ ಪರಿಶಿಷ್ಟ ಜಾತಿ/ ಬುಡಕಟ್ಟು ಅತ್ಯಾಚಾರ ತಡೆ ಕಾಯ್ದೆಯ ಅಡಿಯಲ್ಲಿ ಮತ್ತು ಇತರ ಸಂಬಂಧಪಟ್ಟ ಸೆಕ್ಷನ್‌ಗಳ ಅಡಿಯಲ್ಲಿ ವಿಚಾರಣೆಗೆ ಗುರಿಪಡಿಸಬೇಕು, ದಾಳಿಗಳಿಗೆ ಒಳಗಾಗಿ ತೊಂದರೆ ಅನುಭವಿಸಿದವರಿಗೆ ಸಾಕಷ್ಟು ಪರಿಹಾರ ಒದಗಿಸಬೇಕು ಎಂದು ಡಿಎಸ್‌ಎಂಎಂ ಆಗ್ರಹಿಸಿದೆ.

## ಮಾತೆಂದರೆ ಇದು

ತತ್ವಸಿದ್ಧಾಂತ ಮತ್ತು ರಾಜಕೀಯವನ್ನು ಕಲೆ
ಮತ್ತು ಸಾಹಿತ್ಯದ ಕೃತಿಗಳ ಸೃಜನೆ ಮತ್ತು
ಆಸ್ವಾದನೆಯಿಂದ ಪ್ರತ್ಯೇಕಿಸುವುದೂ ಸಾಧ್ಯವಿಲ್ಲ,
ಬೆರೆಸುವುದೂ ಸಾಧ್ಯವಿಲ್ಲ.
ಈ ಸಂಗತಿಯನ್ನು ಇತ್ತ
ರಾಜಕೀಯ ಕಾರ್ಯಕರ್ತರು,
ಅಥವ ಅತ್ತ ಕಲೆ ಮತ್ತು ಸಾಹಿತ್ಯದ ಕ್ಷೇತ್ರದಲ್ಲಿ
ಇರುವವರು ಮರೆತಿದ್ದಾರೆ.



-ಇಎಂಎಸ್ ನಂಬೂದಿರಿಪ್ಪಾಡ್

# ಪ್ರೊ. ಸಾಯಿಬಾಬ ವಿಷಯದಲ್ಲಿ ಮಧ್ಯಪ್ರವೇಶಿಸಲು ಮಾನವ ಹಕ್ಕುಗಳ ಆಯೋಗಕ್ಕೆ ಮನವಿ

ಈಗ ನಾಗ್ಪುರ ಸೆಂಟ್ರಲ್ ಜೈಲಿನಲ್ಲಿ ಏಕಾಂತ ಜೈಲುವಾಸ ಅನುಭವಿಸುತ್ತಿರುವ ದಿಲ್ಲಿಯ ಅಂಗವಿಕಲತೆ ಇರುವ ಪ್ರೊ. ಸಾಯಿಬಾಬರವರ ಆರೋಗ್ಯ ತ್ವರಿತವಾಗಿ ಹದಗೆಡುತ್ತಿದ್ದು ಈ ವಿಷಯದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮಧ್ಯಪ್ರವೇಶಿಸಬೇಕು ಎಂದು ದಿಲ್ಲಿ ವಿವಿ ಅಧ್ಯಾಪಕರ ಸಂಘದ ಅಧ್ಯಕ್ಷೆ ನಂದಿತಾ ನಾರಾಯಣ್, ಮಹಿಳಾವಾದಿ ಕಾರ್ಯಕರ್ತೆ ಕಲ್ಯಾಣಿ ಮೆನನ್ ಸೆನ್, ಪ್ರೊ.ಸಾಯಿಬಾಬ ಅವರ ಪತ್ನಿ ವಸಂತ ಕುಮಾರಿ ಹಾಗೂ ರಾಷ್ಟ್ರೀಯ ವಿಕಲಾಂಗರ ಹಕ್ಕುಗಳ ವೇದಿಕೆಯ ಕಾರ್ಯದರ್ಶಿ ಮುರಳೀಧರನ್ ಇದ್ದ ನಿಯೋಗವೊಂದು ಆಯೋಗದ ರಿಜಿಸ್ಟ್ರಾರ್(ಕಾನೂನು) ಅಶೋಕ ಕುಮಾರ್ ಅವರನ್ನು ಜೂನ್ 1ರಂದು ಭೇಟಿ ಮಾಡಿ ಒಂದು ಮನವಿ ಪತ್ರವನ್ನು ಸಲ್ಲಿಸಿದೆ.

ಪ್ರೊ. ಸಾಯಿಬಾಬ 90% ಅಂಗವಿಕಲತೆಯಿಂದ ವೀಲ್‌ಚೇರ್ ಬಳಸಬೇಕಾಗಿರುವವರು. ಅವರು ಜೈಲಿನ ಶೋಚನೀಯ ಪರಿಸ್ಥಿತಿಯನ್ನು ಎದುರಿಸಬೇಕಾಗಿರುವುದು ಮಾತ್ರವಲ್ಲ, ಸತತವಾಗಿ ಪೋಲಿಸರು ಮತ್ತು ಜೈಲು ಸಿಬ್ಬಂದಿಯ ದುರ್ವರ್ತನೆಯನ್ನೂ ಎದುರಿಸಬೇಕಾಗಿದೆ.

ಅಂಗವಿಕಲತೆ ಮಾತ್ರವಲ್ಲ, ಇವರು ಇತರ ಕೆಲವು ತೀವ್ರ ಕಾಯಿಲೆಗಳಿಗೂ ಗುರಿಯಾಗಿದ್ದಾರೆ, ಅವರಿಗೆ ತಕ್ಷಣ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂದು ವೈದ್ಯರು ಹೇಳಿದ್ದಾರೆ. ಅವರಿಗೆ ಶಿಕ್ಷೆ ಪ್ರಕಟಿಸುವ ಮೊದಲು ಅವರು ಸರ್ಜರಿ-ಪೂರ್ವ ಚಿಕಿತ್ಸೆ ಪಡೆಯುತ್ತಿದ್ದರು. ಅವರನ್ನು ತೀವ್ರ ಅಂಗವಿಕಲತೆಯಿರುವವರಿಗೆ ಚಿಕಿತ್ಸೆಯ ಸೌಲಭ್ಯ ಇರುವ ಆಸ್ಪತ್ರೆಗೆ ತಕ್ಷಣವೇ ಸೇರಿಸಬೇಕಾಗಿದೆ. ಆದರೆ ಜೈಲಿನಲ್ಲಿ ತೀವ್ರ ದೈಹಿಕ ನೋವುಗಳನ್ನು ಅನುಭವಿಸುತ್ತಿರುವ ಅವರಿಗೆ ಜೈಲು ಡಾಕ್ಟರ ಸೌಲಭ್ಯವನ್ನೂ ನಿರಾಕರಿಸಲಾಗಿದೆ.

ಈ ಎಲ್ಲ ಅಂಶಗಳನ್ನು ಆಯೋಗದ ಗಮನಕ್ಕೆ ತಂದಿರುವ ನಿಯೋಗ ಅವರೊಂದಿಗೆ ಜೈಲಿನಲ್ಲಿ ಈ ರೀತಿಯ ವರ್ತನೆ ಅವರ ಜೀವ, ಘನತೆ, ಸಮಾನತೆ ಹಾಗೂ ಚಿತ್ರಹಿಂಸೆ, ಕ್ರೌರ್ಯ, ಅಮಾನವೀಯ ವರ್ತನೆಯಿಂದ ರಕ್ಷಣೆ ಹಾಗೂ ಆರೋಗ್ಯ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ನಿಯೋಗದ ಕಾನೂನು ರಿಜಿಸ್ಟ್ರಾರ್‌ಗೆ ಮನವರಿಕೆ ಮಾಡಲು ಯತ್ನಿಸಿತು.

ಭಾರತ ಅಂತರ್‌ರಾಷ್ಟ್ರೀಯ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಧಿನಿರ್ಣಯ, ವಿಶ್ವಸಂಸ್ಥೆ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿರ್ಣಯ ಮತ್ತು ನೆಲ್ಸನ್ ಮಂಡೆಲಾ ನಿಯಮಗಳು ಎಂದು ಪ್ರಸಿದ್ಧವಾಗಿರುವ ಬಂಧಿಗಳೊಂದಿಗೆ ವರ್ತನೆಯ ಕನಿಷ್ಟ ನಿಯಮಗಳಿಗೆ ಸಹಿ ಹಾಕಿದೆ. ಅಲ್ಲದೆ ಇತ್ತೀಚೆಗೆ ಅಂಗವಿಕಲತೆಯ ವ್ಯಕ್ತಿಗಳ ಹಕ್ಕುಗಳ ಕಾಯ್ದೆ (ಆರ್‌ಪಿಡಿ ಆಕ್ಟ್), 2016 ನ್ನು ಕೂಡ ಅಂಗೀಕರಿಸಲಾಗಿದೆ.

ಆದ್ದರಿಂದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಕೂಡಲೇ ಪ್ರೊ. ಸಾಯಿಬಾಬರನ್ನು ಅವರಿಗೆ ಅತ್ಯಗತ್ಯವಾಗಿರುವ ತಜ್ಞರ ವೈದ್ಯಕೀಯ ಸೇವೆ ಲಭ್ಯವಿರುವ ಆಸ್ಪತ್ರೆಗೆ ವರ್ಗಾಯಿಸಬೇಕು ಎಂದು ನಿಯೋಗ ಮನವಿ ಮಾಡಿತು. ಹೀಗೆ ಮಾಡದಿರುವುದು ಅವರಿಗೆ ಒಂದು ಘನತೆಯ ಬದುಕು, ಆರೋಗ್ಯರಕ್ಷಣೆ ಮತ್ತು ಇತರ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಹೇಳಿದೆ.

# ವಿಶ್ವವಿದ್ಯಾಲಯಗಳ ಸ್ವಾಯತ್ತತೆಗೆ ಭಂಗ ಬೇಡ

ಸಂಪಾದಕೀಯ

ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯಿದೆ 2000ಕ್ಕೆ ಪ್ರಮುಖ ತಿದ್ದುಪಡಿಗಳನ್ನು ಮಾಡುವ ಮಸೂದೆಯನ್ನು ರಾಜ್ಯ ಸರಕಾರ ವಿಧಾನ ಸಭೆಯಲ್ಲಿ ಮಂಡಿಸಿದೆ. ನೇಮಕಾತಿ ಮತ್ತು ಆಡಳಿತದ ಹಲವು ಅಧಿಕಾರಗಳನ್ನು ವಿ.ವಿ.ಗಳಿಂದ ಕಿತ್ತುಕೊಂಡು ಕೇಂದ್ರೀಕರಿಸುವ ದೂರಗಾಮಿ ಪರಿಣಾಮ ಬೀರುವ ಪ್ರಸ್ತಾವಗಳು ಮಸೂದೆಯಲ್ಲಿ ಇವೆ. ಇದನ್ನು ವಿ.ವಿ.ಗಳಲ್ಲಿ ವ್ಯಾಪಕವಾಗಿ ಹಬ್ಬಿರುವ ಭ್ರಷ್ಟಾಚಾರ ತಡೆಯಲು ಎಂದು ಹೇಳಲಾಗಿದೆ. ಈಗ 8 ಪ್ರತ್ಯೇಕ ವಿ.ವಿ. ಕಾಯಿದೆಗಳಿವೆ. ತಿದ್ದುಪಡಿ ಮಾಡಿ ಮಂಡಿಸಲಾಗುತ್ತಿರುವ ಈ ಮಸೂದೆ ರಾಜ್ಯದ ಎಲ್ಲಾ 17 ವಿ.ವಿ.ಗಳಿಗಾಗಿ ಒಂದು ಸಮಗ್ರ ಶಾಸನ ರಚಿಸುವುದಕ್ಕಾಗಿ ಮತ್ತು ಅಂಥ ವಿ.ವಿ.ಗಳನ್ನು ಸ್ಥಾಪಿಸುವಲ್ಲಿ ಜಾರಿಯಲ್ಲಿರುವ ಹಲವು ಅಧಿನಿಯಮಗಳನ್ನು ಬದಲಿಸಲು ಅವಕಾಶ ಕಲ್ಪಿಸುವುದಕ್ಕಾಗಿ ತರಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಅವರು ತಿಳಿಸಿದ್ದಾರೆ.

ವಿ.ವಿ.ಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳುವ ಈಗಿರುವ ಸ್ವಾಯತ್ತ ಅಧಿಕಾರವನ್ನು ಬದಲಾವಣೆ ಮಾಡಿ ಕೇಂದ್ರೀಕೃತ ವ್ಯವಸ್ಥೆ ಜಾರಿಗೊಳಿಸಲು ಮಸೂದೆಯಲ್ಲಿ ಉದ್ದೇಶಿಸಲಾಗಿದೆ. ವಿವಿಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಿಸಲು ಸರ್ಕಾರವೇ ಒಂದು ಸಾಮಾನ್ಯ ನೇಮಕಾತಿ ಮಂಡಳಿ ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ವಿಶ್ವವಿದ್ಯಾಲಯಗಳ ಬೋಧಕರನ್ನು ಇದುವರೆಗೆ ಅಯಾ ವಿಷಯ ತಜ್ಞರ ಸಮಿತಿ ಸಂದರ್ಶನ ನಡೆಸಿ, ಅರ್ಹರ ಹೆಸರನ್ನು ಸಿಂಡಿಕೇಟ್ ಸಭೆಗೆ ಶಿಫಾರಸು ಮಾಡುತ್ತಿತ್ತು. ಕೇಂದ್ರೀಕೃತ ನೇಮಕಾತಿ ವ್ಯವಸ್ಥೆ ನಂತರ, ಇದಕ್ಕಾಗಿ ತಜ್ಞರ ಸಮಿತಿ ರಚನೆ ಮಾಡಲು ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಯಾವ ವಿವಿಯಲ್ಲಿ ಎಷ್ಟು ಬೋಧಕರ ಅಗತ್ಯ ಇದೆ ಎಂಬುದನ್ನು ಸಂಬಂಧಪಟ್ಟ ವಿ.ವಿ.ಗಳು ಈ ಸಮಿತಿಗೆ ವರದಿ ಕಳುಹಿಸಬೇಕು. ನೇಮಕಾತಿಗಾಗಿ ರಚಿಯಿಸಲಾಗುವ ಈ ಕೇಂದ್ರೀಕೃತ ಸಮಿತಿಗೆ ಆ ವಿ.ವಿ. ಕುಲಪತಿಯೂ ಸದಸ್ಯರಾಗಿರುತ್ತಾರೆ. ನೇಮಕಾತಿ ಉದ್ದೇಶಕ್ಕೆ ಸಿದ್ಧಪಡಿಸಲಾದ ವಿಷಯ ತಜ್ಞರ ಪಟ್ಟಿ ಉನ್ನತ ಶಿಕ್ಷಣ ಇಲಾಖೆಯಲ್ಲಿ ಇರುತ್ತದೆ. ಚೀಟಿ ಎತ್ತುವ ಮೂಲಕ ಸಮಿತಿ ಸದಸ್ಯರ ಹೆಸರನ್ನು ಅಂತಿಮಗೊಳಿಸಲಾಗುತ್ತದಂತೆ.

ವಿ.ವಿ. ಕುಲಪತಿಗಳ ನೇಮಕದ ಶೋಧನಾ ಸಮಿತಿಯಲ್ಲೂ ಬದಲಾವಣೆ ಸೂಚಿಸಲಾಗಿದೆ. ಈ ಹಿಂದೆ ಯುಜಿಸಿ, ರಾಜ್ಯಪಾಲರು ಮತ್ತು ಸರ್ಕಾರದಿಂದ ಸೂಚಿತರಾದ ಮೂವರು ಸದಸ್ಯರಿರುತ್ತಿದ್ದರು. ಇದೀಗ ಆ ಸಂಖ್ಯೆಯನ್ನು ಐದಕ್ಕೆ ಏರಿಸಲು ಮುಂದಾಗಿರುವ ಸರ್ಕಾರ, ಸಮಿತಿಯಲ್ಲಿ ಒಬ್ಬ ಯುಜಿಸಿ, ಒಬ್ಬ ರಾಜ್ಯಪಾಲರು ಸೂಚಿಸಿದ ವ್ಯಕ್ತಿಗಳ ಜತೆಗೆ ಸರ್ಕಾರದ ಇಬ್ಬರು ಮತ್ತು ವಿವಿ ಸೂಚಿಸಿದ ಒಬ್ಬ ಪ್ರತಿನಿಧಿ ಇರಬೇಕು ಎಂದು ಹೇಳಿದೆ. ಕುಲಪತಿಯಾಗಿ ನೇಮಕಗೊಂಡವರು ನಾಲ್ಕು ವರ್ಷ – ಅವಧಿ ಇರಬೇಕು ಹಾಗೂ 67 ವರ್ಷ ತಲುಪಿದ ಬಳಿಕ ನಿವೃತ್ತರಾಗಬೇಕು. ಎರಡನೇ ಅವಧಿಗೆ ಮರುನೇಮಕಕ್ಕೆ ಅವಕಾಶ ಇರುವುದಿಲ್ಲ ಎಂದು ಹೇಳಲಾಗಿದೆ.

ವಿಶ್ವವಿದ್ಯಾಲಯವು ಕಾರ್ಯನಿರ್ವಾಹಕ ಪರಿಷತ್ ಮೂಲಕ ತನ್ನ ಪ್ರತಿನಿಧಿಯನ್ನು ಸೂಚಿಸುತ್ತದೆ. ಈ ಪರಿಷತ್ತಿನಲ್ಲಿ ಸರ್ಕಾರದಿಂದ ನಾಮನಿರ್ದೇಶನಗೊಂಡವರೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಈ ವ್ಯಕ್ತಿಯೂ ಸರ್ಕಾರದ ಪರವಾಗಿರುತ್ತಾನೆ. ಆಗ ಸರ್ಕಾರ ನಿರ್ಧರಿಸಿದವರೇ ಕುಲಪತಿ ಹುದ್ದೆಗೆ ಆಯ್ಕೆಯಾಗುವ ಸಾಧ್ಯತೆ ಹೆಚ್ಚಾಗಿದೆ. ಶೋಧನಾ ಸಮಿತಿಯಲ್ಲಿ ಕುಲಪತಿಗಳು, ಮಾಜಿ ಕುಲಪತಿಗಳು, ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಪ್ರಸಿದ್ಧ ಶಿಕ್ಷಣ ತಜ್ಞರು ಮಾತ್ರ ಇರುತ್ತಾರೆ ಎನ್ನುವ ಮೂಲಕ ಸರ್ಕಾರ ತನ್ನ ಈ ನಿರ್ಧಾರವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ವಿ.ವಿ, ಕುಲಪತಿ ದೀರ್ಘ ರಜೆ ಅಥವಾ ಪ್ರವಾಸ ಹೋದಾಗ, ಈಗಿನ ಪದ್ಧತಿಯಂತೆ ವಿ.ವಿ.ಯ ಹಿರಿಯ ಪ್ರೊಫೆಸರ್ ಇನ್–ಚಾರ್ಜ್ ಕುಲಪತಿ ಆಗಿರುವುದಿಲ್ಲ. ಇನ್ನೊಂದು ವಿ.ವಿ.ಯ ಕುಲಪತಿ ಅಧಿಕಾರ ವಹಿಸಿಕೊಳ್ಳಬೇಕಂತೆ!

ಕುಲಸಚಿವರ ನೇಮಕವನ್ನೂ ಸರ್ಕಾರ ತನ್ನ ಹಿಡಿತಕ್ಕೆ ತೆಗೆದುಕೊಳ್ಳಲಿದೆ. ಪ್ರಸ್ತುತ ರಾಜ್ಯಪಾಲರು ಕುಲಸಚಿವರನ್ನು ನೇಮಕ ಮಾಡುತ್ತಾರೆ. ಅಲ್ಲದೆ ಹಿರಿಯ ಬೋಧಕ ಸಿಬ್ಬಂದಿಯಿಂದಲೇ ಕುಲಸಚಿವರನ್ನು ಆರಿಸಲಾಗುತ್ತಿತ್ತು. ಆದರೆ ಮಸೂದೆಯಲ್ಲಿ ಐಎಎಸ್ ಮತ್ತು ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿಗಳು ಕುಲಸಚಿವರಾಗಬೇಕು ಎಂದು ಹೇಳುತ್ತದೆ.

ವಿ.ವಿ.ಗಳಲ್ಲಿ ಕೈಗೊಳ್ಳುವ ಕಾಮಗಾರಿಗೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಸಚಿವರ ನೇತೃತ್ವದಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಮಂಡಳಿ ರಚಿಸಲಾಗುತ್ತದೆ. ಒಂದು ಕೋಟಿ ರೂಪಾಯಿಗಿಂತ ಅಧಿಕ ಮೊತ್ತದ ಕಾಮಗಾರಿ ನಡೆಸಲು ಈ ಮಂಡಳಿಯ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ. ವಿಶ್ವವಿದ್ಯಾಲಯದಲ್ಲಿ ರೂ. 10 ಕೋಟಿಗೂ ಅಧಿಕ ಮೊತ್ತದ ಕಾಮಗಾರಿ ಕೈಗೊಳ್ಳಬೇಕಾದರೆ ಸಂಪುಟ ಸಭೆಯ ಅನುಮೋದನೆ ಪಡೆಯಬೇಕಾಗುತ್ತದೆ. ಅಂದರೆ, ಅಲ್ಲೂ ಸರ್ಕಾರ ಮಧ್ಯಪ್ರವೇಶಿಸಿದಂತಾಗುತ್ತದೆ. ಜತೆಗೆ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ವ್ಯವಹಾರ ನಿಯಮಗಳ ಅನುಸಾರ ಇಲ್ಲ ಅಥವಾ ರಾಜ್ಯ ಸರ್ಕಾರದ ಕಾರ್ಯನೀತಿಗೆ ವಿರುದ್ಧವಾಗಿದೆ ಎಂದಾದರೆ ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶ ಪ್ರಕಟಿಸಿ ವಿ.ವಿ.ಯ ತೀರ್ಮಾನವನ್ನು ರದ್ದುಗೊಳಿಸಬಹುದಾದ ಅಧಿಕಾರವನ್ನು ಸರ್ಕಾರ ತಾನೇ ಇಟ್ಟುಕೊಳ್ಳಲು ಮುಂದಾಗಿದೆ.

ವಿಶ್ವವಿದ್ಯಾಲಯದ ಆಗುಹೋಗುಗಳಲ್ಲಿ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸುವುದರ ಜತೆಗೆ, ಅಕಾಡೆಮಿಕ್ ಕೌನ್ಸಿಲ್ಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರನ್ನು ನಾಮನಿರ್ದೇಶನ ಮಾಡುವುದರ ಬದಲು, ಸರ್ಕಾರ ನಾಮನಿರ್ದೇಶನ ಮಾಡಲಿದೆ. ಇದು ಸಾಕಷ್ಟು ವಿವಾದಾಸ್ಪದವಾಗಲಿದೆ.

ಇವೆಲ್ಲ ಬದಲಾವಣೆಗಳ (ಅಥವಾ ಕೇಂದ್ರೀಕರಣಗಳ ಮತ್ತು ಅಧಿಕಾರಶಾಹೀಕರಣ ಎಂದರೆ ಹೆಚ್ಚು ಸರಿಯಾದೀತು) ಒಟ್ಟು ಪರಿಣಾಮವೆಂದರೆ ವಿ.ವಿ.ಯನ್ನು ಸರಕಾರದ ಉನ್ನತ ಶಿಕ್ಷಣ ಸಚಿವಾಲಯದ ಒಂದು ಇಲಾಖೆಯಂತೆ ನಡೆಸಲು ಹೊರಟಿದೆ. ವಿ.ವಿ.ಯ ಸ್ವಾಯತ್ತತೆ ಹೆಚ್ಚು ಕಡಿಮೆ ಪೂರ್ಣವಾಗಿ ಮಾಯವಾಗಿರುತ್ತದೆ. ವಿ.ವಿಯಲ್ಲಿ ಈಗ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸಿಬ್ಬಂದಿಯ ಗುಣಮಟ್ಟ ಸಹ ಕಳಪೆಯಾಗಿದೆ, ಎಂಬುದು ನಿಜ. ಕಾಮಗಾರಿಗಳಲ್ಲೂ ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆಯುತ್ತಿದೆ. ಆದರೆ ಕೇಂದ್ರೀಕರಣ ಇದಕ್ಕೆ ಪರಿಹಾರವೇ? ಈಗ ಕೇಂದ್ರೀಕೃತವಾಗಿ ನಡೆಯುತ್ತಿರುವ ಕುಲಪತಿಗಳ ನೇಮಕಾತಿಯಲ್ಲಿ ಅತ್ಯಂತ ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ ನಡೆಯುತ್ತಿಲ್ಲವೇ? ವಿ.ವಿ.ಗಳಲ್ಲಿ ಕೆಳಗಿನ ಹಂತಗಳ ನೇಮಕಾತಿ ಹಾಗೂ ಕಾಮಗಾರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಇದು ಮೂಲವೂ ಆಗಿರುವ ಸಾಧ್ಯತೆ ಇದೆ. ಅತ್ಯಂತ ಕೇಂದ್ರೀಕೃತವಾಗಿ ನೇಮಕಾತಿ ನಡೆಸುವ ಕೆ.ಪಿ.ಎಸ್.ಸಿ. ಯಲ್ಲಿ ಅತ್ಯಂತ ಹೆಚ್ಚು ಭ್ರಷ್ಟಾಚಾರ ಇಲ್ಲವೇ? ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳಲ್ಲಿ ಭ್ರಷ್ಟಾಚಾರ, ಕಾರ್ಯ ನಿರ್ವಹಣೆಯ ಕಳಪೆ ಗುಣಮಟ್ಟ ಇಲ್ಲವೇ? ಆದ್ದರಿಂದ ಈ ಕೇಂದ್ರೀಕರಣಗಳ ಬದಲಾವಣೆಗಳು ಭ್ರಷ್ಟಾಚಾರ ಮತ್ತು ಕಳಪೆ ಗುಣಮಟ್ಟಕ್ಕೆ ಪರಿಹಾರ ಆಗಲಾರವು. ವಿ.ವಿ,ಯ ಸ್ವಾಯತ್ತತೆಗೆ ಭಂಗ ತರುವುದಲ್ಲದೆ, ತೀವ್ರ ಬರಡು ಅಧಿಕಾರಶಾಹಿಕರಣವನ್ನೂ ಮಾಡಲಿದೆ.

ಸಮಾಜದ ಸೃಜನಾತ್ಮಕ ಯೋಚನೆಗಳ ಹುಟ್ಟುತಾಣವಾಗಬೇಕಾದ ವಿಶ್ವವಿದ್ಯಾಲಯಗಳ ಸ್ವಾಯತ್ತತೆಯ ಹರಣ ಮಾಡುವ ಮತ್ತು ಬರಡು ಅಧಿಕಾರಶಾಹಿಕರಣಗೊಳಿಸುವ ಈ ತಿದ್ದುಪಡಿಗಳನ್ನು ಸರಕಾರ ತಕ್ಷಣ ಹಿಂತೆಗೆದುಕೊಳ್ಳಬೇಕು.

# ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕೋಮುಗಲಭೆಗೆ ಸಂಘ ಪರಿವಾರದ ಹುನ್ನಾರ – ವಸಂತ ಆಚಾರಿ

ದಕ್ಷಿಣ ಕನ್ನಡ ಜಿಲ್ಲೆ ಕೋಮುಗಲಭೆಯಲ್ಲಿ ನಲುಗಿ ಹೋಗುತ್ತಿದೆ. ಚುನಾವಣೆ ಹತ್ತಿರ ಬರುತ್ತಿರುವ ಕಾರಣಕ್ಕೆ ಈ ರೀತಿಯ ಗಲಭೆಗಳನ್ನು ಸೃಷ್ಟಿಸಲಾಗುತ್ತಿದೆ. ರಾಜ್ಯ ಸರಕಾರದ ಬೇಜವಾಬ್ದಾರಿ ವರ್ತನೆಗಳು ಕೂಡಾ ಇದಕ್ಕೆ ಕಾರಣವಾಗಿದೆ. ಹಲವಾರು ಬಾರಿ ಗಲಭೆಗಳು ನಡೆಯುತ್ತಿರುವಾಗ ಅದರಲ್ಲಿ ಪಾಲ್ಗೊಳ್ಳುವ ರೌಡಿಗಳು ಹಾಗೂ ಅದಕ್ಕೆ ಪ್ರಚೋದನೆ ಕೊಡುತ್ತಿರುವ ಸಂಘಿಗಳ ಮಾಹಿತಿಗಳು ಲಭ್ಯ ಇರುತ್ತವೆ. ಅವರನ್ನು ಜೈಲಿಗೆ ತಳ್ಳುವ ಕೆಲಸ ಆಗಬೇಕು. ಅದು ಆಗುತ್ತಿಲ್ಲ. ಆರೋಪಿಗಳು ರಾಜಾರೋಷವಾಗಿ ಕೃತ್ಯಗಳನ್ನು ಮಾಡುತ್ತಲೇ ಇದ್ದಾರೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯ ಜನಿರೋಧಿ ಆಡಳಿತದಿಂದ ಬೇಸತ್ತ ಜನತೆ 8 ಕ್ಷೇತ್ರಗಳ ಪೈಕಿ 7 ರಲ್ಲಿ ಕಾಂಗ್ರೆಸ್ಸನ್ನು ಗೆಲ್ಲಿಸಿದೆ. ಆದರೆ 2018ರ ಚುನಾವಣೆಯಲ್ಲಿ 8 ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಈಗಾಗಲೇ ಪ್ರತೀ ಕ್ಷೇತ್ರವಾರು ಹಿಂದೂ ಸಮಾಜೋತ್ಸವ, ರಾಮಯಾಗ, ಸತ್ಯನಾರಾಯಣ ಪೂಜೆ, ಶನಿಪೂಜೆಗಳನ್ನು ಮಾಡಿಕೊಂಡು ಧಾರ್ಮಿಕ ಸಭೆಗಳ ಹೆಸರಿನಲ್ಲಿ ಸಂಘ ಪರಿವಾರದ ಮುಂದಾಳುಗಳು ಪ್ರಚೋದನಾತ್ಮಕ ಭಾಷಣ ಮಾಡುತ್ತಿದ್ದಾರೆ. ಹಿಂದುಗಳಿಗೆ ಅನ್ಯಾಯವಾದರೆ ನಾವು ಸಹಿಸುವುದಿಲ್ಲ. ಹಿಂದೂ ಧರ್ಮ ಅಪಾಯದಲ್ಲಿದೆ ಎಂಬ ರೀತಿ ತಾವು ಎಂಎಲ್ಎ, ಎಂಪಿಯನ್ನು ಪಡೆಯಬೇಕೆಂಬ ನಿರೀಕ್ಷೆಯಲ್ಲಿ ಭಾಷಣಗಳನ್ನು ಮಾಡಲಾಗುತ್ತಿದೆ.

ಕಳೆದ ತಿಂಗಳ 26 ರಂದು ಕಲ್ಲಡ್ಕ ಮಸೀದಿಯಿಂದ ಮನೆಗೆ ತೆರಳುತ್ತಿದ್ದ ಮಹಮ್ಮದ್ ಹಾಶೀರ್ ಮತ್ತು ಇಬ್ಬರು ಯುವಕರ ಮೇಲೆ ಹಿಂದೂತ್ವ ಮತ್ತು ಕ್ರಿಮಿನಲ್ ಹಿನ್ನೆಲೆಯ ಮಿಥುನ್ ಮತ್ತು ಆತನ ತಂಡ ಚೂರಿಯಿಂದ ಇರಿದ ಘಟನೆಯ ಬಳಿಕ ಕಲ್ಲಡ್ಕ ಹಾಗೂ ಪರಿಸರದಲ್ಲಿ ಭಯಾನಕ ವಾತಾವರಣ ಸೃಷ್ಟಿಯಾಗಿತ್ತು. ದಾರಿ ಹೋಕರ ಮೇಲೆ ರಸ್ತೆಯಲ್ಲಿ ಪ್ರಯಾಣ ನಡೆಸುವ ಮುಸ್ಲಿಮರ ಮೇಲೆ ಮಾರಣಾಂತಿಕ ಹಲ್ಲೆಗಳನ್ನು ನಡೆಸಿ ಪರಾರಿಯಾಗುವುದು ನಡೆದಿತ್ತು. ಅಂದಿನಿಂದ ಕಲ್ಲಡ್ಕ ಹಾಗೂ ಬಂಟ್ವಾಳ ಪರಿಸರದಲ್ಲಿ ಸೆಕ್ಷನ್ 144ರ ಅಡಿ ನಿಷೆದಾಜ್ಞೆಯಲ್ಲಿ ಜನ ಬದುಕುತ್ತಿದ್ದಾರೆ. ಇನ್ನೂ ಕಲ್ಲಡ್ಕ ಪರಿಸರ ಸಾಮಾನ್ಯ ಪರಿಸ್ಥಿತಿಗೆ ಬಂದಿಲ್ಲ. ಈ ಮಧ್ಯೆ ಕಲ್ಲಡ್ಕ ಪ್ರಭಾಕರ ಭಟ್ ಮಂಗಳೂರಿನಿಂದ ಪತ್ರಿಕಾಗೋಷ್ಠಿ ಮಾಡಿ ಕ್ರಿಮಿನಲ್ ಕೃತ್ಯ ಎಸಗಿದವರು ಜೀವರಕ್ಷಣೆಗಾಗಿ ಚೂರಿ ಇರಿತ ಮಾಡಿದ್ದು ಎಂದು ಸಮರ್ಥಿಸಿ ಹೇಳಿಕೆ ನೀಡಿದರು. ಸಕ್ರಿಯ ಪೋಲೀಸ್ ಎಸ್.ಪಿ.ಯವರನ್ನು ನಾಲಾಯಕ್ ಪೋಲೀಸ್ ಅಧಿಕಾರಿ ಎಂದು ಗೇಲಿ ಮಾಡಿದರು. ಇದನ್ನು ಮಾಧ್ಯಮಗಳು ದೊಡ್ಡದಾಗಿ ಪ್ರಚಾರ ನೀಡಿದವು.

ನಿಷೇದಾಜ್ಞೆಯ ನಡುವೆ ಜೂನ್ 13ರಂದು (ಮಂಗಳವಾರ) ಕಲ್ಲಡ್ಕದಲ್ಲಿ ಇಬ್ರಾಹಿಂ ಖಲೀಲ್ ಎಂಬ ಯುವಕನೋರ್ವನಿಗೆ ತಂಡವೊಂದು ಚೂರಿಯಿಂದ ಇರಿದು ಪರಾರಿಯಾಯಿತು. ಚೂರಿ ಇರಿತಕ್ಕೊಳಗಾದ ವ್ಯಕ್ತಿ ಹಿಂದೆ ಬಿ.ಸಿ.ರೋಡಿನ ಕೆ.ಸಿ.ರೋಡಿನಲ್ಲಿ ಬೈಕೊಂದು ಅಪಘಾತಕ್ಕೀಡಾಗಿ ಇಬ್ಬರು ಗಾಯಗೊಂಡಿದ್ದಾಗ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆ ಸಂದರ್ಭದಲ್ಲಿ ಕಲ್ಲಡ್ಕದ ಸಂಘಪರಿವಾರದ ಹಿಂದೂ ಜಾಗರಣ ವೇದಿಕೆಯ ತಾಲೂಕು ಅಧ್ಯಕ್ಷ ರತ್ನಾಕರ ಶೆಟ್ಟಿ ಆತನೊಂದಿಗೆ ಕ್ಷುಲ್ಲಕ ಕಾರಣಕ್ಕೆ ಜಗಳ ಕೆರೆದು ಗಲಾಟೆ ಸೃಷ್ಟಿಸಿದ್ದ. ಬಳಿಕ ಖಲೀಲ್ ಇಫ್ತಾರ್‌ಗೆ ಹಣ್ಣು ಹಂಪಲು ಖರೀದಿಸಲು ಕಲ್ಲಡ್ಕ ಪೇಟೆಗೆ ಬಂದಿದ್ದಾಗ, ಅದೇ ಜಗಳ ಮುಂದುವರೆಸುತ್ತಾ ಕಾರಿನಲ್ಲಿ ಬಂದ ರತ್ನಾಕರ ಶೆಟ್ಟಿ, ರವಿ ಭಂಡಾರಿ ಹಗೂ ತಂಡ ಚೂರಿಯಿಂದ ದಾಳಿ ನಡೆಸಿ ಅದೇ ಕಾರಿನಲ್ಲಿ ಪರಾರಿಯಾಗಿದ್ದಾರೆ.

ಚೂರಿ ಇರಿತದ ಸುದ್ದಿ ಹರಡುತ್ತಿದ್ದಂತೆ ಕಲ್ಲಡ್ಕ ಪೇಟೆಯಲ್ಲಿ ಎರಡು ಕೋಮಿನ ನೂರಾರು ಯುವಕರು ಜಮಾಯಿಸಿದ್ದಲ್ಲದೆ ಪರಸ್ಪರ ಕಲ್ಲು ತೂರಾಟ ನಡೆಸಿದ್ದಾರೆ. ಕಲ್ಲು ತೂರಾಟದಿಂದ

**ಪುಟ 4 ಕ್ಕೆ**

# ಜಪ್ಪಿನಮೊಗರು ರಸ್ತೆ ಗಿಡ ನೆಡಲು ಯೋಗ್ಯ : ಬಜಾಲ್

ಜಪ್ಪಿನಮೊಗರು ವಾರ್ಡಿನ ಪ್ರಮುಖ ರಸ್ತೆಯು ತೀರಾ ದುರವಸ್ಥೆಯಲ್ಲಿದ್ದು, ಕಳೆದ 25 ವರ್ಷಗಳಿಂದ ನಿರಂತರವಾಗಿ ಹೋರಾಟ ನಡೆಸಿಕೊಂಡು ಬರಲಾಗಿದೆ. ಸಿಪಿಐ(ಎಂ)ನ ಸತತ ಒತ್ತಡದ ಫಲವಾಗಿ 1996ರಲ್ಲಿ ಈ ರಸ್ತೆಗೆ ಡಾಮರೀಕರಣ ಮಾಡಲಾಗಿತ್ತು. ಆ ಬಳಿಕ ಇಂದಿನವರೆಗೆ ತೇಪೆ ಕಾರ್ಯ ಬಿಟ್ಟರೆ ಜಪ್ಪಿನಮೊಗರು ಪ್ರದೇಶದ ಪ್ರಮುಖ ರಸ್ತೆಗೆ ಇನ್ನೂ ಕಾಯಕಲ್ಪ ನೀಡಲು ಸಾಧ್ಯವಾಗಿಲ್ಲ. ಇಲ್ಲಿ ಕಳೆದ 3 ಬಾರಿ ಕಾಂಗ್ರೆಸ್ ಹಾಗೂ ಪ್ರಸ್ತುತ ಬಿಜೆಪಿ ಕಾರ್ಪೋರೇಟರ್ ಗೆದ್ದಿದ್ದರೂ ರಸ್ತೆ ಅಭಿವೃದ್ಧಿಗೆ ಗಮನ ನೀಡದೆ ಪೂರ್ತಿ ನಿರ್ಲಕ್ಷ್ಯ ಮಾಡಲಾಗಿದೆ. ಹೀಗೆ ಜಪ್ಪಿನಮೊಗರು ರಸ್ತೆಯು ಗಿಡ ನೆಡಲು ಸೂಕ್ತವಾಗಿದೆಯೇ ಹೊರತು, ನಡೆದಾಡಲು ಸಾಧ್ಯವಿಲ್ಲ. ಕಾಂಗ್ರೆಸ್ ಬಿಜೆಪಿಯ ಒಳಜಗಳ ಹಾಗೂ ಸ್ವಾರ್ಥದಿಂದಾಗಿ ಜಪ್ಪಿನಮೊಗರು ರಸ್ತೆಯು ತೀರಾ ಬಡವಾಗಿದೆ. ರಸ್ತೆ ಅಭಿವೃದ್ಧಿಗೆ ಲಕ್ಷ ಕೋಟಿ ರೂಪಾಯಿ ಹಣ ಬಿಡುಗಡೆಗೊಂಡಿದೆ ಎಂದು ನಳಿನ್‌ಕುಮಾರ್ ಕಟೀಲು ಹಾಗೂ ಜೆ.ಆರ್. ಲೋಬೋರವರ ಕಟೌಟ್ ಹಾಕಲಾಗಿತ್ತು. ಈ ಬಗ್ಗೆ ಮನಪಾದಲ್ಲಿ ವಿಚಾರಿಸಿದರೆ ಗೊತ್ತೇ ಇಲ್ಲ ಎಂದು ಹೇಳಲಾಗಿತ್ತು. ಒಟ್ಟಿನಲ್ಲಿ ಕಾಂಗ್ರೆಸ್ ಬಿಜೆಪಿ ಜೊತೆ ಸೇರಿ ಜಪ್ಪಿನಮೊಗರು ಪ್ರದೇಶದ ನಾಗರಿಕರಿಗೆ ತೀರಾ ಅನ್ಯಾಯವೆಸಗಿದೆ. ರಸ್ತೆ ಅಭಿವೃದ್ಧಿಯು ಮೂಲಭೂತ ಸೌಕರ್ಯಗಳಲ್ಲಿ ಒಂದಾಗಿದ್ದು, ಅದನ್ನೇ ಸರಿಪಡಿಸಲಾಗದ ಕಾಂಗ್ರೆಸ್-ಬಿಜೆಪಿಗೆ ಊರಿನ ಅಭಿವೃದ್ಧಿಯ ಬಗ್ಗೆ ಮಾತನಾಡಲು ನೈತಿಕತೆ ಇದೆಯೇ? ಎಂದು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್‌ರವರು ಪ್ರಶ್ನಿಸಿದರು.

ಅವರು ಜೂನ್ 14ರಂದು ಜಪ್ಪಿನಮೊಗರು ಪ್ರದೇಶದ ಪ್ರಮುಖ ರಸ್ತೆಯು ತೀರಾ ಹದಗೆಟ್ಟಿದ್ದು, ಕೂಡಲೇ ಕಾಂಕ್ರೀಟೀಕರಣಗೊಳಿಸಬೇಕೆಂದು ಸಿಪಿಐ(ಎಂ) ಮತ್ತು ಡಿವೈಎಫ್ಐ ಬಜಾಲು ವಿಭಾಗ ಸಮಿತಿಗಳ ಜಂಟಿ ನೇತೃತ್ವದಲ್ಲಿ ಹೊಂಡ-ಗುಂಡಿಗಳಿಂದ ಕೂಡಿದ ಇದೇ ರಸ್ತೆಯಲ್ಲಿ ಗಿಡ ನೆಡುವ ಮೂಲಕ ವಿನೂತನ ರೀತಿಯ ಪ್ರತಿಭಟನೆಯನ್ನು



ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು.

ಸಿಪಿಐ(ಎಂ)ನ ರಾಜ್ಯ ನಾಯಕರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, ಜಪ್ಪಿನಮೊಗರು ವಾರ್ಡ್ ಅಭಿವೃದ್ಧಿಗೆ ಸಿಪಿಐ(ಎಂ) ನಿರಂತರ ಗಮನ ಹರಿಸಿದ ಫಲವಾಗಿ ರಸ್ತೆ, ನೀರು, ಬಸ್ಸ್ ಸೇರಿದಂತೆ ಹಲವಾರು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿತ್ತು. ಆದ-ರೆ ಕಳೆದ ಎರಡು ದಶಕಗಳಲ್ಲಿ ಕಾಂಗ್ರೆಸ್-ಬಿಜೆಪಿ ಊರಿನ ಅಭಿವೃದ್ಧಿಗೆ ಎಳ್ಳಷ್ಟು ಗಮನ ನೀಡಿಲ್ಲ. ಇದಕ್ಕೆ ಜಪ್ಪಿನಮೊಗರುವಿನ ಪ್ರಮುಖ ರಸ್ತೆಯ ದುರಾವಸ್ಥೆಯೇ ಪ್ರಮುಖ ಸಾಕ್ಷಿ ಎಂದು ಕಿಡಿ-ಕಾರಿದರು.

ಡಿವೈಎಫ್ಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್‌ರವರು, ಮಂಗಳೂರನ್ನು ಸ್ಮಾರ್ಟ್ ಸಿಟಿ ಮಾಡಲು ಹೊರಟ ಕಾಂಗ್ರೆಸ್ ಆಡಳಿತಕ್ಕೆ ಕನಿಷ್ಠ ಪಕ್ಷ ಪ್ರಮುಖ ರಸ್ತೆಗಳನ್ನೇ ಸರಿಪಡಿಸಲು ಸಾಧ್ಯವಾಗಿಲ್ಲ. ಜಪ್ಪಿನಮೊಗರು ಪ್ರದೇಶದ ರಸ್ತೆ ಹೊಂಡ-ಗುಂಡಿಗಳಿಂದ ಕೂಡಿದ್ದು ನಡೆದಾಡಲು ಹಾಗೂ ವಾಹನ ಸಂಚಾರಕ್ಕೆ ಸಾಧ್ಯವಿಲ್ಲದಾಗಿದೆ. ಇಂತಹ ರಸ್ತೆಯನ್ನು ಕೂಡಲೇ ಸರಿಪಡಿಸದಿದ್ದಲ್ಲಿ ಸ್ಥಳೀಯ ಕಾರ್ಪೊರೇಟರ್ ಹಾಗೂ ನಗರ ಪಾಲಿಕೆ ತೀವ್ರ ಪರಿಣಾಮವನ್ನು ಎದುರಿಸಬೇಕಾದೀತು ಎಂದು ಎಚ್ಚರಿಕೆ ನೀಡಿದರು.

ಜಪ್ಪಿನಮೊಗರು ಸಿಪಿಐ(ಎಂ)ನ ಹಿರಿಯ ಮುಖಂಡರಾದ ಚಂದ್ರಹಾಸ್ ಜೆ.ಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ಮಂಗಳೂರು ನಗರ ಮುಖಂಡರಾದ ಸುರೇಶ್ ಬಜಾಲ್, ಜಯಂತಿ ಬಿ. ಶೆಟ್ಟಿ, ಪ್ರೇಮನಾಥ ಜಲ್ಲಿಗುಡ್ಡೆ ಭಾಗವಹಿಸಿದರು. ಹೋರಾಟದ ನೇತೃತ್ವವನ್ನು ಸಿಪಿಐ(ಎಂ) ಜಪ್ಪಿನಮೊಗರು ಪ್ರದೇಶದ ಮುಖಂಡರಾದ ದಿನೇಶ್ ಶೆಟ್ಟಿ, ಮನೋಜ್ ಶೆಟ್ಟಿ, ದಿನೇಶ್ ಅಂಚನ್, ಜಯಲಕ್ಷ್ಮಿ, ಗಿರಿಜಾ, ಡಿವೈಎಫ್ಐ ಮುಖಂಡರಾದ ಪವನ್ ಸುಲಾಯ, ಕೌಶಿಕ್ ಶೆಟ್ಟಿ, ರಿತೇಶ್ ಬಜಾಲ್, ದೀಪಕ್ ಬಜಾಲ್ ಮುಂತಾದವರು ವಹಿಸಿದ್ದರು.

**– ಸುರೇಶ್ ಬಜಾಲ್**

# ಸಿಐಟಿಯುನಿಂದ ಬಡಮಕ್ಕಳಿಗೆ ಪುಸ್ತಕ ವಿತರಣೆ

ಪ್ರತಿಯೊಂದು ದೇಶದ ಅಭಿವೃದ್ಧಿಯು ಆ ದೇಶವು ಶಿಕ್ಷಣ ಮತ್ತು ಉದ್ಯೋಗಕ್ಕೆ ನೀಡಿರುವ ಪ್ರಾಮುಖ್ಯತೆಯ ಆಧಾರದಲ್ಲಿ ನಿಂತಿದೆ. ಅದೇ ರೀತಿ ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲೂ ಶಿಕ್ಷಣ ಭಾರೀ ಮಹತ್ವ ಪಡೆದಿದೆ. ಶಿಕ್ಷಣದ ಪಡೆ ಯದೆ ಇದ್ದರೆ ಜೀವನದಲ್ಲಿ ಸಾರ್ಥಕತೆ ಇಲ್ಲ. ಶಿಕ್ಷಣ ಸಾರ್ವತ್ರೀಕರಣಗೊಳ್ಳಬೇಕು, ಎಲ್ಲರಿಗೂ ಉಚಿತ ಕಡ್ಡಾಯ ಶಿಕ್ಷಣ ಸಿಗಬೇಕು, ಶಿಕ್ಷಣದ ಹಕ್ಕು ಮೂಲಭೂತ ಹಕ್ಕಾಗಬೇಕೆಂದಿದ್ದರೂ ಪ್ರಸ್ತುತ ಪರಿಸ್ಥಿತಿಯಲ್ಲಿ ಶಿಕ್ಷಣವೆಂಬುದು ಮಾರಾಟದ ಸರಕಾಗಿದೆ. ಹಣವುಳ್ಳವರಿಗೆ ಶಿಕ್ಷಣ, ಇಲ್ಲದವರಿಗೆ ಭಿಕ್ಷಾನ್ನ ಎಂಬಂತೆ ದೇಶದಲ್ಲಿ ವಾಸ್ತವ ಚಿತ್ರಣವಿದೆ. ಇದರಿಂದ ಲಕ್ಷಾಂತರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ, ಭವಿಷ್ಯದ ಹರಿಕಾರರಾಗಬೇಕಾದ ಮಕ್ಕಳ ಬದುಕು ತೀರಾ ದುಸ್ತರವಾಗಿದೆ ಎಂದು ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಅಭಿಪ್ರಾಯಪಟ್ಟರು.



ಅವರು ನಗರದಲ್ಲಿ ಸಿಐಟಿಯು ಸಂಯೋಜಿತ ಬೀದಿಬದಿ ವ್ಯಾಪಾರಸ್ಥರ ಸಂಘ, ಹಮಾಲಿ ಕಾರ್ಮಿಕರ ಸಂಘ, ಆಟೋರಿಕ್ಷಾ ಚಾಲಕರ ಸಂಘಗಳ ಜಂಟಿ ಆಶ್ರಯದಲ್ಲಿ ಆರ್ಥಿಕವಾಗಿ ಹಿಂದುಳಿದ ಬಡವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡುತ್ತಾ, ಈ ಮಾತುಗಳನ್ನು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕ.ರಾ. ಸ. ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಪ್ರಕಾಶ್ ನಾಯಕ್‌ರವರು ಮಾತನಾಡುತ್ತಾ, ಶೈಕ್ಷಣಿಕವಾಗಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವ ಮೂಲಕ ದೇಶದ ಹಿರಿಮೆಯನ್ನು ಬಾನೆತ್ತರಕ್ಕೆ ಕೊಂಡೊಯ್ಯಬೇಕೆಂದು ಶುಭ ಹಾರೈಸಿದರು. ವೇದಿಕೆಯಲ್ಲಿ ಕೋರ್ಟ್ ವಾರ್ಡ್ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ಕ್ರೀನಿ ಪರ್ಸಿ ಆನಂದ್, ಶಾಲಾ ಮಕ್ಕಳ ವಾಹನ ಚಾಲಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಅನ್ಸಾರ್, ಬೀದಿಬದಿ ವ್ಯಾಪಾರಸ್ಥರ ಸಂಘದ ಜಿಲ್ಲಾಧ್ಯಕ್ಷರಾದ ಮುಹಮ್ಮದ್ ಮುಸ್ತಫಾ, ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್ ಆರ್.ಎಸ್., ಹಮಾಲಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ಅಹಮ್ಮದ್ ಬಾವ, ಆಟೋರಿಕ್ಷಾ ಚಾಲಕರ ಸಂಘದ ನಗರ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಇರ್ಫಾನ್‌ರವರು ಉಪಸ್ಥಿತರಿದ್ದರು.

**ಸಂತೋಷ್ ಕುಮಾರ್ ಆರ್.ಎಸ್.**

## ಕೋಮುಗಲಭೆಗೆ ಸಂಘ ಪರಿವಾರದ ಹುನ್ನಾರ...... ಪುಟ 3 ರಿಂದ

ಕಲ್ಲಡ್ಕ ಜಮಾ ಮಸೀದಿಯ ಕಿಟಕಿ ಗಾಜುಗಳು ಪುಡಿಯಾಗಿವೆ. ಹಲವು ಅಂಗಡಿಗಳಿಗೆ, ಖಾಸಗಿ ಹಾಗೂ ಪೋಲೀಸ್ ವಾಹನಗಳಿಗೆ ಹಾನಿಯಾಗಿವೆ, ಹಲವರಿಗೆ ಗಾಯಗಳಾಗಿವೆ. ಪೋಲೀಸರ ವಾಹನವಿದ್ದರೂ ಮೂಕ ಪ್ರೇಕ್ಷಕರಾಗಿ ಘಟನೆಯನ್ನು ನೋಡುತ್ತಿದ್ದರೇ ವಿನಹ ಮೇಲಾಧಿಕಾರಿಗಳ ಲಭ್ಯತೆ ಇಲ್ಲದ ಕಾರಣ ಏನೂ ಮಾಡದ ಸ್ಥಿತಿ. ಕೊನೆಗೆ ಸ್ಥಳಕ್ಕೆ ದಾವಿಸಿದ ಮೇಲಧಿಕಾರಿಗಳು, ಅವರ ನಿರ್ದೇಶನದ ಮೇರೆಗೆ ಲಾಠಿ ಪ್ರಹಾರ ನಡೆಸಿ ಪರಿಸ್ಥಿತಿ ಹತೋಟಿಗೆ ತರಲಾಯಿತು. ಈಗಲೂ ಬೂದಿ ಮುಚ್ಚಿದ ಕೆಂಡದಂತೆ ಕಲ್ಲಡ್ಕ ಹಾಗೂ ಪರಿಸರ ಇದೆ. ಫೇಸ್‌ಬುಕ್, ವಾಟ್ಸಾಪ್‌ನಲ್ಲಿ ಸುದ್ದಿಗಳು, ಚಿತ್ರಗಳು ಹರಿದಾಡುತಿವೆ.

ಬಂಟ್ವಾಳದ ಕಲ್ಲಡ್ಕ ಎಂಬುದು ಪ್ರಸಿದ್ಧ ಕೋಮುಗಲಭೆಗಳ ಸೃಷ್ಟಿಕರ್ತ ಕಲ್ಲಡ್ಕ ಪ್ರಭಾಕರ ಭಟ್ ಕಾರ್ಯಸ್ಥಾನ. ಆತನ ಶಿಷ್ಯ ನಳಿನ್ ಕುಮಾರ್ ಕಟೀಲ್ ಸಂಸತ್ ಸದಸ್ಯನಾಗಿದ್ದು ಭಟ್ ಕೃತ್ಯಗಳಿಗೆ ಬೆಂಗಾವಲಾಗಿ ಪ್ರತಿಭಟನಾ ಸಭೆ, ಅಧಿಕಾರಿಗಳಿಗೆ ಮನವಿ, ಉಗ್ರಹೇಳಿಕೆಯನ್ನು ಪತ್ರಿಕಾಗೋಷ್ಠಿಗಳ ಮುಖಾಂತರ ನೀಡುವುದು ನಡೆಸುತ್ತಲೇ ಇರುತ್ತಾ-ರೆ. ಈಗ ಮಾಡುವುದೆಲ್ಲ ಮಾಡಿಬಿಟ್ಟು ಜಿಲ್ಲಾ ಎಸ್ಪಿ ಭೂಷಣ್ ಜಿ ಬೊರಸೆಯವರನ್ನು ಭೇಟಿಯಾಗಿ ಮನವಿಯನ್ನು ಸಲ್ಲಿಸಿರುತ್ತಾರೆ. ಉತ್ತರ ಕನ್ನಡದ ಸಂಸದ ಅನಂತ ಕುಮಾರ್ ಹೆಗಡ್ ಕೂಡಾ ಸಾಥ್ ನೀಡಿದ್ದಾರೆ. ಕಲ್ಲಡ್ಕ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ. ಕೋಮುವಾದಿಗಳು ಯಾವ ರೀತಿ ತಮ್ಮ ಚಾಕಚಕ್ಯತೆ ಮೆರೆಯುತ್ತಾರೆ ಎಂಬುದು ಇಲ್ಲಿ ಅರ್ಥೈಸಬಹುದಾಗಿದೆ.

ಕಲ್ಲಡ್ಕ ಘಟನೆಯ ಬಳಿಕ ಮಂಗಳವಾರ ತಡರಾತ್ರಿ ವೇಳೆ ಬಂಟ್ವಾಳದ ಮೆಲ್ಕಾರ್ ಜಂಕ್ಷನ್‌ನಲ್ಲಿ ಪವಾನ್ ಕುಮಾರ್ ಎಂಬ ಯುವಕನ ಮೇಲೆ ಚೂರಿ ಇರಿತ ಕೂಡಾ ಆಗಿದೆ. ಅದು ವೈಯಕ್ತಿಕ ದ್ವೇಷದಿಂದ ಆಗಿದೆ ಎಂದು ಪೋಲೀಸರು ಹೇಳಿಕೆ ನೀಡಿದ್ದಾರೆ. ಆದರೆ ಕೋಮುಗಲಭೆಗೆ ಈ ಘಟನೆಯನ್ನು ಕೂಡಾ ಎಳೆದು ತರುವ ಪ್ರಯತ್ನ ನಡೆದಿದೆ.

ಚೂರಿ ಇರಿತ ಪ್ರಕರಣದ ಬಳಿಕ ಪೇಟೆಯಲ್ಲಿ ಉಂಟಾದ ಹಠಾತ್ ಘರ್ಷಣೆ ವೇಳೆ ಸಂಘ ಪರಿವಾರದ ಕ್ರಿಮಿನಲ್ ಗುಂಪು ಇಲ್ಲಿನ ರಾಮ ಮಂದಿರದ ಮೇಲ್ಭಾಗದಿಂದ ನೇರವಾಗಿ ಕಲ್ಲಡ್ಕ ಮಹಿಯುದ್ದೀನ್ ಜಮಾ ಮಸೀದಿ ಹಾಗೂ ಮದ್ರಸಕ್ಕೆ ಕಲ್ಲು ಹಾಗೂ ಬಾಟ್ಲಿ ತೂರಾಟ ನಡೆಸಿದ ಪರಿಣಾಮ ಮಸೀದಿ ಮತ್ತು ಮದರಸಕ್ಕೆ ಹಾನಿ ಸಂಭವಿಸಿದೆ. ಕಿಟಕಿಗಳ ಗಾಜು ಪುಡಿಯಾಗಿವೆ. ಹಂಚು ಪುಡಿಯಾಗಿದೆ, ನೀರಿನ ಟ್ಯಾಂಕಿಗೂ ಹಾನಿಯಾಗಿದೆ. ಇದು ಕೋಮುಗಲಭೆಯನ್ನು ವ್ಯಾಪಕಗೊಳಿಸುವ ಹುನ್ನಾರವಾಗಿ ನಡೆದಿದೆ.

ಬಂಟ್ವಾಳ, ಪುತ್ತೂರು, ಬೆಳ್ತಂಗಡಿ ಸುಳ್ಯ ತಾಲೂಕಿನಾದ್ಯಂತ ಜಿಲ್ಲಾಧಿಕಾರಿಗಳು 144 ಸೆಕ್ಷನ್ ಘೋಷಿಸಿ ಪರಿಸ್ಥಿತಿ ಹತೋಟಿಗೆ ತರುವ ಪ್ರಯತ್ನದಲ್ಲಿ ಪೋಲಿಸ್ ಇಲಾಖೆಯೊಂದಿಗೆ ಸ್ಪಂದಿಸುತ್ತಿದ್ದಾರೆ. ಕೋಮುವಾದಿಗಳ ವಿರುದ್ಧ ಜಾತ್ಯಾತೀತ ಶಕ್ತಿಗಳು ಸಮರ ಸಾರುವುದು ಅನಿವಾರ್ಯವಾಗಿದೆ.

# ರೈತರ ಸಾಲ ಮನ್ನಾಗೆ ಆಗ್ರಹ

ಕರ್ನಾಟಕ ಪ್ರಾಂತ ರೈತ ಸಂಘ, ಅಖಂಡ ರಾಜ್ಯ ರೈತ ಸಂಘ, ಭಾರತೀಯ ಕಿಸಾನ ಸಭಾ ಜಂಟಿ-ಯಾಗಿ ರೈತರ ಸಾಲಮನ್ನಾ ಮಾಡಬೇಕು, ಬೆಳೆಗೆ ವೈಜ್ಞಾನಿಕ ಬೆಲೆ ನಿಗಧಿ ಪಡಿಸಬೇಕು ಎಂದು ಘೋಷಣೆ ಕೂಗುತ್ತಾ ವಿಜಯಪುರ ನಗರದ ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಅಪರ ಜಿಲ್ಲಾಧಿಕಾ ಡಾ. ಎಚ್.ಬಿ.ಬೂದೆಪ್ಪ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರ ಸಾಲ 40,000 ಕೋಟಿ, ರಾಜ್ಯದಲ್ಲಿ ಸಹಕಾರಿ ಸಂಘ 10,000 ಕೋಟಿ, ಕೇಂದ್ರ ರಾಜ್ಯ ಒಬ್ಬರ ಮೇಲೊಬ್ಬರು ಹಾಕುತ್ತಾ ಇನ್ನೂವರೆಗೆ ರೈತರ ಸಾಲ ಮನ್ನಾ ಮಾಡಿಲ್ಲ. ಆರ್ಥಿಕ ಮಂತ್ರಿ ಜೆಟ್ಲಿ ಇವರು ಕೃಷಿ ಸಾಲ ಮನ್ನಾ ಮಾಡುವುದಿಲ್ಲ. ಯಾವ ರಾಜ್ಯದವರು ಸಾಲ ಮನ್ನಾ ಮಾಡುತ್ತಾರೋ ಅವರೇ ನೇರ ಹೊಣೆ ಎಂದು ಹೇಳಿಕೆ ಕೊಟ್ಟಿದ್ದನ್ನು ತೀವ್ರವಾಗಿ ಖಂಡಿಸಿದರು. ರೈತ ವಿರೋಧಿ ನೀತಿ ಕೇಂದ್ರ ಸರ್ಕಾರ ಇರುತ್ತದೆ. ರಾಜ್ಯ ಸರ್ಕಾರ 10,000 ಕೋಟಿ ಸಹಕಾರಿ ಸಂಘದ ಸಾಲ ಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.

ವಿಜಯಪುರ ಜಿಲ್ಲೆ ತೀವ್ರ ಬರಗಲಾಕ್ಕೆ ತುತ್ತಾಗಿ ರೈತರು ಗುಳೆ ಹೋಗುತ್ತಾರೆ. ರೈತರ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಎಸ್.ಎಮ್. ಸ್ವಾಮಿನಾಥ ವರದಿ ಪ್ರಕಾರ ಶೇ.50 ರಷ್ಟು ಖರ್ಚುವೆಚ್ಚ ರೈತರಿಗೆ ನೀಡುವಂತೆ 2006 ರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದರೂ ಇನ್ನೂವರೆಗೆ ನೀಡಿಲ್ಲ. ಈ ಕೂಡಲೆ ಇದನ್ನು ಜಾರಿಗೆ ಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಅಣ್ಣಾರಾಯ ಈಳಗೇರ ಮಾತನಾಡಿ, ಕೇಂದ್ರ ಸರ್ಕಾರ ದೊಡ್ಡ ಕೈಗಾರಿ-ಕೆ ಹಾಗೂ ಬಂಡವಾಳ ಶಾಹಿಗಳ ಸಾಲ ಮನ್ನಾ ಮಾಡುತ್ತಿದ್ದರೆ ಆದರೆ ರೈತರ ಸಾಲ ಮನ್ನಾ ಮಾಡುವಲ್ಲಿ ಮೀನ ಮೇಷ ಎಣಿಸುತ್ತಿರುವ ಎಷ್ಟು ಸರಿ? ಎಂದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯನ್ನು ವಿರೋಧಿಸಿ ಧರಣಿ ಸತ್ಯಾಗ್ರಹ ಮಾಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಖಂಡ ರಾಜ್ಯ ರೈತ ಸಂಘ ಅಧ್ಯಕ್ಷರು ಸಿದ್ರಾಮ ರಂಜಣಗಿ, ಕಾರ್ಯಾಧ್ಯಕ್ಷ ಗೊಲ್ಲಾಳಪ್ಪ ಗೌಡ, ಭಾರತೀಯ ಕಿಸಾನ ಸಭಾದ ಉತ್ತರ ಭಾಗದ ಅಧ್ಯಕ್ಷ ಗುರುನಾಥ ಬಗಲಿ, ಜಯಶ್ರೀ ಜಂಗಮಶೆಟ್ಟಿ ಮಾತನಾಡಿ, ರೈತರ ಬರಗಾಲದಲ್ಲಿ ಕಷ್ಟಕ್ಕೀಡಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸಾಲ ಮನ್ನಾ ಮಾಡಿಲ್ಲ. ಉಳಿದ ರಾಜ್ಯಗಳು, ಪಂಜಾಂಬ, ಉತ್ತರ ಪ್ರದೇಶ, ಮಧ್ಯ ಪ್ರದೇಶದಲ್ಲಿ ರೈತರ ಸಾಲ ಮನ್ನಾ ಮಾಡಿದ್ದಾರೆ. ಇಲ್ಲಿ ರಾಜ್ಯ ಸರ್ಕಾರ ಮಾಡದಿದ್ದರೆ ಎಲ್ಲ ರೈತ ಸಂಘಟನೆ ಪದಾಧಿಕಾರಿಗಳು ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟ ಕೈಗೊಳ್ಳಬೇಕಾಗುತ್ತದೆ ಎಂದರು ಎಚ್ಚರಿಸಿದರು.

ಇದೇ ಸಂದರ್ಭ ರೈತರ ಸಾಲ ಮನ್ನಾ ಹಾಗೂ ರೈತರ ಆತ್ಮ ಹತ್ಯೆ ಮಾಡಿಕೊಳ್ಳದಂತೆ ಜಾಗೃತಿ ಕಾರ್ಯಕ್ರಮವನ್ನು ಸಮಯ ಟಿ.ವಿ.ವತಿಯಿಂದ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಈ ಸಂಧರ್ಭದಲ್ಲಿ ಪಾಂಡು ಹ್ಯಾಟಿ, ಬಾಪುಗೌಡ ಬಿರಾದಾರ, ಸಲೀಂ ನಾಯ್ಕೋಡಿ, ಸಿದ್ರಾಮ ಬಂಗಾರಿ, ಮುರುಗೇಂದ್ರ ಹುಣಶ್ಯಾಳ, ಜಿ.ಎಸ್. ಇಂಗಳಗಿ, ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

**ಅಣ್ಣಾರಾಯ ಈಳಗೇರ**

# ಹಾಸ್ಟೆಲ್ ಹೊರಗುತ್ತಿಗೆ ನೌಕರರ ಬೃಹತ್ ಧರಣಿ



ರಾಜ್ಯ ಸರ್ಕಾರದ ಸಮಾಜ ಕಲ್ಯಾಣ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ಹಾಗೂ ಸರ್ಕಾರದ ಅಂಗ ಸಂಸ್ಥೆಯಾಗಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಇರುವ ವಿದ್ಯಾರ್ಥಿ ವಸತಿನಿಲಯ (ಹಾಸ್ಟೆಲ್)ಗಳಲ್ಲಿ ಅಡುಗೆಯವರು, ಸ್ವಚ್ಚತಾ ಸಿಬ್ಬಂದಿಗಳು, ಕಾವಲುಗಾರರು ಮೊದಲಾದ 'ಡಿ' ವರ್ಗದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸರ್ಕಾರದ ಪ್ರಸ್ತಾವವನ್ನು ಈಗಾಗಲೇ ಹತ್ತಾರು ವರ್ಷಗಳಿಂದ ಸದರಿ ಹುದ್ದೆಗಳಲ್ಲಿ ಕೆಲಸಮಾಡುತ್ತಾ ಬಂದಿರುವ ಹೊರಗುತ್ತಿಗೆ ನೌಕರರು ವಿರೋಧಿಸುತ್ತಾ ಬಂದಿದ್ದಾರೆ. ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನದಲ್ಲಿ ಶಾಸಕರು ಪಕ್ಷಭೇಧ ಮರೆತು ಸರ್ಕಾರದ ಪ್ರಸ್ತಾವವನ್ನು ವಿರೋಧಿಸಿದ್ದರು. ಸರ್ಕಾರ ತಾತ್ಕಾಲಿಕವಾಗಿ ನೇರ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿದಿತ್ತು. ಈಗ 4 ತಿಂಗಳ ಬಳಿಕ ನೇರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿದೆ.

ವಸ್ತುಸ್ಥಿತಿ ಹೀಗಿದೆ. ಸಂಬಂಧಪಟ್ಟ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ 'ಡಿ' ವರ್ಗದ ಹುದ್ದೆಗಳು ಖಾಲಿ ಇಲ್ಲ. ಆ ಹುದ್ದೆಗಳಲ್ಲಿ ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ. ನೇರ ನೇಮಕಾತಿ ಮೂಲಕ ಹೊಸ ಅಡುಗೆಯವರು, ಕಾವಲುಗಾರರು ಮೊದಲಾದವರು ಆಗಮಿಸಿದರೆ ಅಲ್ಲಿ ಕೆಲಸಮಾಡುತ್ತಾ ಇರುವ ಬಡಪಾಯಿ ಹೊರಗುತ್ತಿಗೆ ನೌಕರರು ಕೆಲಸ ಕಳೆದುಕೊಳ್ಳುತ್ತಾರೆ.

ಹಾಲಿ ಕೆಲಸಮಾಡುತ್ತಿರುವ ಹೊರಗುತ್ತಿಗೆ ನೌಕರರಿಗೆ ತೊಂದರೆ ಆಗದಂತೆ ನೇರ ನೇಮಕಾತಿ ಮಾಡಲಾಗುವುದೆಂದೂ, ಹೊಸದಾಗಿ ನಿರ್ಮಾಣ ಆಗುತ್ತಿರುವ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಕೆಲಸ ಮಾಡಲು ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿಮಾಡಲಾಗುತ್ತದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ಹೇಳಿಕೆ ನೀಡಿದ್ದಾರೆ. ಆದರೆ ನೇರ ನೇಮಕಾತಿಯ ಅಧಿಸೂಚನೆಯಲ್ಲಿ ಇದನ್ನು ಸ್ಪಷ್ಟ ಪಡಿಸಿಲ್ಲ. ನೇರ ನೇಮಕಾತಿ ಮೂಲಕ ಬರುವ ಹೊಸಬರನ್ನು ಯಾವ ವಿದ್ಯಾರ್ಥಿ ವಸತಿ ನಿಲಯಕ್ಕೂ ನಿಯೋಜಿಸಬಹುದು. ಈಗಾಗಲೇ ಅಂತಹ ಪ್ರಸಂಗಗಳನ್ನು ಹೊರಗುತ್ತಿಗೆ ನೌಕರರು ಎದುರಿಸುತ್ತಿದ್ದಾರೆ. ಒಬ್ಬ ಕಾಯಂ ಅಡುಗೆಯವನು ಒಂದು ವಿದ್ಯಾರ್ಥಿ ವಸತಿ ನಿಲಯದಿಂದ ವರ್ಗಾವಣೆ ಪಡೆದು ಬೇರೊಂದು ವಿದ್ಯಾರ್ಥಿ ವಸತಿ ನಿಲಯಕ್ಕೆ ಬಂದಾಗ ಅಲ್ಲಿ ಈಗಾಗಲೇ ಕೆಲಸಮಾಡುತ್ತಿರುವ ಹೊರಗುತ್ತಿಗೆ ಅಡುಗೆಯವನು ಕೆಲಸ ಕಳೆದುಕೊಂಡು ಮನೆಗೆ ಹೋಗಬೇಕಾಗುತ್ತದೆ.

ಆದ್ದರಿಂದ ನೇರ ನೇಮಕಾತಿಯನ್ನು ಕೈಬಿಟ್ಟು ತಮ್ಮನ್ನೇ ಆಯಾ ಹುದ್ದೆಗಳಲ್ಲಿ ಕಾಯಂ ಮಾಡಬೇಕೆಂಬುದು ಹೊರಗುತ್ತಿಗೆ ನೌಕರರ ಬೇಡಿಕೆಯಾಗಿದೆ.

ಹೊಸದಾಗಿ ನಿರ್ಮಾಣ ಆಗುತ್ತಿರುವ ವಿದ್ಯಾರ್ಥಿ ವಸತಿ ನಿಲಯಗಳಿಗೆ ಸೀಮಿತವಾಗಿ ಮಾತ್ರ ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿಮಾಡುವುದು ಸರ್ಕಾರದ ಉದ್ದೇಶವಾಗಿದ್ದರೆ, ಅದರಂತೆ ಅಧಿಸೂಚನೆಗೆ ಅಗತ್ಯ ತಿದ್ದುಪಡಿ ಮಾಡಬೇಕೆಂದೂ, ಅಲ್ಲಿಯವರೆಗೆ ನೇರ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ ಹೊರಗುತ್ತಿಗೆ ನೌಕರರು ಜೂನ್ 13 & 14 ರಂದು ಬೆಂಗಳೂರಿನಲ್ಲಿ ಬೃಹತ್ ಸಾಮೂಹಿಕ ಧರಣಿಯನ್ನು ನಡೆಸಿದರು. ಸಚಿವರಾದ ಶ್ರೀ ಆಂಜನೇಯರವರು, ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಶ್ರೀ ವಿಕಾಸ ಕುಮಾರ, ಶ್ರೀ ಶಿವಾಜಿ ಡಿಗಿ ಉಪನಿರ್ದೇಶಕರು (ಆಡಳಿತ), ಶ್ರೀ ಹಿರೇಮಠ ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ರವರು ಬಂದು ಮನವಿಯನ್ನು ಸ್ವೀಕರಿಸಿ ಮಾತನಾಡಿದರು.

ಇದಕ್ಕೂ ಮೊದಲು ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ನೌಕರರ ಬೃಹತ್ ಮೆರವಣಿಗೆ ನಡೆಯಿತು. ಸುಮಾರು 26 ಜಿಲ್ಲೆಗಳಿಂದ ಸುಮಾರು 3000 ಹೆಚ್ಚು ನೌಕರರು ಪಾಲ್ಗೊಂಡಿದ್ದರು. ನೌಕರರ ಸಂಘದ ರಾಜ್ಯ ಅ ಧ್ಯಕ್ಷರಾದ ನಿತ್ಯಾನಂದಸ್ವಾಮಿ, ಇತರ ಪದಾಧಿಕಾರಿಗಳಾದ ಭೀಮಶೆಟ್ಟಿ ಯಂಪಳ್ಳಿ, ಕೆ. ಹನುಮೇಗೌಡ, ಆಂಜನೇಯ ರೆಡ್ಡಿ, ಸುಭಾಷ್, ವೆಂಕಟೇಶ್ ಕೋಣಿ, ಹೆಚ್.ಹೆಚ್. ನದಾಫ್, ಜಂಬಯ್ಯನಾಯಕ್, ಇ.ಆರ್. ಯಲ್ಲಪ್ಪ, ಮುಬಾರಕ್, ಚೆನ್ನಪ್ಪ ಕುಂಬಾರ್, ಪವಾಡೆಪ್ಪ ಚಲವಾದಿ, ಎಸ್. ನಂಜುಂಡಸ್ವಾಮಿ, ಶಾಂತಾ ಗಡ್ಡಿಯವರ್, ಪಿರೂ ರಾಠೋಡ್, ಶಶಿವರ್ಧನ್, ಸುರೇಶ್ ಅಂಗಡಿ, ಲಿಂಗಪ್ಪ ಹಣವಾಳ, ಅಣ್ಣಬಸಪ್ಪ, ಮೋಹನ್ ಕಟ್ಟಿಮನಿ, ಕರಿಯಪ್ಪ ಅಚ್ಚೊಳ್ಳಿ, ಮಂಜುನಾಥ್ ಕೊರವರ ಮೊದಲಾದವರು ನೇತೃತ್ವವಹಿಸಿದ್ದರು.

ಈ ಹೋರಾಟವನ್ನು ಬೆಂಬಲಿಸಿ ಸರ್ವೋದಯ ಕರ್ನಾಟಕ ಪಕ್ಷದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ಶಾಸಕರು ಮೇಲುಕೋಟೆ, ದಕ್ಷಿಣ ಪದವೀಧರರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ. ಸಾಹಿತಿಗಳಾದ ವಡ್ಡಗೆರೆ ನಾಗರಾಜಯ್ಯ, ಸಿಐಟಿಯುನ ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ಯಮುನಾ ಗಾಂವ್ಕರ್, ಅಂಗನವಾಡಿ ನೌಕರರ ಸಂಘದ ಕಾರ್ಯದರ್ಶಿ ಸುನಂದ, ಬಿಸಿಯೂಟ ನೌಕರರ ಸಂಘದ ಮಾಲಿನಿ ಮೇಸ್ತಾ, ಆದಿವಾಸಿ ಸಂಘದ ಎಸ್.ವೈ. ಗುರುಶಾಂತ್, ಎಸ್‌ಎಫ್‌ಐನ ಅಂಬರೀಷ್, ಗುರುರಾಜ ದೇಸಾಯಿ, ಬಸವರಾಜ ಪೂಜಾರ, ಹನುಮಂತು ಮಾತನಾಡಿದರು.

**ಸಚಿವರ ಜೊತೆ ಸಂಘದ ಮುಖಂಡರ ಸಭೆ**

15 ಜೂನ್ 2017 ರಂದು ವಿಧಾನ ಸೌಧದಲ್ಲಿ ಮಾನ್ಯ ಸಚಿವರು, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿಗಳು ಮತ್ತು ಸಂಘದ ಮುಖಂಡರ ಸಭೆಯನ್ನು ಕರೆದಿದ್ದರು. ಪ್ರಮುಖ ಬೇಡಿಕೆಗಳ ಬಗ್ಗೆ ಸರಿಯಾಗಿ ಚರ್ಚಿಸದೆ ಒಮ್ಮತದ ಅಭಿಪ್ರಾಯ ಬರದೆ ಸಭೆ ಮುಕ್ತಾಯವಾಯಿತು. ಸಭೆಯಲ್ಲಿ ಸಂಘವನ್ನು ಪ್ರತಿನಿಧಿಸಿ ನಿತ್ಯಾನಂದಸ್ವಾಮಿ, ಚಂದ್ರಪ್ಪ ಹೊಸ್ಕೇರಾ, ಆಂಜನೇಯ ರೆಡ್ಡಿ, ಕೆ. ಹನುಮೇಗೌಡ, ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ಭಾಗವಹಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ ಸರ್ಕಾರದ ನೌಕರ ವಿರೋಧಿ ಧೋರಣೆಯ ವಿರುದ್ಧ ಹೋರಾಟ ಮಾಡಲು ತೀರ್ಮಾನಿಸಿದೆ.

**ಬೇಡಿಕೆಗಳು :**

1. ನೇಮಕಾತಿ ನಿಯಮಾವಳಿಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಿಯಾದರೂ ಹಾಲಿ 'ಡಿ' ವರ್ಗದ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂ ಮಾಡಿ.
2. ಅಲ್ಲಿಯವರೆಗೆ ಹೊರಗುತ್ತಿಗೆ ನೌಕರರಿಗೆ 'ಸಮಾನ ಕೆಲಸಕ್ಕೆ ಸಮಾನ ವೇತನ' ನೀಡಿ.
3. ಮುಖ್ಯವಾಗಿ, ಈಗಾಗಲೇ ಹೊರಡಿಸಲಾದ ನೋಟಿಫಿಕೇಷನ್‌ಗೆ ತಿದ್ದುಪಡಿ ಮಾಡಿ. ನೇರ ನೇಮಕಾತಿ ಪ್ರಕ್ರಿಯೆ ಕೇವಲ ಹೊಸದಾಗಿ ನಿರ್ಮಾಣ ಮಾಡಲಾಗುತ್ತಿರುವ ವಿದ್ಯಾರ್ಥಿ ವಸತಿ ನಿಲಯಗಳಿಗೆ ಮಾತ್ರ ಅನ್ವಯವಾಗಲಿದೆ ಎಂದು ಸ್ಪಷ್ಟಪಡಿಸಿ. ಅಲ್ಲಿಯವರೆಗೆ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಿ.
4. ಕಾಯಂ ನೌಕರರ ವರ್ಗಾವಣೆಯ ಸಂದರ್ಭದಲ್ಲಿ ಹಾಲಿ ಹೊರಗುತ್ತಿಗೆ ನೌಕರರು ಕೆಲಸ ಕಳೆದುಕೊಳ್ಳದಿರುವುದನ್ನು ಖಚಿತಪಡಿಸಿ.

**ವರದಿ: ಕೆ. ಹನುಮೇಗೌಡ**





# ಬಿಸಿಯೂಟ : ಕೇಂದ್ರೀಕೃತ ಅಡುಗೆ ಕ್ಯಾನ್ಸಲ್

ಶಿಕ್ಷಣ ಎಂಬುವುದು ಒಂದು ಮಗುವಿನ ಜನ್ಮಸಿದ್ಧ ಹಕ್ಕು. ಹಾಗೆಯೇ ಈ ಶಿಕ್ಷಣ ಒಂದು ದೇಶದ ಅಭಿವೃದ್ಧಿಗೆ ಪೂರಕವಾಗಿದೆ. ಇಂತಹ ಶಿಕ್ಷಣವನ್ನು ಸರ್ಕಾರ ತನ್ನ ಅದ್ಯತೆ ಎಂದು ಭಾವಿಸಿ ಇದರ ಉನ್ನತಿಗಾಗಿ ಎಲ್ಲಾ ಮಕ್ಕಳಿಗೆ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೊಳಿಸಲಾಗಿದೆ. ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಇಂತಹ ಯೋಜನೆಗಳ ಭಾಗವಾಗಿ ಕೋಟ್ಯಾಂತರ ಮಕ್ಕಳು ಇಂದು ಸರ್ಕಾರಿ ಶಾಲೆಯ ಶಿಕ್ಷಣ ಪಡೆಯುತ್ತಿದ್ದಾರೆ.

ಮಕ್ಕಳ ಹಾಜರಾತಿ ಹೆಚ್ಚಿಸಲು, ಮಧ್ಯಾಹ್ನದ ನಂತರ ಶಾಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು. ಮಧ್ಯಾಹ್ನದ ಬಿಸಿಯೂಟ ಯೋಜನೆ ಬಹಳ ಪ್ರಮುಖವಾಗಿದೆ. ಈ ಯೋಜನೆಯಿಂದ ಶಾಲಾ ಹಾಜರಾತಿ ಹೆಚ್ಚಿಸಲು, ಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಡುವ ಕ್ರಮ ನಿಂತು ಉತ್ತಮ ಪ್ರಗತಿ ಕಾಣಲಾಗಿದೆ.

ಇಂತಹ ಯೋಜನೆಯನ್ನು ಸರ್ಕಾರ ಮಾನ್ಯ ಸುಪ್ರೀಂ ಕೋರ್ಟ್‌ನ ಆದೇಶದ ಮೇರೆಗೆ 2001–2002 ರಲ್ಲಿ ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ದೇಶದಲ್ಲಿ 25 ಲಕ್ಷ ಮಹಿಳೆಯರು, ರಾಜ್ಯದಲ್ಲಿ 1 ಲಕ್ಷ 19 ಸಾವಿರ ಮಹಿಳೆಯರು ಯಾವುದೇ ಸೌಲಭ್ಯವಿಲ್ಲದೆ ಕೆಲಸ ನಿರ್ವಹಿಸುತ್ತಿದ್ದಾರೆ.

ಇಂತಹ ಪ್ರಮುಖವಾದ ಶಿಕ್ಷಣಕ್ಕೆ ಪೂರಕವಾಗಿರುವ ಈ ಯೋಜನೆಯನ್ನು ಕೇಂದ್ರ ಸರ್ಕಾರ ತನ್ನ ಲಾಭಕ್ಕಾಗಿ ಮೇ 16 ರಂದು ಖಾಸಗೀ



ಸಂಘ–ಸಂಸ್ಥೆಗಳಿಗೆ, ಧಾರ್ಮಿಕ ಸಂಸ್ಥೆಗಳಿಗೆ ಕೇಂದ್ರಿಕೃತ ಅಡುಗೆ ಕೇಂದ್ರದ ಮೂಲಕ ಮಕ್ಕಳಿಗೆ ಊಟ ಪೂರೈಸಲು ಅಧಿಸೂಚನೆ ಎಲ್ಲಾ ರಾಜ್ಯಗಳಿಗೆ ಕಳುಹಿಸಿದೆ. ಹಾಗೆಯೇ ರಾಜ್ಯದಲ್ಲಿ ಮೇ 24 ರಂದು ಈ ಅಧಿಸೂಚನೆ ಜಾರಿಗೆ ತರುವ ನಿಟ್ಟಿನಲ್ಲಿ ಎಲ್ಲಾ ಜಿಲ್ಲೆಗಳಿಗೆ ಕ್ರಮ ವಹಿಸಲು ರಾಜ್ಯ ಸರ್ಕಾರ ಕಳುಹಿಸಿದೆ.

ಸರ್ಕಾರ ಯಾವುದೇ ಚರ್ಚೆ ನಡೆಸದೇ ಏಕಾಏಕಿ ಈ ಯೋಜನೆಯನ್ನು ಖಾಸಗಿ ಮಾಡಲು ಹೊರಟಿರುವ ಸರ್ಕಾರದ ಕ್ರಮವನ್ನು ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು) ರಾಜ್ಯ ಸಮಿತಿ ಎಲ್ಲಾ ಜಿಲ್ಲೆಗಳಲ್ಲಿ 2 ಹಂತದಲ್ಲಿ ಹೋರಾಟಕ್ಕೆ ಕರೆ ನೀಡಿತ್ತು.

ಪ್ರಮುಖವಾಗಿ ಕೇಂದ್ರ ಬಿಜೆಪಿ ಎಂ.ಪಿ. ಗಳು ಇರುವ ಜಿಲ್ಲೆಗಳಲ್ಲಿ ಅವರ ಮನೆಯ ಎದುರು ಸಾಂಕೇತಿಕ ಹೋರಾಟ ನಡೆಸುವುದು ಮತ್ತು ಈ ವಿಚಾರದ ಮೇಲೆ ಪತ್ರಿಕಾಗೋಷ್ಠಿ ನಡೆಸುವುದು. ಜೂನ್ 13 ರಂದು ರಾಜ್ಯ ಮಟ್ಟದ ವಿಧಾನ ಸೌಧ ಚಲೋ ನಡೆಸಲು ಕರೆ ನೀಡಲಾಗಿತ್ತು. ಈ ರೀತಿಯಲ್ಲಿ ಮೂರು ರೀತಿಯ ತಯಾರಿ ಸಹ ನಡೆಸಲಾಗಿತ್ತು.

ಜೂನ್ 9 ರಂದು ಮಾನ್ಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಅಜಿತ್ ಸೇಠ್‌ರವರು, ಮಾನ್ಯ ಅಯುಕ್ತರ್ ಜಂಟಿ ನಿರ್ದೇಶಕರ ಜಂಟಿ ನೇತೃತ್ವದಲ್ಲಿ ಸಂಘಟನೆ ರಾಜ್ಯಧ್ಯಕ್ಷರಾದ ಕಾಂ. ಎಸ್. ವರಲಕ್ಷ್ಮಿ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಮಾಲಿನಿ ಮೇಸ್ತ ಇವರ ಜೊತೆ ಚರ್ಚೆ ನಡೆದು ಈ ಹೋರಾಟವನ್ನು ತೆಗೆದುಕೊಳ್ಳಲು ಒತ್ತಡ ಹಾಕಲಾಯಿತು. ಬಿಸಿಯೂಟ ಖಾಸಗೀಕರಣ ವಾಪಸ್ಸು ತೆಗೆದದುಕೊಳ್ಳಲು ಸರ್ಕಾರ ಲಿಖಿತ ಆದೇಶ ನೀಡಿದಲ್ಲಿ ಮಾತ್ರ ಹಿಂತೆಗೆದುಕೊಳುತ್ತೇವೆ ಎಂದು ಸಂಘದ ನಿಲುವನ್ನು ತಿಳಿಸಲಾಯಿತು.

ಜೂನ್ 13 ರಂದು ಮಾನ್ಯ ಶಿಕ್ಷಣ ಸಚಿವರು, ಮಾನ್ಯ ಅಯುಕ್ತರು, ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಜಂಟಿ ನಿರ್ದೇಶಕರು ಮತ್ತು ಎಲ್ಲಾ ಜಿಲ್ಲೆಯ ಜಿಲ್ಲಾ ಮುಂಖಂಡರುಗಳು ಮತ್ತು ರಾಜ್ಯಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಇನ್ನಿತರ ಪದಾಧಿಕಾರಿಗಳು ಸಭೆ ಸೇರಿದ್ದರು. ಆ ಸಭೆಯಲ್ಲಿ ಕೇಂದ್ರಿಕೃತ ಅಡುಗೆ ವ್ಯವಸ್ಥೆಗೆ ಕೊಡದಿರುವ ಬಗ್ಗೆ ಲಿಖಿತ ಭರವಸೆ ನೀಡಲಾಯಿತು. ವೇತನ, ಪೆನ್ಷನ್, ಕಿರುಕುಳ ಮುಂತಾದವುಗಳ ಬಗ್ಗೆ ಮಾತುಕತೆ ನಡೆದು ಅದನ್ನು ಪರಿಹರಿಸುವ ಬಗ್ಗೆ ಭರವಸೆ ನೀಡಲಾಯಿತು.

**ವರದಿ: ಮಾಲಿನಿ ಮೇಸ್ತ**

# ಹಗಲು–ಇರುಳೂ ಹಕ್ಕಿನ ಹೋರಾಟದಲ್ಲಿ ರಾಮನಗರದ ಇರುಳಿಗರು



**ಎಸ್.ವೈ. ಗುರುಶಾಂತ್**

ರಾಮನಗರ ಜಿಲ್ಲೆಯ ಇರುಳಿಗರು ಬುಡಕಟ್ಟು ಸಮುದಾಯದ ನೂರಾರು ಕುಟುಂಬಗಳು ಜಿಲ್ಲಾಧಿಕಾರಿಗಳ ಕಛೇರಿಯೆದುರು 2017 ಮೇ 24 ರಿಂದ ಹಗಲು ರಾತ್ರಿ ನಿರಂತರ ಧರಣಿ ಕುಳಿತಿವೆ. ಅವರು ಗಿಡಗಂಟಿ, ಕಚಡಾವನ್ನೆಲ್ಲಾ ಸ್ವಚ್ಛಗೊಳಿಸಿ ಕುಳಿತುಗೊಂಡಿದ್ದ ಜಾಗದಲ್ಲಿ ಮಹಿಳೆಯೊಬ್ಬರು ಮೊದಲ ದಿನವೇ ಚೇಳು ಕಡಿತದಿಂದ ಅಸ್ಪತ್ರೆಗೆ ಸೇರಿದ್ದಾಯ್ತು. ಬಳಿಕ ಪ್ರತಿಭಟನೆಯೆಂಬುದನ್ನು ತಮ್ಮ ಪ್ರತಿಷ್ಟೆಗೆ ಎಸೆದ ಅನಿಷ್ಠ ಸವಾಲು ಎಂದು ಅವರನ್ನೆಲ್ಲಾ ಅಧಿಕಾರಸ್ತರು ಜಾಗದಿಂದ ಎತ್ತಂಗಡಿ ಮಾಡಿಸಿದರು. ನಡುವೆ ಮಳೆ ಶುರುವಾಗಿದೆ, ಆಶ್ರಯಕ್ಕೆ ತಾಡಪಾಲು ಅಷ್ಟೇ. ಹೀಗಿದ್ದರೂ ಧರಣಿ ಮುಂದುವರಿಯಿತು. ಆಗ ಧರಣಿ ಹಿಂಪಡಿಯಿರಿ ಎಂದು ಹಲವರ ಒತ್ತಡ ಬೇರೆ. ಆದರೆ ಇವಾವುದಕ್ಕೂ ಜಗ್ಗದೇ ನೂರಾರು ಇರುಳಿಗರ ಕುಟುಂಬಗಳು ಅಲ್ಲೇ ಧರಣಿ ಮಾಡುತ್ತಿವೆ. ಅಲ್ಲೇ ಗಂಜಿ ನೀರು ಕಾಯಿಸಿಕೊಂಡು ದಿನಗಳೆಯುತ್ತಿದ್ದಾರೆ.

**ವಿಳಂಬ ತಂತ್ರ**

ವಿಚಿತ್ರವೆಂದರೆ, ಇದು ಮೈಸೂರಿಗೆ ಹೋಗುವ ಹೆದ್ದಾರಿ. ಮುಖ್ಯಮಂತ್ರಿಯವರನ್ನೂ ಒಳಗೊಂಡು ಸಂಪುಟದ ಹತ್ತಾರು ಸಚಿವರು ಅಲ್ಲೇ ಓಡಾಡುತ್ತಾ–ರೆ. ಉಸ್ತುವಾರಿ ಸಚಿವರು, ಸಂಸದರೂ 'ಅಭಿವೃದ್ಧಿ' ಸಭೆಗಳೆಂಬ ಒಡ್ಡೋಲಗ ನಡೆಸುತ್ತಲೇ ಇರುವರಾದರೂ 'ಅವರ ಅಭಿವೃದ್ಧಿ' ಅಜೆಂಡಾದಲ್ಲಿ 'ಇವರು' ಇಲ್ಲದಿರುವುದರಿಂದ ಕ್ಯಾರೇ ಎನ್ನುತ್ತಿಲ್ಲ. ಧರಣಿಗೆ ಮೊದಲು 24 ರಂದು ಮೆರವಣಿಗೆ ಹೊರಟವರನ್ನು ಮಾರ್ಗದ ಮದ್ಯದಲ್ಲೇ ತಡೆದು 'ಒಂದು ವಾರ ಕಾಲಾವಕಾಶ ಕೊಡಿ, ಬಗೆಹರಿಸುತ್ತೇನೆ' ಎಂದು ಹೇಳಿದ್ದ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಇಲ್ಲಿಗೆ ಮೂರು ವಾರಗಳು ಕಳೆದರೂ ಒಂದು ಹಂತದ ಪ್ರಕ್ರಿಯೆಯೂ ನಡೆದಿಲ್ಲ. ಆದರೆ ಹೊಣೆಯಿರುವ ಅಧಿಕಾರಿಗಳು ತಮ್ಮೆಲ್ಲಾ ಲೋಪ, 'ಅಪರಾಧ'ಗಳನ್ನು ಪಿ.ಡಿ.ಒ.ನಂತಹ ಕೆಳ ಹಂತದ ಅಧಿಕಾರಿಗಳ ಮೇಲೆ ಎತ್ತಿ ಹಾಕಿ ರಕ್ಷಣೆ ಪಡೆಯಲು ಯತ್ನಿಸುತ್ತಿದ್ದಾರೆ!

**'ದೊಡ್ಡವರ' ಆಟಗಳ ನಡುವೆ**

ರಾಮನಗರ ಎಂದರೆ 'ಶೋಲೆ' ಸಿನಿಮಾ, ಗಬ್ಬರ್‌ಸಿಂಗ್ ಘರ್ಜನೆ ಎಲ್ಲಾ ನೆನಪಿಗೆ ತರುತ್ತದೆಯಲ್ಲವೇ? ಆ ಸಿನಿಮಾ ತೆಗೆದ ಸ್ಥಳವನ್ನೀಗ ಪ್ರೇಕ್ಷಣೀಯ ಸ್ಥಳ ಮಾಡಲು ಸರಕಾರ ಹೊರಟಿದೆ! ಈ ರಾಮನಗರ ಈಗ ಜಿಲ್ಲೆಯಾಗಿದೆ. ಇದರ ಉಸ್ತುವಾರಿ ಸಿದ್ದು ಸಂಪುಟದಲ್ಲಿ ಪವರ್ ಫುಲ್ ಮಿನಿಸ್ಟರ್ ಡಿ.ಕೆ.ಶಿವಕುಮಾರ್, ಅವರ ಸಹೋದರ ಸಂಸದ ಡಿ.ಕೆ.ಸುರೇಶ್, ಮಾಜಿ ಮುಖ್ಯಮಂತ್ರಿ, ಹಾಲಿ ಶಾಸಕ ಹೆಚ್.ಡಿ.ಕುಮಾರಸ್ವಾಮಿ ಘಟಾನಿಘಟಿಗಳ ರಾಜಕೀಯ ಆಟದ ಕ್ಷೇತ್ರವೂ ಹೌದು. ಅಪಾರ ಪ್ರಾಕೃತಿಕ ಸಂಪನ್ಮೂಲಗಳಿಂದ ತುಂಬಿರುವ ಪ್ರದೇಶ. ಬೆಂಗಳೂರು–ಮೈಸೂರು ಅಭಿವೃದ್ಧಿ ಕಾರಿಡಾರ್‌ನಲ್ಲಿ ಆಯಕಟ್ಟಿನ ಜಾಗ! ಹಾಗೇ ಇಂತಹ ವನ್ಯ ಸಂಪತ್ತಿನ ನಡುವೆ ಇರುಳಿಗರು, ಸೋಲಿಗರು, ಮೇಧರು, ಹಕ್ಕಿ ಪಿಕ್ಕಿ ಬುಡಕಟ್ಟು–ಆದಿವಾಸಿ ಸಮುದಾಯಗಳು ನೂರಾರು ವರುಷಗಳಿಂದ ತಮ್ಮದೇ ವಿಶಿಷ್ಠ ರೀತಿಯಲ್ಲಿ ಬದುಕು ಕಟ್ಟಿಕೊಂಡಿವೆ. ಇಂತಹ ಅನನ್ಯತೆ ಇರುವವರೂ ಇಲ್ಲಿ ಇದ್ದಾರಾ ಎಂದು ಜನ ಅಂದುಕೊಳ್ಳುವಂತೆ ಮೌನದಿಂದಲೇ ತಮ್ಮದೇ ಜೀವನ ನಡೆಸುತ್ತಾ ಬಂದಿದ್ದಾರೆ. ಇಂತಹವರು ನಗರದ ಬೀದಿ ಬದಿಯಲ್ಲಿ ಹೋರಾಟ ಮಾಡುವ ಅಗತ್ಯ ಬಂದದ್ದಾರೂ ಯಾ–ಕೆ?

**ಬದುಕು ಬೇಗೆಯಲ್ಲಿ**

ಒಂದು ಅಂದಾಜಿನಂತೆ ರಾಜ್ಯದಲ್ಲಿ ಇರುಳಿಗರ ಸಂಖ್ಯೆ 16,000. (ಇದರಲ್ಲಿ ಶಿವಮೊಗ್ಗದ ಈರುಳಾರ್ ಸೇರಿಲ್ಲ) ರಾಮನಗರ ಜಿಲ್ಲೆಯಲ್ಲೇ ಸುಮಾರು 12,000 (2011 ರ ಜನಗಣತಿಯಂತೆ 10292. ಇದರಲ್ಲಿ ಗ್ರಾಮೀಣದಲ್ಲಿ 9901, ನಗರ 558). 148 ಹಳ್ಳಿಗಳಲ್ಲಿ ಸುಮಾರು 5500 ಕುಟುಂಬಗಳಿವೆ. ಮುಖ್ಯವಾಗಿ ಕನಕಪುರ, ಮಾಗಡಿ, ರಾಮನಗರ ತಾಲೂಕುಗಳ ಕಾಡುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲೆ. ಬೆಂಗಳೂರು ಜಿಲ್ಲೆಗೂ ಇವರ ಬದುಕು ಚಾಚಿದೆ. ಕೋಲಾರ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿಯೂ ಒಂದಿಷ್ಟು ಜನ ಚದುರಿದ್ದಾರೆ. ತಮಿಳುನಾಡಿನೊಂದಿಗೆ ಪೂರ್ವಿಕರ ನಂಟಿದೆ. ಈ ಸಮುದಾಯವನ್ನು ಪರಿಶಿಷ್ಟ ಪಂಗಡದ (ಎಸ್.ಟಿ.) ಪಟ್ಟಿಗೆ ಸೇರಿಸಲಾಗಿದೆ.

ಈ ಇರುಳಿಗ ಸಮುದಾಯ ಸರ್ವ ರೀತಿಯಿಂದಲೂ ಅತ್ಯಂತ ಹಿಂದುಳಿದಿದೆ. ಬೇಟೆ ಹಾಗೂ ಕಾಡಿನ ಉತ್ಪನ್ನಗಳೇ ಇವರ ಮುಖ್ಯ ಆಹಾರ ಸಂಗ್ರಹಣಾ ವಿಧಾನವಾಗಿತ್ತು. ಕಾಲ ಕ್ರಮೇಣ ಇವರು ಅಲ್ಪ ಸ್ವಲ್ಪ ಕೃಷಿ ಮಾಡಿಕೊಂಡು ಆಹಾರದ ಬೆಳೆಗಳನ್ನು ಪಡೆಯುತ್ತಿದ್ದರು. ಈಗ ಬೇಡಿಕೆ ಇಟ್ಟಿರುವುದು ಈ ಜಿಲ್ಲೆಯ ಆದಿವಾಸಗಳದ್ದು. ಆದರಲ್ಲೂ ನಿರ್ದಿಷ್ಠವಾಗಿ ಮೊದಲ ಹಂತದಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯಂತೆ ಮೂಲಭೂತ ಸರ್ವೆ ಮುಗಿದಿರುವ ಮೂರು ತಾಲೂಕಿನ, ಮೂರು ಹಾಡಿ/ಹಳ್ಳಿಗಳಿಗೆ ಸಂಬಂಧಿಸಿದವರ ಬೇಡಿಕೆ ಈಡೇಸಿರೆಂದು. ಇದರಲ್ಲಿ ಕಾಡಿನಲ್ಲಿ ವಾಸವಿದ್ದವರನ್ನು 1980 ರಲ್ಲಿ ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸಿದರು. ಕನಕಪುರ ತಾಲೂಕಿನಲ್ಲಿ ಬರುವ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನಕ್ಕೂ ಸೇರಿಸಲಾಯಿತು. ಇದರಿಂದಾಗಿ ಇರುಳಿಗರು ನೆಲೆ ತಪ್ಪಿದರು. ಬಹುತೇಕರು ಕೂಲಿಯಾಳಾಗಿ, ಇಟ್ಟಿಗೆಗೂಡುಗಳಲ್ಲಿ, ಕಲ್ಲಿ ಕ್ವಾರಿಗಳಲ್ಲಿ ಜೀತ ಮಾಡಿ ಬದುಕಬೇಕಾಯಿತು.

**ಹಕ್ಕಿನ ಧೃಡ ಹೋರಾಟ**

ಮುಂದೆ 2006 ರಲ್ಲಿ ಅರಣ್ಯ ಹಕ್ಕುಗಳ ಕಾಯ್ದೆ ಅಂಗೀಕಾರವಾದ ಬಳಿಕ 2014 ರಲ್ಲಿ ಆ ಕಾಯ್ದೆಯಂತೆ ತಮಗೆ ತಮ್ಮ ಪಾರಂಪರಿಕ ನೆಲೆಗಳಲ್ಲೇ ಭೂಮಿಯ ಹಕ್ಕು ಮತ್ತು ಸಮುದಾಯದ ಹಕ್ಕುಗಳು ಸಿಗಬೇಕೆಂದು ಹೋರಾಟ ಆರಂಭವಾಯಿತು. ಕಾಯದೆ ತಿಳಿಸುವಂತೆ ಸಾಕ್ಷ್ಯಾಧಾರಗಳನ್ನು ಒದಗಿಸಲಾಯಿತು. ಅರಣ್ಯ ಹಕ್ಕು ಸಮಿತಿಯೂ ಕ್ಲೇಮು ಅರ್ಜಿಗಳನ್ನು ಸಭೆ ನಡೆಸಿ ಅಂಗೀಕರಿಸಿ ಮುಂದಿನ ಕ್ರಮಕ್ಕೆ ಮಂಡಿಸಿತು. ವಿಳಂಬವಾದ್ದರಿಂದ ಹಂದಿಗುಂದಿ ಅರಣ್ಯ ಪ್ರದೇಶದಲ್ಲಿ ಬುಡಗಯ್ಯನದೊಡ್ಡಿಯಲ್ಲಿ ಅರೆ ಬೆತ್ತಲೆ ನಿರಂತರ ಧರಣಿನಡೆಸಲಾಯಿತು. ಈ ಬಳಿಕ ಸರಕಾರದ ಆಡಳಿತ ಅಲ್ಲಿನ ಭೂಮಿಯನ್ನು ಉಪಗ್ರಹದ ಮೂಲಕ ಸರ್ವೇ ನಡೆಸಿತು. 40 ಹಳ್ಳಿಗಳಲ್ಲಿ ಸರ್ವೇ ಕಾರ್ಯ ಆಗಿದೆ, ಆದರೆ 25 ಹಳ್ಳಿಗಳದ್ದು ನಿಂತಿದೆ.

ಈಗ ಕೇಳುತ್ತಿರುವುದು ಈಗಾಗಲೇ ಸರ್ವೆ ಮಾಡಲಾಗಿರುವ ರಾಮನಗರದ ಗೊಲ್ಲರದೊಡ್ಡಿ (ವಡ್ಡರಹಳ್ಳಿ), ಮಾಗಡಿ ತಾಲೂಕಿನ ಜೋಡಗಟ್ಟೆ ಇರುಳಿಗರ ಕಾಲೋನಿ ಮತ್ತು ಕನಕಪುರ ತಾಲೂಕಿನ ಬುಡಗಯ್ಯನದೊಡ್ಡಿ ಪ್ರದೇಶಗಳ ಆದಿವಾಸಿಗಳಿಗೆ ಅರಣ್ಯ ಹಕ್ಕುಗಳ ಕಾಯ್ದೆ 2006 ರಂತೆ ಭೂಮಿಯ ಹಕ್ಕು ಮತ್ತು ಸಮುದಾಯದ ಹಕ್ಕುಗಳನ್ನು ಒದಗಿಸಬೇಕು ಎಂಬುದು ಇವರ ಆಗ್ರಹ. ಅಲ್ಲದೇ ನಾಗರೀಕ ಸೌಲಭ್ಯ, ಕೆಲವು ಭೂಮಾಲೀಕರೆಂದು ಹೇಳಿಕೊಳ್ಳುವ (ರಿಯೆಲ್ ಎಸ್ಟೆಟ್)ವರಿಂದ ಸದಾ ಕಿರುಕುಳ ತಡೆಯಲು, ಇತ್ಯಾದಿ ಪ್ರಶ್ನೆಗಳಿವೆ.

ಅರಣ್ಯ ಹಕ್ಕುಗಳ ಕಾಯ್ದೆಯಂತೆ 2010 ರಿಂದ 1900 ಕ್ಲೇಮು ಅರ್ಜಿಗಳನ್ನು ಸಲ್ಲಿಸಲಾಗಿದ್ದರೂ ಕೇವಲ 310 ಹಕ್ಕುಪತ್ರಗಳನ್ನು ಕಾಟಾಚಾರಕ್ಕೆ ಎಂಬಂತೆ ಜಿಲ್ಲಾಡಳಿತ ನೀಡಿದೆ. ಒಟ್ಟಾರೆ ಈಗಿನ ಬೇಡಿಕೆಗಳನ್ನು ಒಪ್ಪಲು ಆಡಳಿತಕ್ಕೆ ಕಾನೂನಾತ್ಮವಾಗಿ ಅಡ್ಡಿಗಳಿಲ್ಲ. ಆದರೆ ಅಡ್ಡಿ ಇರುವುದು ಕೇವಲ ಪಟ್ಟಭದ್ರ ಹಿತಾಸಕ್ತಿಗಳಿಂದ. ಈ ಪ್ರದೇಶಗಳಲ್ಲಿ ಭೂಮಿಯೀಗ ಭಾರೀ ಬೆಳೆ ಬಾಳುತ್ತದೆ. ಅಂತಹದ್ದನ್ನು ಇವರಿಗೆ ಕೊಡೋದೇ ಎಂಬ ತಿರಸ್ಕಾರ, ದ್ವೇಷ. ಮೇಲಾಗಿ ಈ ಅರಣ್ಯದಲ್ಲಿ ಸಕ್ರಮ, ಅಕ್ರಮವಾಗಿ ಮರಳು, ಕಲ್ಲು ಕ್ವಾರಿ ನಡೆಯುತ್ತಿರುವ ಪ್ರದೇಶವೂ ಕೂಡ. ಇಲ್ಲಿ ನಡೆಯುವ ಅಕ್ರಮಗಳಲ್ಲಿ ಕೆಲವರ ಮೇಲೆ ಅನಿವಾರ್ಯವಾಗಿ ಹಲವಾರು ಮೊಕದ್ದಮೆಗಳೂ ದಾಖಲಾಗಿವೆ. ಇಂತಹವರದ್ದು ಒಳ ವಿರೋಧವಿದೆ. ಆದರೆ ಈ ಸಮುದಾಯದ ಜನರಿಗೆ ಭೂಮಿ, ಅರಣ್ಯ ಹಕ್ಕು ನೀಡುವುದಕ್ಕೆ ಅವರದ್ದೇ ಪ್ರದೇಶ ಇದಾಗಿದ್ದು ಯಾವುದೇ ತೊಂದರೆ ಬರಲಾರದು. ಅವೆಲ್ಲಾ ಉಳುಮೆ ಮಾಡಿದ, ಬಾಳಿದ ಜಾಗಗಳು.

ಅರಣ್ಯ ಹಕ್ಕುಗಳ ಕಾಯ್ದೆಯನ್ನು ಜಾರಿ ಮಾಡದೇ ಆದಿವಾಸಿಗಳನ್ನು ವಂಚಿಸುತ್ತಿರುವ ಬಗ್ಗೆ ದೇಶದ ಸುಪ್ರಿಂ ಕೋರ್ಟ್ 2013 ರಲ್ಲಿ ಅತ್ಯಂತ ತೀಕ್ಷಣವಾಗಿ ಟೀಕಿಸಿ ಎಚ್ಚರಿಸಿದೆ. ಜಾರಿಗೊಳಿಸದೆ ವಂಚಿಸುವವರ ಮೆಲೆ ಕ್ರಿಮಿನಲ್ ದೂರು ದಾಖಲಾದ ಉದಾಹರಣೆಗಳು ಇವೆ. ಆದ್ದರಿಂದಲೇ ಈಗ ಹೋರಾಟ ನಡೆಸುತ್ತಿರುವ ರಾಮನಗರ ಇರುಳಿಗರ (ಅರಣ್ಯವಾಸಿ) ಕ್ಷೇಮಾಭಿವೃದ್ಧಿ ಸಂಘ (ರಿ) ಜಿಲ್ಲಾಡಳಿತ ಸಬೂಬು ನೀಡುವುದನ್ನು ಒಪ್ಪುತ್ತಿಲ್ಲ. ನಿರಾಕರಿಸಲು ಕಾರಣಗಳೇ ಇಲ್ಲದಿರುವಾಗ ವಿಳಂಬ ಪ್ರಶ್ನಿಸಿ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಮುಂತಾದವರ ಮೇಲೆ ದೌರ್ಜನ್ಯ ಕಾಯ್ದೆಯಡಿ ದೂರು ದಾಖಲಿಸಿದೆ. ಎಲ್ಲಾ ಮಗ್ಗುಲಿನಿಂದ ಪರಿಶೀಲಿಸಿದರೂ ಸಂಘ ಅತ್ಯಂತ ಶಿಸ್ತು, ತಾಳ್ಮೆ ಮತ್ತು ಶಾಂತ ರೀತಿಯಿಂದ ನ್ಯಾಯ ಬದ್ದ ಹಕ್ಕು ಪಡೆಯಲು ಪ್ರಜಾಸತ್ತಾತ್ಮಕವಾಗಿ ಹೋರಾಡುತ್ತಿದೆ. 'ನಮ್ಮದೇನಿದ್ದರೂ ಹಕ್ಕುಗಳಿಗಾಗಿ ನಡೆದಿರುವ ಹೋರಾಟ. ಕಾನೂನನ್ನೇ ಜಾರಿಮಾಡಿರೆಂದೇ ಕೇಳುತ್ತಿದ್ದೇವೆ. ಯಾವುದೇ ವ್ಯಕ್ತಿ ವಿರುದ್ಧದ ಹೋರಾಟವು ಅಲ್ಲ. ಜಿಲ್ಲಾಧಿಕಾರಿಗಳು ಒಂದು ವಾರದ ಸಮಯ ಕೇಳಿದ್ದರು, ಮೂರು ವಾರ ಮುಗಿದಾಗಿದೆ. ಬೇಕಾದರೆ ಇನ್ನೂ ಒಂದು ವಾರ ಇಲ್ಲೇ ಕೂತಿರಲು ನಾವು ಸಿದ್ಧ. ಆದರೆ ಕೆಲಸ ನಡೆಯಬೇಕು' ಎನ್ನುತ್ತಾರೆ ಮುಖಂಡರಾದ ಸಮಿತಿ ಅದ್ಯಕ್ಷ ಕೃಷ್ಣಮೂರ್ತಿಯವರು. ಹೋರಾಟದಲ್ಲಿ ಸದಾ ಸಾಥ್ ಕೊಡುತ್ತಿರುವವರು ಗೋವಿಂದರಾಜು, ಗೌರವ ಅದ್ಯಕ್ಷರಾದ ಮಹದೇವಯ್ಯ, ಶಿವು ಮುಂತಾದವರು.

**'ಅಡ್ಡಿಗಳಿಗೆ ಅಂಜುವುದಿಲ್ಲ'**

ಇದನ್ನು ಸಹಿಸದ ಶಕ್ತಿಗಳು ಏನಾದರೂ ಮಾಡಿ ಈ ಹೋರಾಟವನ್ನು ವಿಫಲಗೊಳಿಸಲು ಹಲವು ತಂತ್ರಗಳನ್ನು ಹೆಣೆಯುತ್ತಿವೆ. ಮೊದಲು ಕೆಲವು ಸಂಘ ಸಂಸ್ಥೆಗಳ ಹೆಸರಿನಲ್ಲಿ, ಸ್ಥಳೀಯ ರಾಜಕೀಯ ಮುಖಂಡರುಗಳಾಗಿ ಭರವಸೆ ನೀಡಿ ಹಿಂಪಡೆಯಲು ಒತ್ತಾಯಿಸಿದರು. ಈಗ ಕಂದಾಯ ನೌಕರರನ್ನು ಎತ್ತಿ ಕಟ್ಟಿ ಕೇಸ್ ಹಾಕಿ ಭಯ ಹುಟ್ಟಿಸಿ ಬ್ಲಾಕ್ ಮೇಲ್ ಮಾಡುತ್ತಿದ್ದಾರೆಂದು ಆರೋಪಿಸಿ ಜನರನ್ನು ಹಾದಿ ತಪ್ಪಿಸಲು ಮುಂದಾಗಿದ್ದಾರೆ. ಕಾಯ್ದೆಯಲ್ಲಿ ಇಲ್ಲದ ಅಂಶಗಳನ್ನು ಮತ್ತಷ್ಟೂ ತಿರುಚಿ ಹಕ್ಕೇ ಅಸಿಂಧು ಎಂದು ಪ್ರಚಾರಿಸುತ್ತಿದ್ದಾರೆ. ಅರಣ್ಯ ಹಕ್ಕು ಸಮಿತಿಗೆ ಆದಿವಾಸಿ ಅದ್ಯಕ್ಷನಾಗಿರಬೇಕಿದೆ. ಇವರ ಪ್ರಕಾರ ಅದ್ಯಕ್ಷರಾದವರು ತಮ್ಮ ಭೂಮಿ ಹಕ್ಕು ಕೇಳಬಾರದಂತೆ. ಅಂದರೆ ವಂಚಿತ ಹಕ್ಕುದಾರ ಆದಿವಾಸಿಯೇ ಅದ್ಯಕ್ಷರಾಗುವದರಲ್ಲಿ, ತನ್ನ ಹಕ್ಕು ಕೇಳುವುದರಲ್ಲಿ ಯಾವ ತಪ್ಪಿದೆ? ಕೊನೆಗೂ ಅರ್ಜಿ ಇತ್ಯರ್ಥ ಮಾಡುವುದು ಅದ್ಯಕ್ಷನಲ್ಲ. ಇಡೀ ಸಭೆ, ಸಮಿತಿ. ಇವರಿಗೆ ಅಂತಹ ತಕರಾರು ಇರೋದು ಅಡ್ಡಿ ನಿವಾರಣೆಗಲ್ಲ, ಬದಲಾಗಿ ಅಡ್ಡಿ ಮಾಡಿ ವಿಳಂಬಿಸಲು ಅಷ್ಟೆ.

**ಯೆಚೂರಿಯವರ ಭೇಟಿ–ಬೆಂಬಲ**

ಇಷ್ಟು ದಿನಗಳಾದರೂ ಚುನಾಯಿತ ಜನ ಪ್ರತಿನಿಧಿಗಳಾಲೀ, ಉಸ್ತುವಾರಿ ಸಚಿವರಾಗಲೀ, ಸಂಬಂಧಿಸಿದ ಸಮಾಜ ಕಲ್ಯಾಣ ಮಂತ್ರಿಯಾಗಲೀ ಇತ್ತ ಸುಳಿದೇ ಇಲ್ಲ. ಮುಖ್ಯಮಂತ್ರಿಗಳೂ ಕುರುಡು. ಇದು ಖಂಡನೀಯ.

ಆದರೆ ಸಿಪಿಐ(ಎಂ)ನ ಅಖಿಲ ಭಾರತ ಫ್ರಧಾನ ಕಾರ್ಯದರ್ಶಿ, ಸಂಸದರಾದ ಸೀತರಾಮ್ ಯೆಚೂರಿ ವಿಷಯ ತಿಳಿದ ಬಳಿಕ ಧರಣಿ ನಿರತರನ್ನು ಭೇಟಿ ಬೆಂಬಲಿಸಿದರಲ್ಲದೇ, ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸರಕಾರಕ್ಕೆ ಪತ್ರ ಬರೆದು ಒತ್ತಡ ಹಾಕುವುದಾಗಿ ಹೇಳಿದರು. ಈ ಹೋರಾಟಕ್ಕೆ ಆರಂಭದಿಂದಲೂ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಬೆಂಬಲಿಸಿ ಭಾಗವಹಿಸಿದೆ. ಅಲ್ಲದೇ ರಾಮನಗರದ ಕರ್ನಾಟಕ ಪ್ರಾಂತ ರೈತ ಸಂಘ, ಸಿ.ಐ.ಟಿ.ಯು., ಟೈಲರ್ಸ್ ಯೂನಿಯನ್, ದಲಿತ ಹಕ್ಕುಗಳ ಸಮಿತಿಗಳು ಸಕ್ರಿಯವಾಗಿ ಬೆಂಬಲಿಸಿವೆ. ಮುಖಂಡರಾದ ರಾಘವೇಂದ್ರ, ವನಜಾ, ವೆಂಕಟಾಚಲಯ್ಯ, ಯತೀಶ್ ಕುಮಾರ್, ಸಿದ್ಧ ಮಾದಯ್ಯ, ಕೆ.ಎನ್.ಉಮೇಶ್, ಗೋಪಾಲಕೃಷ್ಣ ಅರಳಹಳ್ಳಿ, ಗುರುಶಾಂತ್ ಎಸ್.ವೈ. ಭೇಟಿ ನೀಡಿದ್ದಾರೆ. ಕೂಡಲೇ ಸರಕಾರ ಮದ್ಯಪ್ರವೇಶ ಮಾಡಿ ಇತ್ಯರ್ಥಗೊಳಿಸದಿದ್ದಲ್ಲಿ ಹೋರಾಟವನ್ನು ಜಿಲ್ಲೆಯಾದ್ಯಂತ ವಿಸ್ತರಿಸುವುದಾಗಿ ಸಂಘಟನೆಗಳು ಎಚ್ಚರಿಸಿವೆ. ■

# ಶಾಂಘಾಯ್ ಸಹಕಾರ ಸಂಘಟನೆಯಲ್ಲಿ ಭಾರತ



## ಭಾರತ–ಪಾಕಿಸ್ತಾನ ಸಂಬಂಧ ಸುಧಾರಣೆಗೆ ನಾಂದಿಯಾಗಲಿ

**ಭಾರತ ಈಗ ಎಸ್‌ಸಿಓದ ಪೂರ್ಣ ಸದಸ್ಯ ಆಗಿರುವುದು ಮತ್ತು ಇದಕ್ಕೆ ಚೀನಾ ಹಾಗು ಪಾಕಿಸ್ತಾನ ಜೊತೆಗಿನ ಭಿನ್ನಾಭಿಪ್ರಾಯಗಳು ಅಡ್ಡಿಯಾಗದಿರುವುದು ಒಳ್ಳೆಯ ವಿಚಾರ. ಮೋದಿ ಸರಕಾರ ಈ ಎರಡೂ ನೆರೆ ದೇಶಗಳ ಕುರಿತು ಹೊಂದಿರುವ ಸಂಘರ್ಷದ ಹಾಗೂ ನಕಾರಾತ್ಮಕ ಧೋರಣೆಯ ಬಗ್ಗೆ ಸ್ವಲ್ಪ ಪುನರಾಲೋಚನೆ ಮಾಡಲು ಹಾಗೂ ಅಮೆರಿಕದೊಂದಿಗೆ ಮಿಲಿಟರಿ ಮತ್ತು ಭದ್ರತಾ ಸಂಬಂಧಗಳನ್ನು ಕಡಿಮೆ ಮಾಡುವುದನ್ನು ಆರಂಭಿಸಲು ಇದೀಗ ಪ್ರೇರೇಪಿಸಬೇಕಾಗಿದೆ.**



*** ಪ್ರಕಾಶ್ ಕಾರಟ್**

ಕಝಖ್‌ಸ್ತಾನದಲ್ಲಿ ನಡೆದ ಶಾಂಘಾಯ್ ಸಹಕಾರ ಸಂಘಟನೆ (ಎಸ್‌ಸಿಓ)ಯ ಅಸ್ತನಾ ಶೃಂಗ ಸಭೆಯಲ್ಲಿ ಭಾರತ ಮತ್ತು ಪಾಕಿಸ್ತಾನ ಸಂಸ್ಥೆಯ ಪೂರ್ಣ ಪ್ರಮಾಣದ ಸದಸ್ಯರಾಗಿ ಸೇರ್ಪಡೆಗೊಂಡಿವೆ. ಈ ಮಹತ್ವದ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಮತ್ತು ನವಾಜ್ ಷರೀಫ್ ತಮ್ಮ ತಮ್ಮ ದೇಶಗಳನ್ನು ಪ್ರತಿನಿಧಿಸಿದ್ದರು.

ಚೀನಾ, ರಷ್ಯಾ, ಕಝಖ್‌ಸ್ತಾನ್, ಕಿರ್ಗಿಝ್‌ಸ್ತಾನ್, ತಾಜಿಕಿಸ್ತಾನ್ ಮತ್ತು ಉಜ್ಬೆಕಿಸ್ತಾನ್– ಹೀಗೆ ಆರು ದೇಶಗಳನ್ನೊಳಗೊಂಡ ಎಸ್‌ಸಿಓ 2001ರಲ್ಲಿ ರಚನೆಯಾಗಿತ್ತು. ಭಯೋತ್ಪಾದನೆ, ಪ್ರತ್ಯೇಕತಾವಾದ ಮತ್ತು ಉಗ್ರವಾದವನ್ನು ಪ್ರತಿರೋಧಿಸುವ ಗುರಿಯೊಂದಿಗೆ ರಚನೆಯಾದ ಎಸ್‌ಸಿಓ ಮೂಲತಃ ಒಂದು ಭದ್ರತಾ ಮೈತ್ರಿಕೂಟವಾಗಿದೆ. ರಾಜಕೀಯ, ವಾಣಿಜ್ಯ, ಆರ್ಥಿಕತೆ, ತಂತ್ರಜ್ಞಾನದಲ್ಲಿ ಸಹಕಾರವನ್ನು ವೃದ್ಧಿಸುವ ಮತ್ತು ಶಾಂತಿ, ಭದ್ರತೆ ಹಾಗೂ ಸ್ಥಿರತೆಯನ್ನು ಸ್ಥಾಪಿಸಲು ಜಂಟಿ ಪ್ರಯತ್ನಗಳನ್ನು ಮಾಡುವುದಕ್ಕೆ ಸಂಬಂಧಿಸಿದ ಸನ್ನದೊಂದನ್ನು ಸಂಸ್ಥೆ 2002ರಲ್ಲಿ ಅಂಗೀಕರಿಸಿತು. ಬೀಜಿಂಗ್‌ನಲ್ಲಿ ಎಸ್‌ಸಿಓದ ಒಂದು ಸಚಿವಾಲಯವಿದೆ ಮತ್ತು ತಾಷ್ಕೆಂಟ್‌ನಲ್ಲಿ 'ಪ್ರಾದೇಶಿಕ ಭಯೋತ್ಪಾದನೆ–ನಿಗ್ರಹ ರಚನೆ'(ಆರ್‌ಎಟಿಎಸ್) ಯನ್ನು ಅದು ಹೊಂದಿದೆ.

ಭಾರತವು ಎಸ್‌ಸಿಓ ಸೇರುವುದರಿಂದ ಇಂಧನ ಮತ್ತು ಖನಿಜ ಸಂಪದ್ಭರಿತವಾದ ಮಧ್ಯ ಏಷ್ಯಾ ಗಣರಾಜ್ಯಗಳೊಂದಿಗೆ ಹೆಚ್ಚು ಸಂಬಂಧವನ್ನು ಹೊಂದಬಹುದಾಗಿದೆ. ಇದು ಮಧ್ಯ ಏಷ್ಯಾದ ಹೃದಯ ಭಾಗದೊಂದಿಗೆ ಭಾರತದ ಆರ್ಥಿಕ, ವಾಣಿಜ್ಯ ಸಂಬಂಧಗಳಿಗೆ ಮತ್ತು ಸಂಪರ್ಕ ಸಾಧನೆಗೆ ಸೌಕರ್ಯ ಒದಗಿಸುತ್ತದೆ. ಆ ಮೂಲಕ ರಷ್ಯಾ ಮತ್ತು ಚೀನಾ ಜೊತೆ ಆರ್ಥಿಕ ಮಟ್ಟದಲ್ಲಿ ಸಂಪರ್ಕವನ್ನು ಹೆಚ್ಚಿಸಲು ಭಾರತಕ್ಕೆ ಸಾಧ್ಯವಾಗುತ್ತದೆ.

ಭಾರತ 2005ರಲ್ಲಿ ಎಸ್‌ಸಿಓದ ಒಂದು ವೀಕ್ಷಕ ದೇಶವಾಯಿತು. ಆದರೆ, ಮನಮೋಹನ್ ಸಿಂಗ್ ಅಧಿಕಾರ ಅವಧಿಯಲ್ಲಿ ಅಮೆರಿಕ ಮತ್ತು ಭಾರತ ಸರಕಾರದ ನಡುವೆ ವ್ಯೂಹಾತ್ಮಕ ಮತ್ತು ಮಿಲಿಟರಿ ಸಂಬಂಧಗಳು ಹೆಚ್ಚಿದ ಹಿನ್ನೆಲೆಯಲ್ಲಿ ಎಸ್‌ಸಿಓದಲ್ಲಿ ಭಾರತದ ಭಾಗವಹಿಸುವಿಕೆ ಅರೆ ಮನಸ್ಸಿನದ್ದಾಗಿತ್ತು. ಅದೇನೇ ಇದ್ದರೂ ಯುರೇಷ್ಯಾದೊಂದಿಗೆ ಭೂಭಾಗದೊಂದಿಗೆ ಸಮಗ್ರೀಕರಣದ ವ್ಯೂಹಾತ್ಮಕ ಹಿತಾಸಕ್ತಿಯ ಕೈಮೇಲಾಯಿತು ಮತ್ತು ಎಸ್‌ಸಿಓದ ಪೂರ್ಣ ಸದಸ್ಯತ್ವಕ್ಕೆ ಭಾರತ 2014ರಲ್ಲಿ ಅರ್ಜಿ ಹಾಕಿತು.

ಭಾರತ ಈಗ ಎಸ್‌ಸಿಓದ ಪೂರ್ಣ ಸದಸ್ಯ ಆಗಿರುವುದು ಮತ್ತು ಇದಕ್ಕೆ ಚೀನಾ ಹಾಗು ಪಾಕಿಸ್ತಾನ ಜೊತೆಗಿನ ಭಿನ್ನಾಭಿಪ್ರಾಯಗಳ ಸಂಕುಚಿತ ಅಂಶ ಅಡ್ಡಿಯಾಗದಿರುವುದು ಒಳ್ಳೆಯ ವಿಚಾರ. ಆದರೆ ಭಾರತದ ಆಡಳಿತ ವ್ಯವಸ್ಥೆಯಲ್ಲಿ ಎಸ್‌ಸಿಓ ಸದಸ್ಯತ್ವದ ವಿಚಾರ ಹಾಗೂ ದೇಶದ ವಿದೇಶಾಂಗ ಧೋರಣೆ ಮತ್ತು ಕಳೆದ ಒಂದುವರೆ ದಶಕದ ಅವಧಿಯಲ್ಲಿ ದೇಶ ಅನುಸರಿಸಿದ ವ್ಯೂಹಾತ್ಮಕ ಸಂಬಂಧಗಳಲ್ಲಿ ಅಂತರ್ಗತವಾಗಿರುವ ವೈರುಧ್ಯಗಳ ಬಗ್ಗೆ ಗೊಂದಲವಿದೆ. ಅಮೆರಿಕದೊಂದಿಗೆ ಭಾರತ ಹೆಚ್ಚೆಚ್ಚು ಮಿಲಿಟರಿ ಸಂಬಂಧವನ್ನು ಬೆಳೆಸುತ್ತಿದೆ ಹಾಗೂ ಭಾರತವನ್ನು ಅಮೆರಿಕ ತನ್ನ 'ಪ್ರಮುಖ ರಕ್ಷಣಾ ಪಾಲುದಾರ' ಎಂದು ಪರಿಗಣಿಸಿದೆ. ಎಸ್‌ಸಿಓ ಅಮೆರಿಕವನ್ನು ಹೊರತುಪಡಿಸಿದ ಭದ್ರತಾ ಕೂಟವಾಗಿದ್ದು ಏಷ್ಯಾದಲ್ಲಿ ಅಮೆರಿಕದ ಭೌಗೋಳಿಕ–ರಾಜಕೀಯ ಕಾರ್ಯತಂತ್ರವನ್ನು ಅದು ಮಾನ್ಯ ಮಾಡುವುದಿಲ್ಲ.

ಅಧ್ಯಕ್ಷ ಬರಾಕ್ ಒಬಾಮಾ ಅವಧಿಯಲ್ಲಿ ಅಮೆರಿಕಾದ 'ಏಷ್ಯಾಕ್ಕೆ ಆಧಾರಗೂಟ' ಎಂಬುದರಲ್ಲಿ ಮೋದಿ ಸರಕಾರ ಬಹಳ ಉತ್ಸುಕತೆಯಿಂದ ಅಮೆರಿಕದೊಂದಿಗೆ ಕೈಜೋಡಿಸಿತ್ತು. ಇದೀಗ ಡೊನಾಲ್ಡ್ ಟ್ರಂಪ್ ಆಡಳಿತದ ವ್ಯೂಹಾತ್ಮಕ ನೋಟದಲ್ಲಿ ಅನಿಶ್ಚಿತತೆ ಇರುವುದರಿಂದ, ಎಸ್‌ಸಿಓ ಸದಸ್ಯತ್ವ ಅಮೆರಿಕದೊಂದಿಗೆ ಮಿಲಿಟರಿ ಮತ್ತು ಭದ್ರತಾ ಸಂಬಂಧಗಳನ್ನು ಕಡಿಮೆ ಮಾಡುವುದನ್ನು ಆರಂಭಿಸಲು ಸಕಾಲವಾಗಿದೆ.

ಚೀನಾದ 'ಬೆಲ್ಟ್ ರೋಡ್ ಉಪಕ್ರಮ' (ಬಿಆರ್‌ಐ)ಕ್ಕೆ ಭಾರತ ವಿರೋಧ ವ್ಯಕ್ತಪಡಿಸಿದೆ. ಎಸ್‌ಸಿಓದ ಇತರ ಎಲ್ಲಾ ಏಳು ದೇಶಗಳು ಬಿಆರ್‌ಐ ಪಾಲುದಾರರಾಗಿದ್ದು ಅದನ್ನು ಅನುಮೋದಿಸಿವೆ. ಹೀಗಾಗಿ ಭಾರತ ತನ್ನ ನಿಲವನ್ನು ಪರಿಷ್ಕರಿಸುವುದು ಮತ್ತು ' 'ಒನ್ ಬೆಲ್ಟ್ ಒನ್ ರೋಡ್'(ಒಂದು ಪಟ್ಟಿ ಒಂದು ರಸ್ತೆ) ಯೋಜನೆಗೆ ಸಹಕರಿಸಲು ಮಾರ್ಗೋಪಾಯ ಕಂಡುಕೊಳ್ಳುವುದು ಒಳ್ಳೆಯದು. ಏಕೆಂದರೆ ಮಧ್ಯ ಏಷ್ಯಾ ಇದರ ಹೃದಯಭಾಗದಲ್ಲಿದೆ.

ಪಾಕಿಸ್ತಾನ ಮತ್ತು ಚೀನಾ ಜೊತೆ ಎಸ್‌ಸಿಓದ ಜಂಟಿ ವೇದಿಕೆಯಲ್ಲಿರುವುದರಿಂದ ಇದು ಮೋದಿ ಸರಕಾರ ಈ ಎರಡೂ ನೆರೆ ದೇಶಗಳ ಕುರಿತು ಹೊಂದಿರುವ ಸಂಘರ್ಷದ ಹಾಗೂ ನಕಾರಾತ್ಮಕ ಧೋರಣೆಯ ಬಗ್ಗೆ ಸ್ವಲ್ಪ ಪುನರಾಲೋಚನೆ ಮಾಡುವಂತೆ ಪ್ರೇರಿಸಬೇಕಾಗಿದೆ.

ಎಸ್‌ಸಿಓ ಶೃಂಗ ಸಭೆಯ ಕೆಲವು ದಿನಗಳ ಮುಂಚೆ ಸೇಂಟ್ ಪೀಟರ್ಸ್‌ಬರ್ಗ್ 'ಅಂತಾರಾಷ್ಟ್ರೀಯ ಆರ್ಥಿಕ ವೇದಿಕೆ'ಯಲ್ಲಿ ಮಾತನಾಡಿದ ಪ್ರಧಾನಿ ಮೋದಿ ಒಂದಿಷ್ಟು ವಾಸ್ತವ ಭಾವವನ್ನು ತೋರ್ಪಡಿಸಿದ್ದರು. "ಚೀನಾದೊಂದಿಗೆ ನಮಗೆ ಗಡಿ ವಿವಾದ ಇದೆ ಎನ್ನುವುದು ನಿಜ. ಆದರೆ, ಕಳೆದ 40 ವರ್ಷಗಳಲ್ಲಿ ಗಡಿ ವಿವಾದದ ಕಾರಣಕ್ಕಾಗಿ ಒಂದೇ ಒಂದು ಗುಂಡು ಹಾರಾಟ ನಡೆದಿಲ್ಲ" ಎಂದು ಮೋದಿ ಆ ಭಾಷಣದಲ್ಲಿ ಹೇಳಿದ್ದರು. ಎರಡು ಆರ್ಥಿಕ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಬ್ರಿಕ್ಸ್ ಚೌಕಟ್ಟಿನೊಳಗೆ ಚೀನಾ ಮತ್ತು ಭಾರತ ಸಹಕರಿಸಿವೆ ಎಂದೂ ಮೋದಿ ಹೇಳಿದ್ದಾರೆ.

ಪ್ರಾದೇಶಿಕ ಸ್ಥಿರತೆ ಮತ್ತು ಭದ್ರತೆ ಒದಗಿಸುವ ವಿಚಾರದಲ್ಲಿ ಎಸ್‌ಸಿಓ ತುಂಬು ಕಾಳಜಿ ವ್ಯಕ್ತಪಡಿಸುತ್ತಿದೆ. ಅದು ಅಫಘಾನಿಸ್ತಾನದ ಸರಪಡಿಸಲಾಗಂತೆ ಕಾಣುವ ಸಂಘರ್ಷವನ್ನು ನಿಭಾಯಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಬಹುದಾಗಿದೆ. ಈ ವೇದಿಕೆಯನ್ನು ರಚನಾತ್ಮಕ ರೀತಿಯಲ್ಲಿ ಬಳಸಿಕೊಳ್ಳಲು ಭಾರತಕ್ಕೆ ಸಾಧ್ಯವಾಗಬೇಕು. ಪಾಕಿಸ್ತಾನದೊಂದಿಗೆ ರಾಜಕೀಯ ಮಾತುಕತೆ ಪುನಾರಂಭಿಸಲು ಮಾರ್ಗೋಪಾಯ ಕಂಡುಕೊಳ್ಳುವುದು ಅದರಲ್ಲಿ ಒಂದು ಪ್ರಮುಖ ಭಾಗವಾಗಿದೆ. ಭಾರತ–ಪಾಕಿಸ್ತಾನ ನಡುವಿನ ಸಂಘರ್ಷ ಮತ್ತು ವೈಷಮ್ಯದಿಂದಾಗಿ ಸಾರ್ಕ್ ಕುಂಠಿತಗೊಂಡಿದೆ. ಶಾಂಘಾಯ್ ಸಹಕಾರ ಸಂಘಟನೆಯಲ್ಲಿ ಒಟ್ಟಿಗೆ ಇರುವುದು, ಈ ಕಹಿ ಮತ್ತು ಸಂಘರ್ಷಮಯ ಸಂಬಂಧವನ್ನು ಸರಿಪಡಿಸುವಲ್ಲಿ ಒಂದು ನಾಂದಿ ಹಾಡಲಿ ಎಂದು ಆಶಿಸೋಣ.

**ಅನು : ವಿಶ್ವ**



## ಪ್ರಧಾನ ಮಂತ್ರಿಗಳಿಗೆ ಸೀತಾರಾಮ್ ಯೆಚುರಿ ಪತ್ರ

## "ರೈತರಿಗೆ ಕನಿಷ್ಟ ಬೆಂಬಲ ಬೆಲೆಯ ಹಕ್ಕು ಮತ್ತು ಅದರ ವಾರ್ಷಿಕ ಪರಾಮರ್ಶೆಯ ಖಾತ್ರಿ ನೀಡುವ ಶಾಸನ ತನ್ನಿ"

**ರೈತರಿಗೆ ತಮ್ಮ ಉತ್ಪನ್ನಗಳನ್ನು ಕನಿಷ್ಟ ಬೆಂಬಲ ಬೆಲೆಯಲ್ಲಿ ಮಾರುವ ಹಕ್ಕನ್ನು ಕೊಡುವ ಮತ್ತು ಈ ಕನಿಷ್ಟ ಬೆಂಬಲ ಬೆಲೆಯನ್ನು ಪ್ರತಿವರ್ಷ ಪರಾಮರ್ಶಿಸುವ, ಅದು ಆಯಾ ವರ್ಷದ ಕೃಷಿ ವೆಚ್ಚಗಳಿಗಿಂತ ಕನಿಷ್ಟ 50% ಹೆಚ್ಚಿರುತ್ತದೆ ಎಂದು ಖಾತ್ರಿ ಕೊಡುವ ಒಂದು ಶಾಸನವನ್ನು ಸಂಸತ್ತಿನ ಮುಂಬರುವ ಮುಂಗಾರು ಅಧಿವೇಶನದಲ್ಲಿ ಮಂಡಿಸಬೇಕು ಎಂದು ಆಗ್ರಹಿಸಿ ಜೂನೆ 15ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯಸಭೆಯಲ್ಲಿ ಸಿಪಿಐ(ಎಂ) ಗುಂಪಿನ ಮುಖ್ಯಸ್ಥರೂ ಸೀತಾರಾಮ್ ಯೆಚುರಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಆ ಪತ್ರದ ಪೂರ್ಣ ಒಕ್ಕಣಿಕೆ ಇಲ್ಲಿದೆ:**

**ಪ್ರಿಯ ಪ್ರಧಾನ ಮಂತ್ರಿಗಳೇ,**

ನಾನು ಈ ಪತ್ರವನ್ನು ದೇಶದೆಲ್ಲೆಡೆಯಲ್ಲಿ ರೈತರ ದುಃಸ್ಥಿತಿಯತ್ತ, ಇದರ ಫಲಿತಾಂಶವಾಗಿ ಕಳೆದ ಮೂರು ವರ್ಷಗಳಲ್ಲಿ ಅತ್ಯಂತ ದೊಡ್ಡ ಮಟ್ಟದಲ್ಲಿ ಗ್ರಾಮೀಣ ಸಂಕಟವನ್ನು ಉಂಟುಮಾಡಿರುವ, ಸಾವಿರಾರು ರೈತರ ಆತ್ಮಹತ್ಯೆಗಳು ನಡೆಯುತ್ತಿರುವ ಪರಿಸ್ಥಿತಿಯತ್ತ ತಮ್ಮ ಗಮನವನ್ನು ಸೆಳೆಯಲು ಬರೆಯುತ್ತಿದ್ದೇನೆ. ರೈತರ ಪ್ರತಿಭಟನೆಗಳು ಒಂದಾದ ನಂತರ ಒಂದರಂತೆ ವಿವಿಧ ರಾಜ್ಯಗಳಲ್ಲಿ ಹೆಚ್ಚುತ್ತಿವೆ, ಇವುಗಳ ಬಗ್ಗೆ ನೀವು ಮೌನ ಮತ್ತು ನಿರಾಸಕ್ತಿಯಿಂದಿದ್ದರೆ, ನಿಮ್ಮ ಪಕ್ಷದ ರಾಜ್ಯ ಸರಕಾರಗಳು ಬಡ ರೈತರ ಮೇಲೆ ಪೋಲೀಸರನ್ನು ಹರಿಯ ಬಿಟ್ಟಿವೆ. ಮಧ್ಯಪ್ರದೇಶದಲ್ಲಿ ಆರು ರೈತರು ತಮ್ಮ ಪ್ರಾಣ ಕಳಕೊಂಡಿದ್ದಾರೆ., ಇನ್ನೂ ಹಲವು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ನಡುವೆ, ಹಲವರು ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಲೇ ಇದ್ದಾರೆ, ಇದರಲ್ಲಿ ಇತ್ತೀಚಿನದೆಂದರೆ, ಮುಖ್ಯಮಂತ್ರಿಗಳ ಸ್ವಂತ ಕ್ಷೇತ್ರದಲ್ಲೇ ಇಂತಹ ಒಂದು ದುರಂತ ನಡೆದಿರುವುದು.

ಮಹಾರಾಷ್ಟ್ರದಲ್ಲಿ ನಿಮ್ಮ ಪಕ್ಷದ ರಾಜ್ಯ ಸರಕಾರದ ಸ್ಪಂದನೆ ಕೂಡ ಇಷ್ಟೇ ಸಂವೇದನಾಶೂನ್ಯ ಮತ್ತು ದಮನಕಾರಿ ಆಗಿದೆ. ನಾಶಿಕ್‌ಗೆ, 15 ತಿಂಗಳ ಹಿಂದೆ, ನಾನು ಭೇಟಿ ನೀಡಿದ್ದಾಗ, ಮಹಾರಾಷ್ಟ್ರ ರೈತರು ನಗರದಲ್ಲಿ ದಿಗ್ಬಂಧನ ಹಾಕಿದ್ದರು, ಆಗ ಮುಖ್ಯಮಂತ್ರಿಗಳು ಮಾತುಕತೆಗೆ ಕರೆದಿದ್ದರು, ಎಲ್ಲ ಬೇಡಿಕೆಗಳನ್ನು ಇತರ್ಥ ಮಾಡಲು ಆರು ತಿಂಗಳು ಕೇಳಿದ್ದರು. ಆನಂತರ ಹದಿನೈದು ತಿಂಗಳು ಕಳೆದಿವೆ, ಇದಾದ ನಂತರ ರೈತಾಪಿ ಜನಗಳು ಒಂದು ಅನನ್ಯ ಸ್ವರೂಪದ ಹೋರಾಟ ನಡೆಸಲು, ಒಂದು ರೈತ ಮುಷ್ಕರ ನಡೆಸಲು ನಿರ್ಧರಿಸಿದರು. ಅದನ್ನನುಸರಿಸಿ ಕಳೆದ ವಾರ ಮಾತುಕತೆಗಳು ನಡೆದಿವೆ. ಈಗಲೂ ಕೂಡ ರೈತ ಸಂಘಟನೆಗಳು ಇತ್ತೀಚಿನ ಈ ಒಪ್ಪಂದವನ್ನು ಅಕ್ಷರಶಃ ಗೌರವಿಸದಿದ್ದರೆ, ಜುಲೈ 26, 2017ರಿಂದ ಚಳುವಳಿಯನ್ನು ಪುನರಾರಂಭಿಸುವುದಾಗಿ ಎಚ್ಚರಿಸಿವೆ.

ತಾವು, ಶ್ರೀಯುತ ಪ್ರಧಾನ ಮಂತ್ರಿಗಳೇ, ನಿಮ್ಮ ಚುನಾವಣಾ ಪ್ರಚಾರದಲ್ಲಿ ರೈತರಿಗೆ ಅವರ ಉತ್ಪಾದನಾ ವೆಚ್ಚಗಳ ಮೇಲೆ 50% ನಿವ್ವಳ ಲಾಭ ಒದಗಿಸುವ ಕನಿಷ್ಟ ಬೆಂಬಲ ಬೆಲೆಯ ಆಶ್ವಾಸನೆಯನ್ನು ಕೊಟ್ಟಿದ್ದೀರಿ ಎಂಬುದನ್ನು ನೆನಪಿಸುವುದು ನನ್ನ ಕರ್ತವ್ಯ. ಕಳೆದ ಮೂರು ವರ್ಷಗಳಲ್ಲಿ, ಈ ಆಶ್ವಾಸನೆಯನ್ನು ಈಡೇರಿಸಲು ತಾವು ಏನನ್ನೂ ಮಾಡಿಲ್ಲ. ನಿಮ್ಮ ಸರಕಾರ ವಿವಿಧ ಬೆಳೆಗಳಿಗೆ ನಿಗದಿ ಮಾಡಿರುವ ಪ್ರಸಕ್ತ ಕನಿಷ್ಟ ಬೆಂಬಲ ಬೆಲೆಗಳು ರೈತರಿಗೆ ಸುಮಾರಾಗಿ ಯಾವ ಪ್ರತಿಫಲವನ್ನೂ ಕೊಡುವಂತದ್ದಲ್ಲ.

ಎರಡು ಸರಕಾರೀ ಸಂಸ್ಥೆಗಳಾದ, ಭಾರತ ಆಹಾರ ನಿಗಮ(ಎಫ್‌ಸಿಐ) ಮತ್ತು ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ(ನಫೆಡ್), ಈಗಿನ ಕನಿಷ್ಟ ಬೆಂಬಲ ಬೆಲೆಯಲ್ಲೂ ರೈತನ ಎಲ್ಲ ಉತ್ಪನ್ನಗಳನ್ನು ಖರೀದಿಸುವುದಿಲ್ಲ. ಇದರಿಂದಾಗಿ ರೈತ ತನ್ನ ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ನಷ್ಟ ಮಾಡಿಕೊಂಡು ಮಾರಲೇ ಬೇಕಾಗಿ ಬರುತ್ತಿದೆ.

ಇಂತಹ ಸನ್ನಿವೇಶಗಳಲ್ಲಿ, ನಿಮ್ಮ ಸರಕಾರ ಸಂಸತ್ತಿನ ಮುಂಬರುವ ಮುಂಗಾರು ಅಧಿವೇಶನದಲ್ಲಿ ರೈತರಿಗೆ ಕನಿಷ್ಟ ಬೆಂಬಲ ಬೆಲೆಯಲ್ಲಿ ಮಾರುವ ಹಕ್ಕು ಮಾತ್ರವಲ್ಲ, ಈ ಕನಿಷ್ಟ ಬೆಂಬಲ ಬೆಲೆಯ ವಾರ್ಷಿಕ ಪರಾಮರ್ಶೆಯನ್ನು ಆಯಾ ವರ್ಷ ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ(ಸಿಎಸಿಪಿ) ನಿರ್ಧರಿಸಿದಂತೆ ಸಮಗ್ರ ಉತ್ಪಾದನಾ ವೆಚ್ಚಗಳ ಕನಿಷ್ಟ 50% ಹೆಚ್ಚಿರುತ್ತದೆ ಎಂಬ ಖಾತ್ರಿಯನ್ನು ಕೊಡುವಂತಹ ಒಂದು ಶಾಸನವನ್ನು ಮಂಡಿಸಬೇಕು ಎಂದು ಆಗ್ರಹಿಸಲು ನಾನು ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ.

ಅಭಿವಂದನೆಗಳೊಂದಿಗೆ,

ನಿಮ್ಮ ವಿಶ್ವಾಸಿ

**ಸೀತಾರಾಮ್ ಯೆಚುರಿ**

# ಕಾವೇರಿ ಕಣಿವೆಯಲ್ಲಿ ಕೆಂಪು ನೆರೆ




ಬಹುಶಃ ದೀರ್ಘ ಅವಧಿಯಲ್ಲಿ ಕಾವೇರಿ ಕಣಿವೆಯಲ್ಲಿರುವ ಮೈಸೂರಿನಲ್ಲಿ ಕೆಂಪು ನೆರೆ ಬಂದಿರಲಿಲ್ಲ. ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿದ್ದ ಎಂಟು ಸಾವಿರಕ್ಕೂ ಹೆಚ್ಚು ಜನ ಕೆಂಬಾವುಟ ಹಿಡಿದು ಭಾಗವಹಿಸಿದ್ದ ಮೆರವಣಿಗೆ ಮೈಸೂರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜೂನ್ 11ರಂದು ಮೈಸೂರಿನಲ್ಲಿ ಕೆಂಪು ನೆರೆ ಬಂದ ಹಾಗಿತ್ತು. ಸಂದರ್ಭ ಸಿಪಿಐ(ಎಂ) ಹಮ್ಮಿಕೊಂಡಿದ್ದ "ಸಂವಿಧಾನ ಉಳಿಸಿ ದೇಶಪ್ರೇಮಿ ಸಮಾವೇಶ". ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಳೆದ ಮೂರು ವರ್ಷಗಳಲ್ಲಿ ಒಂದು ಕಡೆ ಹುಸಿ ದೇಶಪ್ರೇಮದ ಉದ್ರೇಕ ಹರಡುತ್ತಾ ಇನ್ನೊಂದು ಕಡೆ ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡುತ್ತಾ ಇರುವ ಹಿನ್ನೆಲೆಯಲ್ಲಿ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾವೇಶದ ಮೊದಲು ಹಲವು ದಿನಗಳ ಕಾಲ "ಸಂವಿಧಾನ ಉಳಿಸಿ ದೇಶಪ್ರೇಮಿ ಸಮಾವೇಶ"ದ ಮುಖ್ಯ ಆಶಯಗಳ ಬಗ್ಗೆ ಪ್ರಚಾರ ನಡೆದಿತ್ತು. "ಸಂವಿಧಾನ ಉಳಿಸಿ" "ದೇಶಪ್ರೇಮಿ" ಆಶಯಗಳ ಬಗ್ಗೆ ಮೈಸೂರು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಹಲವು ಪ್ರಚಾರಾಂದೋಲನಗಳು, ಪತ್ರಿಕಾ ಗೋಷ್ಠಿಗಳು, ವಿಚಾರ ಸಂಕಿರಣಗಳು, ಜನಸಂಘಟನೆಗಳು ನಡೆಸಿದ ಸಭೆಗಳೂ, ಜಿಲ್ಲಾ ಸಮಾವೇಶಗಳು ನಡೆದಿದ್ದವು. ಜೂನ್ 7ರಂದು ನಿವೃತ್ತ ಸುಪ್ರೀಂ ಕೋರ್ಟು ನ್ಯಾಯಮೂರ್ತಿ ಗೋಪಾಲಗೌಡರು ಭಾಗವಹಿಸಿದ "ಸಂವಿಧಾನದ ಮೂಲಭೂತ ಆಶಯಗಳು ಮತ್ತು ಸವಾಲುಗಳು" ಎಂಬ ವಿಷಯದ ಮೇಲೆ ಪ್ರಮುಖ ವಿಚಾರ ಸಂಕಿರಣ ನಡೆದಿತ್ತು. (ವರದಿ ಕಳೆದ ವಾರದ ಸಂಚಿಕೆಯಲ್ಲಿ).

ಅದೇ ರೀತಿ ಎರಡು ಸರಣಿ ("ನಮ್ಮ ಸಂವಿಧಾನ ನಮ್ಮ ಹೆಮ್ಮೆ", "ಸಂವಿಧಾನ ಉಳಿಸಿ") ಫೇಸ್ ಬುಕ್ ಪೋಸ್ಟರುಗಳ ಮೂಲಕ ಸಾಮಾಜಿಕ ಮಾಧ್ಯಮಗಳಲ್ಲೂ ಪ್ರಚಾರಾಂದೋಲನ ನಡೆದಿತ್ತು. (ಇದರ ಸ್ಯಾಂಪಲುಗಳೂ ಕಳೆದ ವಾರದ ಸಂಚಿಕೆಯಲ್ಲಿ) ಹಲವು ದೇಶಪ್ರೇಮಿಗಳು ಪ್ರಗತಿಪರ ಬುದ್ಧಿಜೀವಿಗಳು ನಾಯಕರು ಸಮಾವೇಶಧ ಆಶಯಗಳನ್ನು ಬೆಂಬಲಿಸಿ ಮಾತನಾಡಿದ ವಿಡಿಯೋಗಳೂ ಹೇಳಿಕೆಗಳ ಪೋಸ್ಟರುಗಳೂ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದವು. ಹಿಂದಿನ ದಿನವೇ ಬಹಿರಂಗ ಸಭೆ ನಡೆಯಬೇಕಾಗಿದ್ದ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ವೇದಿಕೆ ಸಜ್ಜಾಗಿತ್ತು.

ಸಮಾವೇಶದ ದಿನ ಬೆಳಗ್ಗಿನಿಂದಲೇ ಮೆರವಣಿಗೆ ಆರಂಭವಾಗಬೇಕಾಗಿದ್ದ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಜನ ಸೇರಲು ಆರಂಭಿಸಿದ್ದರು. ಆಗಲೇ ಉದ್ಯಾನವನ ಕಂಪುಮಯವಾಗಿತ್ತು – ಕೆಂಪು ಸ್ವಯಂಸೇವಕರು ಸ್ವಯಂಸೇವಿಕೆಯರಿಂದ ಕೆಂಬಾವುಟಗಳಿಂದ. ಮೆರವಣಿಗೆಯ ಎದುರಲ್ಲಿ ಹೋಗಲಿದ್ದ ತಮಟೆಯವರು ಆಗಲೇ ತಮಟೆಯೊಂದಿಗೆ ನರ್ತಿಸತೊಡಗಿದ್ದರು. ಮಂಡ್ಯ, ಮಳವಳ್ಳಿ, ಮೈಸೂರಿನ ವಿವಿಧ ಭಾಗಗಳಿಂದ 10 ಗಂಟೆಗೆ ಬೈಕ್ ರ‍್ಯಾಲಿಗಳು ಆರಂಭವಾಗಿದ್ದವು.

ಕೊನೆಗೂ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮೆರವಣಿಗೆ ಆರಂಭವಾಯಿತು. ಮುಂದೆ ಕೆಂಬಾವುಟ ಹೊತ್ತ ಬೈಕ್‌ಗಳಲ್ಲಿ ಸ್ವಯಂಸೇವಕರು, ಆ ನಂತರ ತಮಟೆಯವರು, ಆ ಮೇಲೆ ಮೆರವಣಿಗೆಯ ಮುಖ್ಯ ಬ್ಯಾನರ್ ಹಿಡಿದ ಹಿರಿಯ ನಾಯಕರುಗಳು, ಅವರ ಹಿಂದೆ ಸ್ವಯಂಸೇವಿಕೆಯರು, ಅವರ ಹಿಂದೆ ಕೆಂಬಾವುಟಗಳನ್ನು ಹಿಡಿದ ಸಾವಿರಾರು ಜನ. ಮೆರವಣಿಗೆ ದಸರಾ ವಸ್ತುಪ್ರದರ್ಶನ ಮೈದಾನದ ಮುಟ್ಟಿದಾಗ ಒಂದು ವರೆ ಗಂಟೆ ದಾಟಿತ್ತು. ಆಗಲೇ ಅಲ್ಲೂ ಜನ ಬಹಿರಂಗ ಸಭೆಗೆ ಜನ ಜಮಾಯಿಸಿದ್ದರು. ಪ್ರಗತಿಪರ ಕ್ರಾಂತಿಗೀತೆಗಳು ಮೊಳಗುತ್ತಿದ್ದವು.

ಸ್ವಲ್ಪ ಹೊತ್ತಿನಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಆಗಮಿಸುತ್ತಿದ್ದಂತೆ ಬಹಿರಂಗ ಸಭೆ ಆರಂಭವಾಯಿತು. ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಕಾ. ಯೆಚುರಿ ಮಾಲಾರ್ಪಣೆ ಮಾಡುವ ಮೂಲಕ ಸಮಾವೇಶಕ್ಕೆ ಚಾಲನೆ ನೀಡಲಾಯಿತು. ಬಹಿರಂಗ ಸಭೆಯಲ್ಲಿ ಮುಖ್ಯ ಭಾಷಣವನ್ನು ಕಾ. ಯೆಚುರಿ ಅವರು ಮಾಡಿದರು. ಸಿಪಿಐ(ಎಂ) ಕರ್ನಾಟಕ ಸೆಕ್ರೆಟಾರಿಯಟ್ ಸದಸ್ಯ ಕಾ. ಕೆ.ಎನ್. ಉಮೇಶ್ ಕನ್ನಡ ಅನುವಾದ ಮಾಡಿದರು. ಆ ನಂತರ ಸಿಪಿಐ(ಎಂ) ಕರ್ನಾಟಕ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಮತ್ತು ಸೆಕ್ರೆಟಾರಿಯಟ್ ಸದಸ್ಯ ಕಾ. ಜಿ.ಎನ್. ನಾಗರಾಜ್ ಮಾತನಾಡಿದರು. ಮೈಸೂರು ಜಿಲ್ಲಾ ಕಾರ್ಯದರ್ಶಿ ಕಾ. ಕೆ. ಬಸವರಾಜ್ ಅಧ್ಯಕ್ಷೀಯ ಭಾಷಣ ಮಾಡಿದರು.

ಇದಕ್ಕಿಂತ ಮೊದಲು ಕಾ. ಯೆಚುರಿ ಅವರು ಪ್ರೊ. ಪ್ರಭಾತ್ ಪಟ್ನಾಯಕ್ ಅವರ 6 ಲೇಖನಗಳ ಕನ್ನಡ ಅನುವಾದಗಳಿರುವ ಕ್ರಿಯಾ ಪುಸ್ತಕ ಪ್ರಕಟಿಸಿರುವ "ರಾಷ್ಟ್ರವಾದ, ಪ್ರಜಾಪ್ರಭುತ್ವ ಮತ್ತು ಹಿಂದುತ್ವ" ಎಂಬ ಪುಸ್ತಕದ ಬಿಡುಗಡೆ ಮಾಡಿದರು. ಖಾಸಗೀಕರಣದ ವಿರುದ್ಧ ಹೋರಾಡುತ್ತಿರುವ (ಮತ್ತು ಮೈಸೂರಿನಲ್ಲಿ ಒಂದು ಘಟಕ ಹೊಂದಿರುವ) ಬಿ.ಇ.ಎಂ.ಎಲ್. ಕಾರ್ಮಿಕರು ತಮ್ಮ ಹಕ್ಕೊತ್ತಾಯಗಳನ್ನು ಪಾರ್ಲಿಮೆಂಟಿನಲ್ಲಿ ಬೆಂಬಲಿಸಲು ಕೋರಿ ಮನವಿಪತ್ರ ಸಲ್ಲಿಸಿದರು.






ಸಂವಿಧಾನದ ಆಶಯಗಳನ್ನು ಸ್ವಾತಂತ್ರ್ಯ ಪೂರ್ವದಲ್ಲೇ ಕಟ್ಟಿಕೊಟ್ಟ ನಗರ ಮೈಸೂರು. ಮೈಸೂರು ಸಾಂಸ್ಕೃತಿಕ ಮತ್ತು ಐತಿಹಾಸಿಕವಾಗಿ ಪ್ರಗತಿಪರ ರಾಜ್ಯವಾಗಿದ್ದು, ಟಿಪ್ಪು ಸುಲ್ತಾನನ ಆಡಳಿತ ಸಮಯದಲ್ಲಿ ಕ್ರಾಂತಿಕಾರಿಯಾಗಿದ್ದ ನಾಡು. ನಾಲ್ವಡಿ ಕೃಷ್ಣರಾಜ ವಡೆಯರ್ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಕಟ್ಟಿಕೊಟ್ಟಿದ್ದರು. ಆಧುನಿಕ ಮೈಸೂರಿನ ನಿರ್ಮಾಪಕ ಮಿರ್ಜಾ ಇಸ್ಮಾಯಿಲ್, ವಿಶ್ವೇಶ್ವರಯ್ಯ, ಸಾಂಸ್ಕೃತಿಕವಾಗಿ ಮೈಸೂರನ್ನು ಶ್ರೀಮಂತಗೊಳಿಸಿದ ಕುವೆಂಪು, ಜಿಎಸ್ ಶಿವರುದ್ರಪ್ಪ, ದೇವನೂರು ಮಹದೇವ, ಯುಆರ್ ಅನಂತಮೂರ್ತಿ ಮೊದಲಾದ ಪ್ರಗತಿಪರರು, ಜಾತ್ಯತೀತವಾದಿಗಳು ಇದ್ದ ನಾಡು ಮೈಸೂರು. ಅಂದಿನ ಮೈಸೂರಿನ ಆಶಯಗಳನ್ನು ಮತ್ತೆ ಕಟ್ಟಿಕೊಡಬೇಕಾದ ತುರ್ತು ಈಗ ಬಂದೊದಗಿದೆ. ಈ ನಿಟ್ಟಿನಲ್ಲಿ ಸಂವಿಧಾನ ಉಳಿಸಿ ಘೋಷಣೆಯೊಂದಿಗೆ ಮೈಸೂರಿನಲ್ಲಿ ಈ ಸಮಾವೇಶ ನಡೆಯುತ್ತಿದ್ದು, ಇದರಲ್ಲಿ ಭಾಗವಹಿಸುವುದು ಸಂತಸ ತಂದಿದೆ.

ಒಂದು ಮತಕ್ಕೆ ಒಂದು ಮೌಲ್ಯ ನಮ್ಮ ಸಂವಿಧಾನಬದ್ಧ ಹಕ್ಕು. ಆದರೆ ಇಂದು ಈ ಹಕ್ಕನ್ನು ಹಣಬಲ, ತೋಳ್ಬಲಗಳಿಂದ ತಿರುಚಲಾಗುತ್ತಿದೆ. ನಮ್ಮ ಸಂವಿಧಾನದ ಮೂಲಭೂತ ಆಶಯಗಳು –ಸ್ವಾತಂತ್ರ್ಯ, ಸಮಾನತೆ, ಸಹೋದರತೆ. ಈ ಮೂರೂ ಮೂಲಭೂತ ಆಶಯಗಳು ಇಂದು ಅಪಾಯದ ಅಂಚಿಗೆ ಬಂದು ನಿಂತಿದೆ. ಮುಂದಿನ ಗಣ–ರಾಜ್ಯೋತ್ಸವದ ವರೆಗಾದರೂ ಇದನ್ನು ಉಳಿಸಿಕೊಂಡು ಹೋಗುತ್ತೇವಾ ಎಂದು ಕಾದುನೋಡುವ ಹಂತಕ್ಕೆ ನಾವು ಬಂದು ತಲುಪಿದ್ದೇವೆ.

ಸಂವಿಧಾನ ರಕ್ಷಣೆ ಒಂದು ಮಹತ್ತರವಾದ ವಿಷಯ. ವಸಾಹತುಷಾಹಿ ದೇಶಗಳಲ್ಲೇ ಮೊದಲ ಬಾರಿಗೆ ಸಮಾನತೆಯ ಹಕ್ಕನ್ನು ನೀಡಲಾಗಿದ್ದು ಇಂಡಿಯಾದಲ್ಲಿ. ಒಂದು ಮತ ಒಂದು ಮೌಲ್ಯ ಆಧಾರದ ಮೇಲೆ ಮತದಾನದ ಹಕ್ಕನ್ನು 1950ರಲ್ಲಿಯೇ ನಮ್ಮ ದೇಶ ಕೊಟ್ಟಿತು. ಆವರೆಗೆ ಯಾವ ದೇಶದಲ್ಲೂ ಇಂಥದೊಂದು ಸಮಾನತೆ ಇರಲಿಲ್ಲ. ಅಮೆರಿಕನ್ ಅಧ್ಯಕ್ಷರಾಗಿದ್ದ ಒಬಾಮಾ ಭಾರತಕ್ಕೆ ಭೇಟಿ ಕೊಟ್ಟಾಗ ಪಾರ್ಲಿಮೆಂಟಿನ 'ಗೋಲ್ಡ್ ಬುಕ್' (ಅತಿ ಗಣ್ಯರ ಅಭಿಪ್ರಾಯ ದಾಖಲಿಸುವ ಪುಸ್ತಕ)ನಲ್ಲಿ "ಜಗತ್ತಿನ ಅತ್ಯಂತ ಹಳೆಯ ಪ್ರಜಾಪ್ರಭುತ್ವದಿಂದ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಶುಭಾಶಯಗಳು" ಎಂದು ಬರೆದಿದ್ದರು. ನಮ್ಮ ಅಂದಿನ ರಾಷ್ಟ್ರಪತಿಗಳ ರಾತ್ರಿಯ ಔತಣ ಕೂಟದಲ್ಲಿ ಅವರ ಶುಭಾಶಯದಲ್ಲಿ ಹೇಳಿದ್ದು ತಪ್ಪು ಎನ್ನುತ್ತಾ, "ಜಗತ್ತಿನಲ್ಲಿ ಹಳೆಯ ಪ್ರಜಾಪ್ರಭುತ್ವವೆಂದರೆ ಅದು ಇಂಡಿಯಾದ ಪ್ರಜಾಪ್ರಭುತ್ವ. ಏಕೆಂದರೆ ನಮ್ಮಲ್ಲಿ 1950ರಲ್ಲೇ ಸಮಾನತೆಯ ಹಕ್ಕನ್ನು ನೀಡಲಾಗಿತ್ತು. ಒಂದು ಮತಕ್ಕೆ ಒಂದು ಮೌಲ್ಯವಿತ್ತು. ಆಫ್ರಿಕನ್ ಅಮೆರಿಕನ್ನರಿಗೆ ಮತದ ಹಕ್ಕು ಜಾರಿಗೊಂಡಿದ್ದು 1965ರಲ್ಲಿ" ಎಂದು ಅವರಿಗೆ ಹೇಳಿದ್ದೆ. ಇದು ನಮ್ಮ ಸಂವಿಧಾನದ ಮಹತ್ತನ್ನು ತಿಳಿಸುವ ಸಂಗತಿಗಳಲ್ಲೊಂದು.

ಆದರೆ ಇಂದು ಸಂವಿಧಾನದ ಮೂಲ ಆಶಯಗಳ ಮೇಲೆ ದಾಳಿ ನಡೆಯುತ್ತಿದೆ. ಹಿಂದುತ್ವದ ಹೆಸರಲ್ಲಿ ದೇಶವನ್ನು ಒಡೆಯಲಾಗುತ್ತಿದೆ. ಪ್ರಜೆಗಳ ಸ್ವಾತಂತ್ರ್ಯದ ಮೇಲೆ ಹಲ್ಲೆ ನಡೆಯುತ್ತಿದೆ. ಸಹವಾಸ, ಆಹಾರ,




ಮೈಸೂರಿನ "ಸಂವಿಧಾನ ಉಳಿಸಿ ದೇಶಪ್ರೇಮಿ ಸಮಾವೇಶ"ದಲ್ಲಿ ಮಾತನಾಡುತ್ತಾ ಸಂಘಪರಿವಾರದ ದೇಶಪ್ರೇಮವನ್ನು ಸಿಪಿಐ(ಎಂ) ಕರ್ನಾಟಕದ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಪ್ರಶ್ನಿಸಿದರು. ಸಂಘಪರಿವಾರದವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಳ್ಳಲಿಲ್ಲ ಮಾತ್ರವಲ್ಲ, ಅದರ ವಿರುದ್ಧ ಪಿತೂರಿಯಲ್ಲಿ ಬ್ರಿಟಿಷರ ಜತೆ ಶಾಮೀಲಾಗಿದ್ದರು. ಏಳು ವರ್ಷಗಳ ಕಾಲ ಸಂಘಪರಿವಾರದ ಮೊದಲ



# "ಬೋಲೋ ಭಾರತ್ ಮಾತಾ ಕಿ ಜೈ" ಅಲ್ಲ! "ಜೈ ಹಿಂದ್" ದೇಶಪ್ರೇಮಿ ಘೋಷಣೆ !!

**(ಮೈಸೂರಿನಲ್ಲಿ ನಡೆದ ಸಂವಿಧಾನ ಉಳಿಸಿ ದೇಶಪ್ರೇಮಿ ಸಮಾವೇಶದಲ್ಲಿ ಸೀತಾರಾಮ್ ಯೆಚೂರಿ ಅವರು ಮಾಡಿದ ಭಾಷಣದ ಸಂಗ್ರಹಾನುವಾದ)**




ವಿವಾಹ, ಉಡುಗೆ-ತೊಡುಗೆಗಳೆಲ್ಲದರ ಮೇಲೂ ನಿರ್ಬಂಧಗಳನ್ನು ಹೇರಲಾಗುತ್ತಿದೆ. ಇಂಡಿಯಾ ಇಂದು ಎರಡು ಭಾಗಗಳಾಗಿ ಒಡೆದಿದ್ದು, ಶ್ರೀಮಂತರ ಪಾಲಿಗೆ 'ಶೈನಿಂಗ್ ಇಂಡಿಯಾ' ಇದ್ದರೆ, ಬಡವರ ಪಾಲಿಗೆ 'ಸಫರಿಂಗ್ ಇಂಡಿಯಾ' ಉಳಿದುಕೊಂಡಿದೆ.

ಜಾತಿ ಧರ್ಮದ ಹೆಸರಲ್ಲಿ ನಮ್ಮನ್ನು ಒಡೆಯಲಾಗುತ್ತಿದೆ. ಅದರಲ್ಲೂ ಜಾತೀಯತೆಯ ವಿಷ ಬಿತ್ತಿ ದುಡಿಯುವ ವರ್ಗದ ಐಕ್ಯತೆಯನ್ನು ಮುರಿಯುವ ಯತ್ನ ನಡೆಸಲಾಗುತ್ತಿದೆ. ಒಡೆಯುವುದು ದೇಶಪ್ರೇಮವಲ್ಲ, ಒಗ್ಗೂಡಿಸುವುದು ದೇಶಪ್ರೇಮ. ಜನರನ್ನು ವಿಭಜಿಸುವುದು ದೇಶಪ್ರೇಮವಾಗುವುದಿಲ್ಲ, ಐಕ್ಯತೆ ಸಾಧಿಸುವುದು ದೇಶಪ್ರೇಮ. ಹಿಂದುತ್ವದ ರಾಷ್ಟ್ರೀಯತೆ ದೇಶಪ್ರೇಮವಲ್ಲ. ಬೋಲೋ ಭಾರತ್ ಮಾತಾ ಕಿ ಜೈ ಅನ್ನುವುದು ದೇಶಪ್ರೇಮಿ ಘೋಷಣೆಯಲ್ಲ. ಸುಭಾಷ್ ಚಂದ್ರ ಬೋಸರು ನೀಡಿದ ಜೈ ಹಿಂದ್ ಘೋಷಣೆ ದೇಶಪ್ರೇಮಿಗಳ ಘೋಷಣೆ.

ಇಂಡಿಯಾದ ಮೂಲಭೂತ ಆಧಾರ ಸ್ತಂಭಗಳು ಜಾತ್ಯತೀತತೆ, ಸಾಮಾಜಿಕ ನ್ಯಾಯ, ಆರ್ಥಿಕ ಸ್ವಾವಲಂಬನೆ ಹಾಗೂ ಒಕ್ಕೂಟ ವ್ಯವಸ್ಥೆ. ಇಂದು ಈ ನಾಲ್ಕೂ ಸ್ತಂಭಗಳ ಮೇಲೂ ಪ್ರಹಾರ ನಡೆಯುತ್ತಿದೆ. ದೇಶದಲ್ಲಿ ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವವನ್ನು ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಅಲ್ಪಸಂಖ್ಯಾತರ ಹಕ್ಕುಗಳನ್ನು ಕಸಿದು ಪ್ರಜಾಪ್ರಭುತ್ವ ರಾಷ್ಟ್ರ ಸ್ಥಾಪಿಸಲು ಹೇಗೆ ಸಾಧ್ಯ? ಇವೆರಡರಲ್ಲಿ ಯಾವುದೊಂದರ ಮೇಲೆ ದಾಳಿಯಾದರೂ ಮತ್ತೊಂದು ಮುರಿದು ಬೀಳುತ್ತದೆ. ಹಾಗಿದೆ ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ಸಂಬಂಧ.

ದೇಶದಲ್ಲಿಂದು ಹಿಂದುತ್ವದ ಹೆಸರಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಸಿಯುವ ಕೆಲಸ ನಡೆಯುತ್ತಿದೆ. ಗೋರಕ್ಷಣೆಯ ಹೆಸರಲ್ಲಿ ದಲಿತ, ಅಲ್ಪಸಂಖ್ಯಾತರ ಮೇಲೆ ಖಾಸಗಿ ಸೇನೆಗಳು ಹಲ್ಲೆ ನಡೆಸುತ್ತಿವೆ. ಸಂವಿಧಾನದಲ್ಲಿ ನೀಡಲಾಗಿರುವ ನಿರ್ದೇಶನದಂತೆ ಪೊಲೀಸರು ಮತ್ತು ನ್ಯಾಯಾಲಯ ಮಾಡಬೇಕಿರುವ ಕೆಲಸವನ್ನು ಈ ಖಾಸಗಿ ಸೇನೆಗಳು ಅಸಾಂವಿಧಾನಿಕವಾಗಿ ಮಾಡುತ್ತಿವೆ. ಮತ್ತು ಪೊಲೀಸರು ಹಾಗೂ ನ್ಯಾಯಾಲಯ ಕೈಕಟ್ಟಿ ಸುಮ್ಮನೆ ಕುಳಿತು ನೋಡುವ ಪರಿಸ್ಥಿತಿ ಇದೆ.

ಧರ್ಮ ಎಂದರೆ ಆತ್ಮ ಮತ್ತು ಪರಮಾತ್ಮನ ನಂಟು. ತನ್ನ ಪರಮಾತ್ಮ ಯಾರೆಂಬುದನ್ನು ಸ್ವತಃ ಆತ್ಮ ನಿರ್ಧರಿಸಬಲ್ಲದೇ ಹೊರತು, ಪರಮಾತ್ಮ ಕೂಡ ಅದನ್ನು ನಿರ್ಧರಿಸಲಾಗದು. ಹೀಗಿರುವಾಗ ಇದು ನಿನ್ನ ಧರ್ಮವಾಗಬೇಕೆಂದು ಯಾರಾದರೂ ಹೇಗೆ ಹೇರಲು ಸಾಧ್ಯ? ಅದೆಷ್ಟು ಸಮ್ಮತ? ಜಗತ್ತಿನ ಇನ್ಯಾವುದೇ ದೇಶವೂ ನಮ್ಮಷ್ಟು ವೈವಿಧ್ಯತೆಯನ್ನು ಹೊಂದಿಲ್ಲ. ಇಲ್ಲಿ ಭಾಷೆ, ಉಡುಗೆ, ಆಹಾರ, ಸಂಸ್ಕೃತಿ ಮೊದಲಾದವುಗಳಲ್ಲಿ ಭಿನ್ನತೆ ಇದೆ. ಈ ಭಿನ್ನತೆಯಲ್ಲೂ ವೈವಿಧ್ಯತೆಯಲ್ಲೂ ಐಕ್ಯತೆ ಇದ್ದು, ಅದನ್ನು ಮುರಿಯುವ ಕೆಲಸ ಆರೆಸ್ಸೆಸ್‌ನಿಂದ ಆಗುತ್ತಿದೆ. ಹಿಂದಿ, ಹಿಂದೂ, ಹಿಂದೂಸ್ಥಾನ್ ಎಂಬ ಘೋಷಣೆಯನ್ನಿಟ್ಟುಕೊಂಡು ಏಕರೂಪ ಸಂಸ್ಕೃತಿ ಹೇರುವ ಪ್ರಯತ್ನವನ್ನವರು ಮಾಡುತ್ತಿದ್ದಾರೆ.

ಮಧ್ಯಪ್ರದೇಶದಲ್ಲಿ ಸಾಲ ಮನ್ನಾ ಮಾಡಿ ಎಂದು ಕೇಳಿ ಪ್ರತಿಭಟನೆ ನಡೆಸಿದ ರೈತರ ಮೇಲೆ ಗೋಲಿಬಾರ್ ಮಾಡಿಸಿದ ಅಲ್ಲಿಯ ಮುಖ್ಯಮಂತ್ರಿಯೇ ಈಗ ಉಪವಾಸ ಸತ್ಯಾಗ್ರಹಕ್ಕೆ ಕುಳಿತಿದ್ದಾರೆ. 11 ಲಕ್ಷ ಕೋಟಿ ರುಪಾಯಿ ಸಾಲ ಮಾಡಿಕೊಂಡವರನ್ನು ಮುಕ್ತವಾಗಿ ಬಿಡುವ ಕೇಂದ್ರ ಸರ್ಕಾರ ಕೇವಲ 20 ಸಾವಿರ ಸಾಲ ಬಾಕಿ ಉಳಿಸಿಕೊಂಡ ರೈತನ ಜಮೀನನ್ನು ಕಸಿದು ಹರಾಜು ಹಾಕುತ್ತದೆ.

ಇವರು ಪ್ರಜಾಪ್ರಭುತ್ವವನ್ನು ಅವಮಾನಿಸುತ್ತಿದ್ದಾರೆ. ತ್ರಿವಳಿ ತಲಾಖ್ ಬಗ್ಗೆ ಮಾತಾಡುತ್ತಾ ಮುಸ್ಲಿಂ ಮಹಿಳೆಯರ ಕುರಿತು ಅನುಕಂಪ ತೋರಿಸುತ್ತಾರೆ; ಆದರೆ ಮುಸ್ಲಿಂ ಮೀಸಲಾತಿ ಬಗ್ಗೆ ಮಾತೇ ಆಡುವುದಿಲ್ಲ. ಮಹಿಳಾ ಮೀಸಲಾತಿ ಪ್ರಶ್ನೆ ಎತ್ತಿದಾಗಲೂ ಅದೇ ಪ್ರತಿಕ್ರಿಯೆ. ಹಣಕಾಸು ಮಸೂದೆಯ ಮೂಲಕ ರಾಜಕೀಯ ಪಕ್ಷಗಳಿಗೆ ಬರುವ ದೇಣಿಗೆಯ ಮೂಲವನ್ನೂ ಮೊತ್ತವನ್ನೂ ಗುಪ್ತವಾಗಿಡಬಹುದಾದಂತೆ ಕಾನೂನು ತಿರುಚಿದ್ದಾರೆ. ಈಗಂತೂ ಚುನಾವಣೆ ಗೆಲ್ಲಲು ಹಣ ಚೆಲ್ಲಲೇಬೇಕು ಅನ್ನುವ ಪರಿಸ್ಥಿತಿ ಇದೆ. ಇದರಿಂದ ಭ್ರಷ್ಟಾಚಾರ ಮತ್ತಷ್ಟು ಹೆಚ್ಚಲು ದಾರಿ ಹಾಕಿಕೊಟ್ಟಂತಾಗಿದೆ.

ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ, ದೇಶದ ಸಂವಿಧಾನದ ಆಧಾರ ಸ್ತಂಭಗಳು. ಆರ್ಥಿಕ ನ್ಯಾಯದ ಜೊತೆ ಸಾಮಾಜಿಕ ನ್ಯಾಯ ಕೂಡ ಮುಖ್ಯ. ದನದ ರಾಜಕಾರಣ ಮಾಡುತ್ತ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಉಂಟು ಮಾಡುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು, ಶಿಕ್ಷಣದ ಖಾಸಗೀಕರಣ, ಆರ್ಥಿಕ ನೀತಿಗಳೇ ಮೊದಲಾದವುಗಳಿಂದ ಸಾಮಾಜಿಕ ನ್ಯಾಯಕ್ಕೆ ಗಂಡಾಂತರ ಬಂದೊದಗಿದೆ. ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಪ್ರತಿಯೊಂದು ಮತಕ್ಕೂ ಸಮಾನ ಮೌಲ್ಯದ ಮೂಲಕ ರಾಜಕೀಯ ಸಮಾನತೆ ಬಂದಿದೆ. ಆದರೆ ಸಾಮಾಜಿಕ, ಆರ್ಥಿಕ ಸಮಾನತೆ ಬರುವವರೆಗೆ ನಮ್ಮ ದೇಶ ಸಬಲಗೊಳ್ಳಲಾರದು ಎಂದು ಹೇಳಿದ್ದರು. ಅಂಬೇಡ್ಕರ್ ಮಾತಿನಂತೆ ಖಾಸಗೀಕರಣ ನಿಲ್ಲಿಸಿ ದೇಶವನ್ನು ಸಬಲೀಕರಣಗೊಳಿಸಬೇಕಿದೆ.

ನೋಟು ಅಪನಗದೀಕರಣ ಮೂಲಕ ಮತ್ತಷ್ಟು ಹೊರೆಯನ್ನು ಜನರ ಮೇಲೆ ಹೊರೆಸಲಾಗಿದೆ. ಡಿಜಿಟಲೈಸೇಶನ್ ಮೂಲಕ ಪ್ರತಿ ಬಾರಿ ವ್ಯವಹಾರ ನಡೆಸುವಾಗಲೂ ಹೆಚ್ಚುವರಿ ವೆಚ್ಚ ಭರಿಸಬೇಕಾಗಿ ಬಂದು, ಈ ಮೂಲಕ ಡಿಜಿಟಲ್ ಕಂಪನಿಗಳಿಗೆ ಲಾಭ ಮಾಡಿಕೊಡಲಾಗುತ್ತಿದೆ.

ಕೊನೆಯದಾಗಿ ಒಕ್ಕೂಟ ವ್ಯವಸ್ಥೆಯ ಮೇಲೂ ದಾಳಿ ನಡೆಯುತ್ತಿದೆ. ಅವರು ಒಂದು ದೇಶ – ಒಂದು ತೆರಿಗೆ ಅನ್ನುವ ನೀತಿ ಜಾರಿಗೆ ತಂದಿದ್ದಾರೆ. ಈ ಮೂಲಕ ತೆರಿಗೆ ಸಂಗ್ರಹಿಸುವ ರಾಜ್ಯಗಳ ಹಕ್ಕನ್ನು ಕಸಿದಿದ್ದಾರೆ. ರಾಜ್ಯಗಳು ಪ್ರಾಕೃತಿಕ ವಿಕೋಪ ಅಥವಾ ಯಾವುದೇ ವಿಪತ್ತಿನಲ್ಲಿ ತೆರಿಗೆ ಹಣವನ್ನೆ ಪರಿಹಾರಕ್ಕೆ ಬಳಸುತ್ತಿದ್ದವು. ಇನ್ನು ಮುಂದೆ ರಾಜ್ಯಗಳು ಕೇಂದ್ರದ ಎದುರು ಭಿಕ್ಷಾಪಾತ್ರೆ ಹಿಡಿದು ನಿಲ್ಲಬೇಕಾಗುತ್ತದೆ. ಇನ್ನು ಪ್ರಧಾನ ಮಂತ್ರಿ ಒಂದು ದೇಶ – ಒಂದು ಚುನಾವಣೆ ಅನ್ನುವ ಮಾತನ್ನಾಡುತ್ತಿದ್ದಾರೆ. ಇದಂತೂ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಹಕ್ಕುಗಳನ್ನು ಕಸಿಯುವ ಹುನ್ನಾರ. ಮೊದಲು ಇದ್ದ 'ಒಂದು ದೇಶ – ಒಂದು ಚುನಾವಣೆ'ಗೆ ಭಂಗ ಬಂದಿದ್ದು 1957ರಲ್ಲಿ ಕಮ್ಯುನಿಸ್ಟ್ ಸರಕಾರದಿಂದ ಆರಂಭವಾದ ವಿರೋಧ ಪಕ್ಷಗಳ ರಾಜ್ಯ ಸರಕಾರವನ್ನು ವಜಾ ಮಾಡುವ ಕೆಟ್ಟ ಸಂಪ್ರದಾಯದಿಂದ. ಅದನ್ನು ನಿಲ್ಲಿಸದೆ, ಇವೆಲ್ಲವೂ ದೇಶದ ಒಕ್ಕೂಟ ವ್ಯವಸ್ಥೆಯ ಮೇಲೆ ನಡೆಸುತ್ತಿರುವ ದಾಳಿಗಳೇ ಆಗಿವೆ.

ಸಂವಿಧಾನದ ಆಶಯಗಳನ್ನು ಮುರಿಯುವ ಮೂಲಕ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಾನಿಯುಂಟು ಮಾಡುತ್ತಿರುವ ಬಿಜೆಪಿ – ಆರೆಸ್ಸೆಸ್ ವಿರುದ್ಧ; ಜಾತ್ಯತೀತತೆ, ಸಮಾನತೆಗಾಗಿ ದೇಶಪ್ರೇಮಿಗಳೆಲ್ಲರೂ ಇಂದು ಒಂದಾಗಬೇಕಿದೆ.



# ಬಿ.ಇ.ಎಂ.ಎಲ್.ನ್ನು ಅಂಬಾನಿಗೆ ಮಾರುವುದು ದೇಶಪ್ರೇಮವಲ್ಲ: ಶ್ರೀರಾಮರೆಡ್ಡಿ

ಪ್ರಧಾನಿಯಾಗಿದ್ದಾತ, 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ತಾನು ಸ್ವಾತಂತ್ರ್ಯ ಹೋರಾಟಗಾರನಲ್ಲ ಎಂದು ಮ್ಯಾಜಿಸ್ಟ್ರೇಟ್ ಗೆ ಮುಚ್ಚಳಿಕೆ ಬರೆದು ಕೊಟ್ಟಿದ್ದರು. ಇಂತಹ ಚರಿತ್ರೆ ಇರುವ ಸಂಘಪರಿವಾರ ದೇಶಪ್ರೇಮದ ಸರ್ಟಿಫಿಕೇಟುಗಳನ್ನು ಹಂಚುತ್ತಿದೆ ಎಂದು ವ್ಯಂಗ್ಯವಾಡಿದರು.

ಗ್ರಾಮೀಣ ಬಡವರಿಗೆ ಕೃಷಿ ಕೂಲಿಕಾರರಿಗೆ ಸ್ವಲ್ಪವಾದರೂ ಪರಿಹಾರ ನೀಡುವ ಉದ್ಯೋಗ ಖಾತ್ರಿ ಯೋಜನೆ, ತಾಯಂದಿರ ಮಕ್ಕಳ ಆರೋಗ್ಯ ಶಿಕ್ಷಣದ ಯೋಜನೆಯಾದ ಐ.ಸಿ.ಡಿ.ಎಸ್. ಹೀಗೆ ಹಲವು ಸಮಾಜ ಕಲ್ಯಾಣ ಯೋಜನೆಗಳಲ್ಲಿ ತೀವ್ರ ಕಡಿತ ಮಾಡಿರುವುದು ಮತ್ತು ಆ ಮೂಲಕ ಈ ದೇಶದ ಅಸಂಖ್ಯಾತ ಜನರಿಗೆ ಅನ್ಯಾಯ ಮಾಡುತ್ತಿರುವುದು ದೇಶಪ್ರೇಮವೇ? ಸಾಮಾಜಿಕ ನ್ಯಾಯ ಮತ್ತು ದೇಶದ ಆರ್ಥಿಕ ಸ್ವಾಯತ್ತತೆಗೆ ಪೂರಕವಾಗಿದ್ದ ಸಾರ್ವಜನಿಕ ಉದ್ಯಮಗಳಲ್ಲಿ ಒಂದಾಗಿದ್ದು ಚೆನ್ನಾಗಿ ನಡೆಯುತ್ತಿರುವ ಬಿ.ಇ.ಎಂ.ಎಲ್.ನ್ನು ಮೂರು ಕಾಸಿಗೆ ಅಂಬಾನಿಗೆ ಮಾರುವುದು ದೇಶಪ್ರೇಮವೇ ಎಂದು ಅವರು ಪ್ರಶ್ನಿಸಿದರು.



ದೇಶದ ನವರತ್ನಗಳಲ್ಲಿ ಒಂದು ಎಂದೇ ಹೆಸರಾದ ಬೆಮೆಲ್ ಕಂಪನಿಯ ಖಾಸಗೀಕರಣ ವಿರೋಧಿ ಹೋರಾಟಕ್ಕೆ ಸಹಕಾರ ನೀಡುವಂತೆ ಬೆಮೆಲ್ ನೌಕರರು ಇಂದು ಸೀತಾರಾಂ ಯೆಚೂರಿಯವರಿಗೆ ಮನವಿ ಪತ್ರ ನೀಡಿದರು

ಅನ್ಯ ಧರ್ಮೀಯರನ್ನು ದ್ವೇಷಿಸುವವ ಹಿಂದೂವಾಗಲಾರ ಎಂಬ ವಿವೇಕಾನಂದರ ಹಿಂದುತ್ವ ಆರೆಸ್ಸೆಸ್ ಹಿಂದುತ್ವವಲ್ಲ. ದೇಶದ ಸಂವಿಧಾನವನ್ನು ಬುಡಮೇಲು ಮಾಡಿ ಸಾವಿರಾರು ವರ್ಷಗಳ ಕಾಲ ವೈವಿಧ್ಯತೆ ಬಹುತ್ವ ಉಳ್ಳ ಇಲ್ಲಿನ ಜನತೆ ಕಟ್ಟಿ ಉಳಿಸಿ ಬೆಳೆಸಿದ ಸಂಸ್ಕೃತಿ ಮತ್ತು ನಾಗರಿಕತೆಯ ನಾಶವೇ "ರಾಷ್ಟ್ರೀಯ ಸರ್ವನಾಶ ಸಂಘ" (ಆರೆಸ್ಸೆಸ್) ಹಿಂದುತ್ವ. 2023ರ ಒಳಗೆ ಹಿಂದೂ ರಾಷ್ಟ್ರ ಕಟ್ಟುವ ಪಿತೂರಿ ಅದರದು. ಅವರ ಹುನ್ನಾರವನ್ನು ಸೋಲಿಸಲು ದೇಶದ ಜನರನ್ನು ಪ್ರೀತಿಸುವ ಅವರ ಬದುಕನ್ನು ಹಸನುಗೊಳಿಸುವುದು ನಿಜವಾದ ದೇಶಪ್ರೇಮ ಎಂದು ನಂಬಿರುವ ಎಲ್ಲಾ ದೇಶಪ್ರೇಮಿಗಳು ಒಂದಾಗಿ ಭಾರತದ ಸಂವಿಧಾನ ಉಳಿಸಬೇಕು. ಅದರ ಆಶಯಗಳ ಜಾರಿಗೆ ಪ್ರಯತ್ನಿಸಬೇಕು ಎಂದು ಕರೆ ನೀಡಿದರು.


"ಸರ್ವರಿಗು ಸಮಬಾಳು ಸರ್ವರಿಗು ಸಮಪಾಲು" ಎಂಬ ಕವಿವಾಣಿ ಮೊಳಗಿದ ಮೈಸೂರಿನಲ್ಲಿ ಸೇರಿರುವ ದೇಶಪ್ರೇಮಿ ಸಮಾವೇಶ



ನಡೆಸಿದ ಸಿಪಿಐ(ಎಂ) ಎಲ್ಲರ ಬದುಕು ಹಸನಾಗಬೇಕು ಎಂದು ಬಯಸುವ, ಅದಕ್ಕೆ ಹೋರಾಡುವ ಪಕ್ಷ. ಸಮಾವೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದ ಅಂಗನವಾಡಿ ಮತ್ತು ಸ್ಕೀಂ ಕಾರ್ಮಿಕರ ಹಕ್ಕೊತ್ತಾಯಗಳನ್ನು ಬೆಂಬಲಿಸುತ್ತದೆ. ವರ್ಷಕ್ಕೆ 250 ದಿನ ರೂ. 300 ದಿನಗೂಲಿ ಮೇಲೆ ನಗರ-ಹಳ್ಳಿಗಳೆರಡರಲ್ಲೂ ಉದ್ಯೋಗ ಒದಗಿಸುವ ಉದ್ಯೋಗ ಖಾತ್ರಿ ಯೋಜನೆ ಬೇಕು ಎಂದು ಒತ್ತಾಯಿಸುತ್ತದೆ ಎಂದು ಸಿಪಿಐ(ಎಂ) ಕರ್ನಾಟಕದ ಸೆಕ್ರೇಟಾರಿಯಟ್ ಸದಸ್ಯ ಕಾ. ಜಿ.ಎನ್. ನಾಗರಾಜ್ ಮಾತನಾಡುತ್ತಾ ಹೇಳಿದರು.

# “ನಿಮ್ಮ ಟ್ರೋಜನ್ ಕುದುರೆಗಳು ರೈತರ ನಡುವೆ ಸಕ್ರಿಯವಾಗಿವೆ, ನೀವೆಲ್ಲಿದ್ದೀರಿ ಮೋದಿಯವರೇ?”

ಇದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಅವರು ಪತ್ರಕರ್ತರೊಬ್ಬರು ದೇಶದಲ್ಲಿ ಭುಗಿಲೆದ್ದಿರುವ ರೈತ ಹೋರಾಟಗಳ ಬಗ್ಗೆ ಕೇಳಿದಾಗ ನೀಡಿದ ಪ್ರತಿಕ್ರಿಯೆ. ಗ್ರೀಕರಿಗೂ ಮತ್ತು ಟ್ರೋಜನ್‌ರಿಗೂ ನಡೆದ ಪುರಾಣ ಪ್ರಸಿದ್ಧ ಯುದ್ಧದಲ್ಲಿ ಗ್ರೀಕರು ಟ್ರೋಜನ್ ಪ್ರದೇಶಗಳಿಗೆ ನುಗ್ಗಲು ಟೊಳ್ಳು ಕುದುರೆಗಳ ಮರದ ಪ್ರತಿಮೆಗಳನ್ನು ಕಳಸುವ ತಂತ್ರ ಬಳಸಿದ್ದರು.




“ರೈತರು ದೇಶಕ್ಕೆ ಆಹಾರ ಉತ್ಪಾದಿಸುತ್ತಾರೆ. ಅವರಿಗೆ ಸಹಾಯಧನಗಳು ಸಿಗಬೇಕು. ಅವರ ಬೇಡಿಕೆಗಳು ಈಡೇರಬೇಕು. ಕೃಷಿ ಸಂಕಟವನ್ನು ಸ್ವಲ್ಪವಾದರೂ ನಿಭಾಯಿಸಬೇಕಾದರೆ ಇದು ಅಗತ್ಯ. ಕೃಷಿ ನಷ್ಟದ ಬಾಬತ್ತು ಆಗುತ್ತಿದೆ. ಈ ಕಡೆಗೆ ತುರ್ತು ಗಮನ ಕೊಡಬೇಕಾಗಿದೆ. ಆದರೆ ಬಿಜೆಪಿಗೆ ಈ ಬಗ್ಗೆ ಆಸಕ್ತಿ ಇಲ್ಲ ಎಂಬುದು ಸ್ಪಷ್ಟ. ಬದಲಿಗೆ ಅವರು ತಮ್ಮ ಟ್ರೋಜನ್ ಕುದುರೆಗಳನ್ನು–ಕಿಸಾನ್ ಮೋರ್ಚಾ ಇತ್ಯಾದಿ ಹೆಸರುಗಳಲ್ಲಿ– ಕಳಿಸುತಾರೆ. ಇವರು ಇತರ ಸಂಘಟನೆಗಳು ಒಟ್ಟುಗೂಡಿ ಹೋರಾಟಗಳನ್ನು ಸಂಘಟಿಸುವಾಗ ಜತೆಗೆ ಬಂದು ಸೇರಿಕೊಳ್ಳುತ್ತಾರೆ, ಧರಣಿ ಕೂರುತ್ತಾರೆ, ಮುಖ್ಯಮಂತ್ರಿಗಳು ಮಾತುಕತೆಗೆ ಕರೆದಾಗ ಬರುತ್ತಾರೆ, ಅವರು ರೈತರು ಒಪ್ಪಲಾರದ ಆಫರ್‌ಗಳನ್ನು ಕೊಟ್ಟಾಗ ತಕ್ಷಣ ಒಪ್ಪಿಕೊಂಡು ಹೊರಬರುತ್ತಾರೆ, ರೈತರು ಎಲ್ಲರೂ ಈ ಹೋರಾಟದಲ್ಲಿ ಇಲ್ಲ ಎನ್ನುವಂತೆ ಬಿಂಬಿಸುತ್ತಾರೆ. ಮಹಾರಾಷ್ಟ್ರದಲ್ಲಿ ಅವರು ಇದನ್ನು ಮಾಡಿದರು, ಮಧ್ಯ ಪ್ರದೇಶದಲ್ಲೂ ಮಾಡಿದರು” ಎಂದು ಹನ್ನನ್ ಮೊಲ್ಲ ಹೇಳಿದ್ದಾರೆ.

ಆದರೆ ಈ ಪ್ರಕ್ರಿಯೆಯಲ್ಲಿ ಮೋದಿಯವರ ‘ಅಚ್ಛೇ ದಿನ್’ ದೇಶದ ದುಡಿಯುವ ಜನಗಳಿಗಂತೂ ಅಲ್ಲ ಎಂಬುದನ್ನು, ಅದರ ನಿಜ ಸ್ವರೂಪವನ್ನು ದೇಶದ ರೈತರು ಬಯಲಿಗೆಳೆದಿದ್ದಾರೆ– ಅದೂ ಅವರು ತಮ್ಮ ಮೂರನೇ ವಾರ್ಷಿಕೋತ್ಸವವನ್ನು ವೈಭವೋಪೇತವಾಗಿ (ನಿಜ, ಸಾರ್ವಜನಿಕ ಖರ್ಚಿನಲ್ಲಿ) ಆಚರಿಸಲು ಹೊರಟಿರುವ ಸಂದರ್ಭದಲ್ಲೇ. ಕಳೆದ ಸಂಚಿಕೆಯಲ್ಲಿ ಗಮನಿಸಿದಂತೆ ಕೃಷಿ ಕ್ಷೇತ್ರದಲ್ಲಿ ಮೋದಿ ಸರಕಾರದ ‘ಸಾಧನೆಗಳ’ ವರ್ಣರಂಜಿತ ಪೂರ್ಣ ಪುಟದ ಜಾಹಿರಾತುಗಳು ಪತ್ರಿಕೆಗಳಲ್ಲಿ ರಾರಾಜಿಸಿದ ದಿನವೇ ಅವೇ ಪತ್ರಿಕೆಗಳ ಮುಖಪುಟದಲ್ಲಿ ಮಂದ್‌ಸೌರ್‌ನಲ್ಲಿ ಮಧ್ಯಪ್ರದೇಶದ ಬಿಜೆಪಿ ಸರಕಾರದ ಪೋಲೀಸ್ ಗೋಲೀಬಾರಿಗೆ ಐದು ರೈತರು ಬಲಿಯಾದ ಸುದ್ದಿಯನ್ನೂ ಪ್ರಕಟಿಸಬೇಕಾಗಿ ಬಂತು. ಭಯಗ್ರಸ್ತ ಕೇಂದ್ರ ಕೃಷಿ ಮಂತ್ರಿಗಳು ಮೂರು ವರ್ಷಗಳ ‘ಸಾಧನೆ’ಗಳ ಕುರಿತ ಪತ್ರಿಕಾ ಸಮ್ಮೇಳನವನ್ನು ಅವಸರವಸರವಾಗಿ ಮುಂದೂಡಬೇಕಾಗಿ ಬಂತು.

ಇದು ಕೇಂದ್ರದ ಎನ್‌ಡಿಎ ಸರಕಾರ ಮತ್ತು ರಾಜ್ಯ ಬಿಜೆಪಿ ಸರಕಾರಗಳು ರೈತರ ಬೇಡಿಕೆಗಳ ಬಗ್ಗೆ ಅತ್ಯಂತ ನಿರ್ಲಕ್ಷ್ಯದಿಂದ ವರ್ತಿಸಿರುವ ರೀತಿ ಮತ್ತು ಹತಾಶೆ ಹಾಗೂ ಭೀತಿಯ ವಾತಾವರಣವನ್ನು ಸೃಷ್ಟಿಸಿರುವುದರ ಅಂತಿಮ ಪರಿಣಾಮ ಎಂದು ಎಡ ಮತ್ತು ಜನವಾದಿ ರೈತ ಮತ್ತು ಕೃಷಿ ಕಾರ್ಮಿಕ ಸಂಘಟನೆಗಳು ಮತ್ತು ಸಾಮಾಜಿಕ ಸಂಘಟನೆಗಳ ವೇದಿಕೆ ಭೂಮಿ ಅಧಿಕಾರ್ ಆಂದೋಲನ್(ಬಿಎಎ) ವರ್ಣಿಸಿದೆ.

ಮೋದಿ ಸರಕಾರದ ರೈತ–ವಿರೋಧಿ ಧೋರಣೆಗಳ ದುಷ್ಫಲಗಳು ಪ್ರಕಟವಾಗುತ್ತಿರುವಂತೆ ಹಲವು ರಾಜ್ಯಗಳಲ್ಲಿ ರೈತರು ಬೃಹತ್ ಪ್ರಮಾಣದಲ್ಲಿ ಹೋರಾಟಕ್ಕೆ ಬರುತ್ತಿದ್ದಾರೆ. ಪಶ್ಚಿಮ ಬಂಗಾಲ, ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್, ರಾಜಸ್ತಾನ, ಝಾರ್ಖಂಡ್, ಛತ್ತೀಸ್‌ಗಡ, ಪಂಜಾಬ್ ಮತ್ತು ಹರ್ಯಾಣದಲ್ಲಿ. ಏಕೆಂದರೆ ಅವರ ಬೆಳೆಗಳಿಗೆ ಫಲಕಾರಿ ಬೆಲೆಗಳು ಸಿಗುತ್ತಿಲ್ಲ. ಮತ್ತು ಅವರು ತೀವ್ರ ರೀತಿಯಲ್ಲಿ ಪಾಪರಾಗುವ, ಸಾಲಬಲೆಯಲ್ಲಿ ಸಿಲುಕಿಕೊಳ್ಳುವ ಮತ್ತು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ.

**ಎಲ್ಲಿದೆ ಸರಕಾರ?**

“ನಾನು ರೈತರು ಆತ್ಮಹತ್ಯೆ ಮಾಡಿಕೊಂಡ ನೂರಾರು ಕುಟುಂಬಗಳನ್ನು ಭೇಟಿಯಾಗಿದ್ದೇನೆ. ನನ್ನ ಕಿಸಾನ್ ಸಭಾ ಸಹಯೋಗಿಗಳು ಇಂತಹ ಸಾವಿರಾರು ಮನೆಗಳಿಗೆ ಭೇಟಿ ನೀಡಿದ್ದಾರೆ. ಇಂದು ಕೂಡ ಪ್ರತಿದಿನ 35 ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಎಲ್ಲಿದೆ ಸರಕಾರ? ಕಳೆದ 15–16 ವರ್ಷಗಳಲ್ಲಿ ಸುಮಾರು ಮೂರೂವರೆ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಾನು ಕಂಡ ಪ್ರಕಾರ ಈ ಆತ್ಮಹತ್ಯೆಗಳಿಗೆ ಎರಡು ಮುಖ್ಯ ಕಾರಣಗಳಿವೆ–ಒಂದು, ಖಾಸಗಿ ಲೇವಾದೇವಿಗಾರರಿಂದ ಸಾಲಗಳು, ಭಾರೀ ಬಡ್ಡಿ ಕಸಿಯುವ ಆ ತಿಮಿಂಗಿಲಗಳು ಎಂದೂ ರೈತರ ಬೆನ್ನು ಬಿಡುವುದಿಲ್ಲ. ಅವರ ಗೂಂಡಾಗಳನ್ನು ಕಳಿಸ್ತಾರೆ, ಅಸಲು ಬಿಡಿ, ಬಡ್ಡಿ ಕಟ್ಟಲೂ ಅವರಿಗಾಗುತ್ತಿಲ್ಲ, ಹತಾಶೆಯಿಂದ ತಮ್ಮ ಜೀವ ತೆಗೆದುಕೊಳ್ಳುತ್ತಾರೆ. ಎರಡು, ಮಾರುಕಟ್ಟೆಯಿಂದ ಅವರಿಗೆ ಉತ್ಪಾದನೆಯ ಖರ್ಚೂ ದಕ್ಕುವುದಿಲ್ಲ. ಆದ್ದರಿಂದಲೇ ಸ್ವಾಮಿನಾಥನ್ ಆಯೋಗ ವೆಚ್ಚ ಪ್ಲಸ್ 50% ಎಂದು ಸೂಚಿಸಿರುವುದು” ಎನ್ನುತ್ತಾರೆ ಹನ್ನನ್ ಮೊಲ್ಲ.

**ಪ್ರಧಾನ ಮಂತ್ರಿಯಾಗುವ ಮುನ್ನ ಮೋದಿಯವರು 2014 ರ ಚುನಾವಣಾ ಪ್ರಚಾರದಲ್ಲಿ ಕನಿಷ್ಟ 300 ಬಾರಿ ಸಾರ್ವಜನಿಕ ಸಭೆಗಳಲ್ಲಿ ಇದರ ಪ್ರಸ್ತಾಪ ಮಾಡಿದ್ದರು. ಬಿಜೆಪಿಯ ಚುನಾವಣಾ ಪ್ರಣಾಳಿಕೆ ಇದಕ್ಕೆ ಒಂದೂವರೆ ಪುಟಗಳನ್ನು ಮೀಸಲಿಟ್ಟಿತ್ತು. ಅವೆಲ್ಲ ಎಲ್ಲಿ ಹೋದವು ಎಂದು ಹನ್ನನ್ ಮೊಲ್ಲ ಪ್ರಶ್ನಿಸುತ್ತಾರೆ.**

ಈ ಮೂರು ವರ್ಷಗಳಲ್ಲಿ ಈ ಆಶ್ವಾಸನೆಗೆ ಸಂಬಂಧಪಟ್ಟಂತೆ ದೇಶಾದ್ಯಂತ ರೈತರಿಗೆ ವಿಶ್ವಾಸಘಾತ ಮಾಡಲಾಗಿದೆ ಎನ್ನುತ್ತಾರೆ ಭೂಮಿ ಅಧಿಕಾರ್ ಆಂದೋಲನದ ಮುಖಂಡರು. ಇದರ ಬದಲು ಎನ್‌ಡಿಎ ಸರಕಾರ ಕೃಷಿಯಲ್ಲಿ ಎಲ್ಲ ರೀತಿಯ ರೈತ–ವಿರೋಧಿ ನವ–ಉದಾರವಾದಿ ಸುಧಾರಣೆಗಳನ್ನು ಕ್ಷಿಪ್ರವಾಗಿ ತರಲು ಹೊರಟಿದೆ– ಕೃಷಿ ಮತ್ತು ಚಿಲ್ಲರೆ ವ್ಯಾಪಾರದಲ್ಲಿ 100% ಎಫ್‌ಡಿಐ, ಎಲ್ಲ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಜೋಡಿಸುವ ಇ–ಪ್ಲಾಟ್‌ಫಾರ್ಮ್, ಮಾದರಿ ಗುತ್ತಿಗೆ ಬೇಸಾಯ ಕಾಯ್ದೆ ಮತ್ತು ರಾಜ್ಯಗಳ ಕಾಯ್ದೆಗಳ ಮೂಲಕ ಕಾರ್ಪೊರೇಟ್‌ಗಳಿಗೆ ಕೃಷಿ ಭೂಮಿಯನ್ನು ವಹಿಸಿಕೊಡುವುದು ಮುಂತಾದವುಗಳು ಈ ದಿಕ್ಕಿನಲ್ಲಿ ಅದು ತರುತ್ತಿರುವ ಕ್ರಮಗಳು. ಕಳೆದ ನವಂಬರ್‌ನಲ್ಲಿ ತಂದ ನೋಟು ರದ್ಧತಿಯ ತುಘಲಕ್ ಮಾದರಿ ಫರ್ಮಾನು ರೈತರ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಈಗ ಹಲವಾರು ವಿಶ್ಲೇಷಕರು ಹೇಳಲಾರಂಭಿಸಿದ್ದಾರೆ.

**ಅದರೆ ನೋಟು ರದ್ಧತಿಯನ್ನು ದಕ್ಕಿಸಿಕೊಂಡು ಗೆದ್ದೆವೆಂದು ಸಾರಿದಂತೆ ಇಲ್ಲಿ ಮಾಡಲಾಗಿಲ್ಲ. ಮಹಾರಾಷ್ಟ್ರದಲ್ಲೂ, ಮಧ್ಯಪ್ರದೇಶದಲ್ಲೂ ಅವರ ಹಸ್ತಕರೇ ಬಯಲಾಗಿದ್ದಾರೆ.**

“ಕೃಷಿ ಸಂಕಟ ಯಾವುದೇ ಒಂದು ನಿರ್ದಿಷ್ಟ ರಾಜ್ಯಕ್ಕೇ ವಿಶಿಷ್ಟವಾದದ್ದಲ್ಲ. ಆದರೆ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಪರಿಸ್ಥಿತಿ ಅತ್ಯಂತ ಕೆಟ್ಟದಾಗಿದೆ. ಬಿಜೆಪಿ 16 ರಾಜ್ಯಗಳಲ್ಲಿ ಸರಕಾರ ನಡೆಸುತ್ತಿದೆ, ಸುಮಾರಾಗಿ ಎಲ್ಲ ಕಡೆಯೂ ರೈತರ ಪರಿಸ್ಥಿತಿ ಶೋಚನೀಯವಾಗಿದೆ”– ಹೀಗೆಂದಿರುವವರು ಯಾವುದೇ ಎಡನೇತೃತ್ವದ ರೈತ ಸಂಘಟನೆಯವರಲ್ಲ, ಕಾಂಗ್ರೆಸ್ ನೇತೃತ್ವದ ಸಂಘಟನೆಯವರೂ ಅಲ್ಲ, ಸ್ವತಃ ಸಂಘ ಪರಿವಾರಕ್ಕೆ ಸೇರಿದ ಭಾರತೀಯ ಕಿಸಾನ್ ಸಂಘದ ಮಧ್ಯಪ್ರದೇಶ ಘಟಕಕ್ಕೆ ಇತ್ತೀಚಿನ ವರೆಗೂ ಮುಖಂಡರಾಗಿದ್ದ ಶಿವ ಕುಮಾರ್ ಶರ್ಮ(ಧೀರೇಂದ್ರ ಕೆ ಝಾ, ಸ್ಕ್ರಾಲ್.ಇನ್, ಜೂನ್13). ಈಗ ಬಿಕೆಎಸ್ ಬಿಟ್ಟು ಬೇರೊಂದು ಸಂಘಟನೆ ರಚಿಸಿಕೊಂಡಿರುವ ಇವರು ಮಧ್ಯಪ್ರದೇಶದ ಮುಖ್ಯಮಂತ್ರಿಗಳು ತನ್ನ ಬಲಹೀನತೆಯನ್ನು ಮುಚ್ಚಿಕೊಳ್ಳಲು ಉಪವಾಸಕ್ಕಿಳಿದರು, ಏಕೆಂದರೆ ನರೇಂದ್ರ ಮೋದಿಯವರಿಂದ ಹಣಕಾಸು ಸಹಾಯ ಕೇಳುವ ಧೈರ್ಯ ಅವರಿಗಿಲ್ಲ ಎನ್ನುತ್ತಾರೆ.

**ಬಿಜೆಪಿ ಆಳ್ವಿಕೆಯ ಗುಜರಾತ್ ಮತ್ತು ರಾಜಸ್ತಾನಕ್ಕೆ ಈ ಹೋರಾಟ ಹರಡಲಿದೆ ಎಂದು ಈತ ಹೇಳಿದ್ದಾರೆ. ಈಗಾಗಲೆ ಜೂನ್ 11ರಂದು ರಾಜಸ್ತಾನದಲ್ಲಿ ಮಧ್ಯಪ್ರದೇಶದ ರೈತರಿಗೆ ಸೌಹಾರ್ದ ವ್ಯಕ್ತ ಪಡಿಸಲು ರಾಜ್ಯವ್ಯಾಪಿ ಬಂದ್ ನಡೆದಿದೆ. ಹರ್ಯಾಣದ ಎಐಕೆಎಸ್ ಘಟಕ ರೈತರ ಹೋರಾಟಕ್ಕೆ ಅಣಿನೆರೆಯುತ್ತಿದೆ.**

# ರೈತರ ದುಸ್ಥಿತಿಯ ಅಪಹಾಸ್ಯ ಮಾಡುವುದನ್ನು ತಕ್ಷಣವೇ ನಿಲ್ಲಿಸಿ –ಮಂದಸೌರ್‌ನಲ್ಲಿ ಎಐಕೆಸ್ ಮುಖಂಡರು

ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ನಿಯೋಗವೊಂದು ಜೂನ್ 13ರಂದು ಮಧ್ಯಪ್ರದೇಶದ ಮಂದಸೌರ್‌ಗೆ ಹೋಗಿ ಪೋಲೀಸ್ ಗೋಲೀಬಾರ್‌ಗೆ ಬಲಿಯಾದ ಇಬ್ಬರು ರೈತರ ಕುಟಂಬಗಳನ್ನು ಭೇಟಿ ಮಾಡಿತು. ಎಐಕೆಎಸ್ ಅಧ್ಯಕ್ಷ ಅಮ್ರ ರಾಮ್, ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್, ಹಣಕಾಸು ಕಾರ್ಯದರ್ಶಿ ಕೃಷ್ಣಪ್ರಸಾದ್, ರಾಜಸ್ತಾನ ಕಿಸಾನ್ ಸಭಾದ ಅಧ್ಯಕ್ಷ ಗುರುಚರಣ್ ಸಿಂಗ್ ಮೌರ್, ಮಧ್ಯಪ್ರದೇಶದ ಕಿಸಾನ್ ಸಭಾದ ಅಧ್ಯಕ್ಷ ಜಸ್ವಿಂದರ್ ಸಿಂಗ್ ಹಾಗೂ ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಸೋಮಪ್ರಸಾದ್ ಈ ನಿಯೊಗದಲ್ಲಿದ್ದರು.

ಮಂದಸೌರ್ ಜಿಲ್ಲೆಯ ಬರ್ಖೇಡ ಪಂಥ್‌ನಲ್ಲಿ 17 ವರ್ಷದ ಅಭಿಷೇಕ್ ಪಾತಿದಾರ್ ಕುಟುಂಬದವರನ್ನು ಮತ್ತು ನೀಮುಚ್ ಜಿಲ್ಲೆಯ ನಯಖೇಡ ಗ್ರಾಮದ 23 ವರ್ಷದ ಚೈನ್‌ರಾಂ ಪಾತಿದಾರ್ ಕುಟುಂಬದವರನ್ನು ನಿಯೋಗ ಭೇಟಿಯಾಯಿತು.

ಈ ಇಬ್ಬರು ಹುತಾತ್ಮರ ಕುಟುಂಬದವರು

ಪುಟ 14 ನೋಡಿ




# ಮಹಾರಾಷ್ಟ್ರದ ರೈತರ 10 ದಿನಗಳ ಚಾರಿತ್ರಿಕ ಹೋರಾಟ

ಮಹಾರಾಷ್ಟ್ರದ ಅಭೂತಪೂರ್ವ ಮತ್ತು ಐಕ್ಯ ಮುಷ್ಕರ ಮೊದಲ ಹಂತದ ವಿಜಯ ಗಳಿಸಿದೆ. ‘ನಿಜವಾದ ರೈತರೊಡನೆ ಮಾತ್ರ ಮಾತಾಡುತ್ತೇನೆ’ ಎಂದು ಕಳೆದ ಹದಿನೈದು ತಿಂಗಳಿಂದ ಮುಂದೂಡುತ್ತಲೇ ಬಂದಿದ್ದ ರಾಜ್ಯದ ಬಿಜೆಪಿ ಮುಖ್ಯಮಂತ್ರಿಗಳು ಹತ್ತು ದಿನಗಳಾದರೂ ಪಟ್ಟು ಬಿಡದೆ, ಐಕ್ಯತೆಯನ್ನು ಮುರಿಯುವ ಸರಕಾರೀ ಪ್ರಯತ್ನಗಳನ್ನು ವಿಫಲಗೊಳಿಸಿ, ಈ ನಡುವೆ ಜೂನ್ 5ರ ವ್ಯಾಪಕ ಬಂದ್‌ನಲ್ಲಿ ವ್ಯಕ್ತಗೊಂಡ ಬೆಂಬಲದೊಂದಿಗೆ ಹೋರಾಟವನ್ನು ಮುಂದುವರೆಸಿದಾಗ ನಿರ್ವಾಹವಿಲ್ಲದೆ ಮುಖ್ಯಮಂತ್ರಿಗಳು ಇವರು ‘ನೈಜ ರೈತರು’ ಎಂದು ಒಪ್ಪಿಕೊಂಡು ಮಾತುಕತೆ ನಡೆಸಲೇ ಬೇಕಾಯಿತು. ಐವರು ಸಂಪುಟ ಮಂತ್ರಿಗಳಿದ್ದ ಉನ್ನತ ಅಧಿಕಾರದ ಸಮಿತಿಯೊಂದಿಗೆ ರೈತ ಸಂಘಟನೆಗಳ ಪ್ರತಿನಿಧಿಗಳ ಮಾತುಕತೆಯ ನಂತರ ಸರಕಾರ ಈ ಕೆಳಗಿನ ಒಪ್ಪಂದಕ್ಕೆ ಬರಬೇಕಾಯಿತು.:

1. ರೈತಾಪಿಗಳಿಗೆ ಸಂಪೂರ್ಣ ಸಾಲ ಮನ್ನಾ. ಇದರ ಪ್ರಯೋಜನವನ್ನು ಶ್ರೀಮಂತ ವಿಭಾಗಗಳೇ ಬಾಚಿಕೊಳ್ಳದಂತೆ ಮಾಡಲು ಇವನ್ನು ಹೊರಗಿಡುವ ಮಾನದಂಡಗಳನ್ನು ಒಂದು ತಿಂಗಳ ಒಳಗೆ ರೂಪಿಸಲಾಗುವುದು. ಇದಕ್ಕೆ 5 ರೈತ ಸಂಘಟನೆಗಳ ಪ್ರತಿನಿಧಿಗಳು ಮತ್ತು 5 ರಾಜ್ಯ ಸರಕಾರದ ಪ್ರತಿನಿಧಿಗಳಿರುವ ಒಂದು ಸಮಿತಿಯನ್ನು ರಚಿಸಲಾಗಿದೆ.
2. 5 ಎಕ್ರೆಗಿಂತ ಕಡಿಮೆ ಜಮೀನಿರುವ ಎಲ್ಲ ರೈತರಿಗೂ ಸಾಲಮನ್ನಾ ಮತ್ತು ಮುಂದಿನ ಬಿತ್ತನೆಗೆ ತಕ್ಷಣವೇ ಹೊಸ ಸಾಲ.
3. ರೈತಾಪಿಗಳಿಗೆ ಹಾಲಿನ ದರಗಳಲ್ಲಿ ಗಮನಾರ್ಹ ಪಾಲು. ಹಾಲಿನ ಬೆಲೆಗಳಲ್ಲಿ 70& ರೈತರಿಗೆ ಮತ್ತು 30% ಸಂಸ್ಕರಿಸುವ ಸಂಸ್ಥೆಗಳ ಖರ್ಚಿಗೆ ಕೊಡಲಾಗುವುದ.
4. ಮುಖ್ಯಮಂತ್ರಿಗಳು ಕನಿಷ್ಟ ಬೆಂಬಲ ಬೆಲೆ ನಿಗದಿ ಮಾಡಲು ಸ್ವಾಮಿನಾಥನ್ ಆಯೋಗದ ಶಿಫಾರಸನ್ನು(ವೆಚ್ಚ+50%) ಜಾರಿಮಾಡುವಂತೆ ಒತ್ತಾಯಿಸಲು ಪ್ರಧಾನಿಗಳ ಬಳಿಗೆ ರಾಜ್ಯದ ರೈತರ ನಿಯೋಗವನ್ನು ಒಯ್ಯಬೇಕು.

ಪುಟ 14 ನೋಡಿ






# ಧನದಾಹಕ್ಕೆ ನಿಯಂತ್ರಣ ಅಥವಾ ಕಾರ್ಪೋರೇಟ್ ರಾಜ್ ಗೆ ಹುನ್ನಾರ?

ರೋಗಿಗಳಿಂದ ಬೇಕಾಬಿಟ್ಟಿ ದರ ವಸೂಲಿ ಮಾಡುತ್ತಿರುವ ಖಾಸಗಿ ಆಸ್ಪತ್ರೆಗಳಿಗೆ ಕಡಿವಾಣ ಹಾಕಲು ಸರ್ಕಾರದಿಂದಲೇ ಚಿಕಿತ್ಸಾ ದರಗಳನ್ನು ನಿಗದಿಪಡಿಸುವ ಕಾಯ್ದೆ ತಿದ್ದುಪಡಿಗಾಗಿ ವಿಧೇಯಕ ಒಂದನ್ನು ಅದು ಮಂಡಿಸಿದೆ. ತಿದ್ದುಪಡಿ ವಿಧೇಯಕದ ಪ್ರಕಾರ, ಆಸ್ಪತ್ರೆಗಳು ಸರ್ಕಾರದ ಚಿಕಿತ್ಸಾ ದರಕ್ಕಿಂತ ಹೆಚ್ಚು ಹಣ ಸಂಗ್ರಹಿಸಿದರೆ 25 ಸಾವಿರ ರೂ.ಗಳಿಂದ 5 ಲಕ್ಷ ರೂ. ವರೆಗೆ ದಂಡ ಮತ್ತು ಕನಿಷ್ಠ 6 ತಿಂಗಳಿಂದ 3 ವರ್ಷದ ವರೆಗೆ ಜೈಲು ಶಿಕ್ಷೆ ವಿಧಿಸುವ ಪ್ರಸ್ತಾಪವಿದೆ. ಅಲ್ಲದೆ ಸರ್ಕಾರ ನೀಡಿದ ದರಗಳನ್ನು ಆಸ್ಪತ್ರೆಯ ಸ್ವಾಗತ ಕೊಠಡಿಯಲ್ಲೇ ಕಡ್ಡಾಯವಾಗಿ ಪ್ರಕಟಿಸಬೇಕು ಎಂಬ ಉಲ್ಲೇಖವೂ ಇದೆ. ಈ ಕುರಿತಂತೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ–2017ನ್ನು ಆರೋಗ್ಯ ಸಚಿವ ರಮೇಶ್ ಕುಮಾರ್ ಅವರು ಜೂನ್ 13ರಂದು ಮಂಡಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದರ ನಿಗದಿ ಕುರಿತಂತೆ ತಜ್ಞರ ಸಮಿತಿ ರಚಿಸಲಾಗುತ್ತದೆ. ಈ ತಜ್ಞರ ಸಮಿತಿಯು ಆಸ್ಪತ್ರೆಯ ಮೂಲ ಸೌಕರ್ಯ, ಸಿಬ್ಬಂದಿ, ಲಿಖಿತ ಸೂಚಿ ಲೆಕ್ಕಪರಿಶೋಧನೆ ಮುಂತಾದ ಕನಿಷ್ಠ ಗುಣಮಟ್ಟಗಳನ್ನು ರೂಪಿಸಿ ಪ್ರತಿಯೊಂದು ಆರೋಗ್ಯ ಸೇವೆ ಮತ್ತು ಚಿಕಿತ್ಸಾ ವೆಚ್ಚದ ದರ ನಿಗದಿ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡುತ್ತದೆ. ವಿವಿಧ ವರ್ಗದ ಆಸ್ಪತ್ರೆಗಳಿಗೆ ಪ್ರತ್ಯೇಕ ದರ ನಿಗದಿ ಶಿಫಾರಸು ಮಾಡಲೂ ಸಮಿತಿಗೆ ಅವಕಾಶವಿದೆ. ಈ ಶಿಫಾರಸು ಆಧರಿಸಿ ಸರ್ಕಾರ ಪ್ರತಿಯೊಂದು ಆರೋಗ್ಯ ಸೇವೆ ಮತ್ತು ಚಿಕಿತ್ಸೆಗೆ ದರ ನಿಗದಿಪಡಿಸುತ್ತದೆ.

ಇದಲ್ಲದೆ, ಇತ್ತೀಚಿನ ದಿನಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಚಿಕಿತ್ಸಾ ಪ್ಯಾಕೇಜ್‌ಗಳಿಗೂ ಕಡಿವಾಣ ಹಾಕಲು ನಿರ್ಧರಿಸಿರುವ ಸರ್ಕಾರ, ರಾಜ್ಯ ಸರ್ಕಾರ ನಿಗದಿಪಡಿಸಿದ ದರ ಮಾತ್ರ ವಸೂಲಿ ಮಾಡಬೇಕು ಜತೆಗೆ ಪ್ಯಾಕೇಜು ದರ ಒಳಗೊಂಡಂತೆ ತಪಾಸಣೆ, ಹಾಸಿಗೆ ಚಾರ್ಜ್, ಶಸ್ತ್ರಚಿಕಿತ್ಸಾ ಕೊಠಡಿ ಪ್ರಕ್ರಿಯೆ, ತೀವ್ರ ನಿಗಾ ರಕ್ಷಣೆ, ವೆಂಟಿಲೇಷನ್, ಸಮಾಲೋಚನೆ ಮತ್ತು ಅಂತಹದ್ದೇ ಪ್ಯಾಕೇಜುಗಳಿಗೂ ಸರ್ಕಾರವೇ ದರ ನಿಗದಿಪಡಿಸಲಿದೆ.


ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೋಂದಣಿ ಪ್ರಾಧಿಕಾರ ಸ್ಥಾಪಿಸಲಾಗುತ್ತದೆ. ಖಾಸಗಿ ಆಸ್ಪತ್ರೆಗಳು ಪ್ರತಿ ಮೂರು ವರ್ಷಕ್ಕೊಮ್ಮೆ ಅರ್ಜಿ ಸಲ್ಲಿಸಿ ಆಸ್ಪತ್ರೆಗಳನ್ನು ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಪ್ರಾಧಿಕಾದ ಮೇಲೆ ಮೇಲ್ಮನವಿ ಪ್ರಾಧಿಕಾರವನ್ನೂ ಸ್ಥಾಪಿಸಲಾಗುತ್ತದೆ. ಅಲ್ಲದೆ, ಖಾಸಗಿ ಆಸ್ಪತ್ರೆಗಳ ಸಮಸ್ಯೆ, ಅವುಗಳ ವಿರುದ್ಧ ದಾಖಲಾಗುವ ದೂರುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ಜಿ.ಪಂ. ಸಿಇಒ ಅಧ್ಯಕ್ಷತೆಯಲ್ಲಿ ಜಿಲ್ಲಾ ಅಥವಾ ಮಹಾನಗರ ಕುಂದುಕೊರತೆ ಪರಿಹಾರ ಸಮಿತಿ ರಚಿಸುವ ಬಗ್ಗೆಯೂ ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಮುಂಗಡ ಪಾವತಿಸದೆ ರೋಗಿಗಳನ್ನು ದಾಖಲಿಸಿಕೊಳ್ಳುತ್ತಿಲ್ಲ, ಮೃತರಾದರೆ ಬಿಲ್ ಪಾವತಿಸದೆ ಮೃತದೇಹ ಬಿಟ್ಟುಕೊಡುವುದಿಲ್ಲ ಎಂಬ ಆರೋಪಗಳಿಗೂ ವಿಧೇಯಕದಲ್ಲಿ ಪರಿಹಾರ ಒದಗಿಸಲಾಗುತ್ತಿದೆ. ಮುಂಗಡ ಪಾವತಿಗೆ ಒತ್ತಾಯಿಸದೆ ರೋಗಿಯ ಜೀವ ರಕ್ಷಿಸಲು ಅವಶ್ಯಕ ಆರೋಗ್ಯ ರಕ್ಷಣೆ ಒದಗಿಸಬೇಕು. ಅಲ್ಲದೆ, ರೋಗಿ ಮೃತಪಟ್ಟಾಗ ಮೃತದೇಹ ಬಿಟ್ಟುಕೊಡಲು ಬಾಕಿ ಪಾವತಿಸಲು ಒತ್ತಾಯಿಸುವಂತಿಲ್ಲ. ಮೃತದೇಹ ಬಿಟ್ಟುಕೊಟ್ಟ ನಂತರ ಬಾಕಿಯನ್ನು ಮೃತನ ಪ್ರತಿನಿಧಿಗಳಿಂದ ವಸೂಲಿ ಮಾಡಿಕೊಳ್ಳಬೇಕು ಎಂದು ಹೇಳಲಾಗಿದೆ. ಇದಲ್ಲದೆ ರೋಗಿಗಳಿಗೂ, ವೈದ್ಯರಿಗೂ, ಖಾಸಗಿ ಆಸ್ಪತ್ರೆಯ ಮಾಲಿಕರಿಗೂ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲಾಗಿದೆ.

ಮೇಲುನೋಟಕ್ಕೆ ಈ ವಿಧೇಯಕ ಜನಪರವೆಂದು ಕಾಣುತ್ತದೆ. ಆದರೆ ಡಾ. ಶ್ರೀನಿವಾಸ ಕಕ್ಕಿಲಾಯ ಮತ್ತು ಡಾ. ಎಚ್.ಎಸ್.ಅನುಪಮ ಅವರಂತಹ ಸಾಮಾಜಿಕ ಕಾಳಜಿಯ ಜನಪರ ವೈದ್ಯರೂ ವಿಧೇಯಕದ ಬಗ್ಗೆ ತೀವ್ರ ಸಂದೇಹ ಮತ್ತು ವಿರೋಧ ವ್ಯಕ್ತಪಡಿಸಿದ್ದಾರೆ.

ವೈದ್ಯರ ಲೋಪಗಳ ಮೇಲೆ ಕ್ರಮ ಕೈಗೊಳ್ಳಲು ಗ್ರಾಹಕ ವ್ಯಾಜ್ಯ ವೇದಿಕೆ, ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯಾಲಯ ಇತ್ಯಾದಿಗಳೆಲ್ಲವೂ ಇರುವಾಗ, ಅವು ಯಾವುವೂ ಸರಿಯಿಲ್ಲವೆಂದು ಜರೆದು, ಜಿಲ್ಲಾವಾರು ಆಯೋಗಗಳನ್ನು ರಚಿಸುವುದು ಏಕೆ, ಎಂದು ಡಾ. ಶ್ರೀನಿವಾಸ ಕಕ್ಕಿಲಾಯ ಪ್ರಶ್ನಿಸಿದ್ದಾರೆ. ತನ್ನ ಆಸ್ಪತ್ರೆಗಳನ್ನು ಪಾಳು ಬಿಟ್ಟು, ಕಾರ್ಪೊರೇಟ್ ಆಸ್ಪತ್ರೆಗಳಿಗೆ ಎಕರೆಗಟ್ಟಲೆ ಜಾಗ ಕೊಟ್ಟು, ಯಶಸ್ವಿನಿ ಇತ್ಯಾದಿ ಹೆಸರಲ್ಲಿ ಜನರನ್ನು ಅತ್ತ ದೂಡಿದ ಸರ್ಕಾರ 'ಖಾಸಗಿ ವೈದ್ಯರೆಲ್ಲರೂ ಧನದಾಹಿಗಳು' ಎನ್ನುವುದು ಸರಿಯೇ ಎಂದು ಅವರು ಪ್ರಶ್ನಿಸಿದ್ದಾರೆ

ರಾಜ್ಯದಲ್ಲಿ ಶೇ 70 ರಷ್ಟು ಆರೋಗ್ಯ ಸೇವೆಗಳನ್ನು ಸಣ್ಣ ಆಸ್ಪತ್ರೆಗಳೇ ಒದಗಿಸುತ್ತವೆ. ಸಾಮಾನ್ಯ ರೋಗಗಳ ಚಿಕಿತ್ಸೆಗಳು, ಸಾಮಾನ್ಯ ಶಸ್ತ್ರಚಿಕಿತ್ಸೆಗಳು, ಹೆರಿಗೆ




ಹಾಗೂ ಮಕ್ಕಳ ಸೇವೆಗಳು ಈ ಸಣ್ಣ ಆಸ್ಪತ್ರೆಗಳಲ್ಲೂ, ಸರ್ಕಾರಿ ಆಸ್ಪತ್ರೆಗಳಲ್ಲೂ ನಡೆಯುತ್ತವೆ. ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಶೇ 5 ಕ್ಕೂ ಕಡಿಮೆ ಚಿಕಿತ್ಸೆಗಳಾಗುತ್ತಿದ್ದು, ಅವೆಲ್ಲವೂ ಉನ್ನತ ಮಟ್ಟದ ಚಿಕಿತ್ಸೆಗಳೇ ಆಗಿರುತ್ತವೆ. ಆದ್ದರಿಂದ ಕಾರ್ಪೊರೇಟ್ ಆಸ್ಪತ್ರೆಗಳನ್ನು ಸಣ್ಣ ಆಸ್ಪತ್ರೆಗಳೊಂದಿಗೆ ತಳಕು ಹಾಕುವುದು ಅಸಮಂಜಸವಷ್ಟೇ ಅಲ್ಲ, ಅನ್ಯಾಯವೂ ಆಗುತ್ತದೆ, ಎಂಬುದು ಅವರ ಅಭಿಪ್ರಾಯ.

ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಒದಗಿಸುತ್ತಿರುವ ಬಹುತೇಕ ಸಣ್ಣ ಆಸ್ಪತ್ರೆಗಳು ಸಾಕಷ್ಟು ಕಷ್ಟದಲ್ಲೇ ನಡೆಯುತ್ತಿದ್ದು, ಹಲವು ಮುಚ್ಚಿಹೋಗಿವೆ. ಸಣ್ಣ ಆಸ್ಪತ್ರೆಗಳ ಮೇಲೆ ಇನ್ನಷ್ಟು ನಿರ್ಬಂಧಗಳನ್ನು ಹೇರಿದರೆ ಅವುಗಳ ಬಾಗಿಲು ಬಂದ್ ಆಗುತ್ತದೆ. ಅದರಿಂದ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಇನ್ನಷ್ಟು ಲಾಭ. ಆದ್ದರಿಂದ ದೇಶದ ಎಲ್ಲಾ ಕಾನೂನುಗಳಿಗೆ ವಿರುದ್ಧವಾಗಿರುವ, ಎಲ್ಲೂ ಇಲ್ಲದ ನಿರ್ಬಂಧಗಳನ್ನು ವೈದ್ಯರ ಮೇಲೆ ಹೇರಿ ದಿನನಿತ್ಯದ ವೃತ್ತಿಪರ ಕೆಲಸಗಳನ್ನೂ ಸರ್ಕಾರಿ ಅಧಿಕಾರಿಗಳ ಅಧೀನದಲ್ಲಿ ತರುವ, ಎಲ್ಲೋ ಗುರಿಯಿಟ್ಟು ಇನ್ಯಾವುದನ್ನೋ ಹೊಡೆದು ಉರುಳಿಸುವ ಈ ಮಸೂದೆಯನ್ನು ಈ ಕೂಡಲೇ ತಡೆಹಿಡಿದು, ಇನ್ನಷ್ಟು ಆಳವಾಗಿ ಚರ್ಚಿಸಿದ ಬಳಿಕವೇ ಮುಂದಡಿ ಇಡಬೇಕಾಗಿದೆ, ಎನ್ನುತ್ತಾರೆ ಡಾ, ಕಕ್ಕಿಲಾಯ.

ಎಲ್ಲಕ್ಕಿಂತ ಮುಖ್ಯವಾಗಿ, ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಬೇಕಾದರೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಸ್ಥಿತಿಯನ್ನು ಅತ್ಯುತ್ತಮಗೊಳಿಸಿ, ಸಣ್ಣ ಖಾಸಗಿ ಆಸ್ಪತ್ರೆಗಳಿಗೆ ಉತ್ತೇಜನ ನೀಡಿ, ವೈದ್ಯರಿಗೆ ನಿರ್ಭಿಡೆಯಿಂದ ತಮ್ಮ ಕಾರ್ಯನಿರ್ವಹಿಸಲು ಅಗತ್ಯವಾದ ಸೌಲಭ್ಯಗಳನ್ನೂ, ಸುರಕ್ಷತೆಯನ್ನೂ ಒದಗಿಸಬೇಕಾಗಿದೆ, ಎಂದು ಡಾ, ಕಕ್ಕಿಲಾಯ. ಅಭಿಪ್ರಾಯ ಪಡುತ್ತಾರೆ.

ವೈದ್ಯರ ಧನದಾಹದ ಮೂಲ ಅಧ್ಯಾತ್ಮ– ಶಿಕ್ಷಣ– ತಾಯಗರ್ಭ ಮೊದಲುಗೊಂಡು ಎಲ್ಲ 'ಸೇವೆ'ಗಳೂ ವಾಣಿಜ್ಯೀಕರಣಗೊಂಡ ಕಾಲದಲ್ಲಿದೆ; ಕ್ಯಾಪಿಟೇಷನ್ ಮೆಡಿಕಲ್ ಕಾಲೇಜುಗಳಲ್ಲಿದೆ; 'ಶ್ರೇಣೀಕೃತ' ಸೇವೆಯನ್ನು ಮಾನ್ಯ ಮಾಡಿರುವ ಸಮಾಜದಲ್ಲಿದೆ; ಇನ್ಶೂರೆನ್ಸ್ ಕಂಪೆನಿಗಳಿಂದಲೇ ಬದುಕುವೆವೆನ್ನುವ, ಅತ್ಯಾಧುನಿಕ ನಿಖರ ಸೇವೆ ತಮ್ಮದೆನ್ನುವ ಕಾರ್ಪೊರೇಟ್ ಆಸ್ಪತ್ರೆಗಳ ಹುನ್ನಾರಗಳಲ್ಲಿದೆ. ಹೋಬಳಿ, ತಾಲ್ಲೂಕು ಕೇಂದ್ರಗಳಂತಹ ಸಣ್ಣ ಪಟ್ಟಣಗಳಲ್ಲಿರುವ ಹಾಗೂ ಕಡಿಮೆ ಬಂಡವಾಳದ ಸಣ್ಣ ಆಸ್ಪತ್ರೆ ನಡೆಸುವವರ ಪರಿಸ್ಥಿತಿ ಬೃಹತ್ ಆಸ್ಪತ್ರೆಗಳಿಗಿಂತ ಭಿನ್ನವಾಗಿದೆ. ಆದರೆ ವಾಸ್ತವ ಸತ್ಯಗಳಿಗಿಂತ ಎಲ್ಲವನ್ನೂ ಒಂದೇ ಅಳತೆಪಟ್ಟಿಯಲ್ಲಿ ಹಿಡಿದು ನೋಡುವ ಸಂಸ್ಥೆಗಳಿಗೆ ಜನಪ್ರಿಯವಾದ ತಕ್ಷಣದ ಕ್ರಮವೊಂದು ಬೇಕಾಗಿದೆ. ಮೇಲ್ನೋಟಕ್ಕೆ ಭಾರೀ ಕ್ರಾಂತಿಕಾರಕ ಎಂದು ಕಾಣಿಸಿದರೂ ರೋಗಿಗಳಿಗೆ ಕಡಿಮೆ ಬೆಲೆಯ ಉತ್ತಮ ಆರೋಗ್ಯಸೇವೆ ನಿಲುಕದಂತೆ ಮಾಡುವ ಲೈಸೆನ್ಸ್ ರಾಜ್ ಸೃಷ್ಟಿಸುವ ಕ್ರಮ ಇದಾಗಿದೆ ಎಂದು ಡಾ. ಎಚ್.ಎಸ್. ಅನುಪಮ ಟೀಕಿಸಿದ್ದಾರೆ

ಈ ವಿಧೇಯಕದ ಯಶಸ್ಸು ಆಸ್ಪತ್ರೆ ನೊಂದಣಿ ಪ್ರಾಧಿಕಾರ ಮತ್ತು ಕುಂದುಕೊರತೆ ಪರಿಹಾರ ಸಮಿತಿಯ ಕೆಲಸದ ಮೇಲೆ ಅವಲಂಬಿಸಿದೆ. ಆದರೆ ಈ ಸಮಿತಿಗಳಲ್ಲಿ ನಾಗರಿಕ ಸಂಘಟನೆಗಳಿಗಿಂತ ನೌಕರಶಾಹಿ ಹೆಚ್ಚಿದೆ. ಈ ಸಮಿತಿಗಳಲ್ಲಿ ಗ್ರಾಹಕ ಸಂಘಟನೆ ತಜ್ಞರು, ಸಾಮಾಜಿಕ ಕಾರ್ಯಕರ್ತರು ಇರಬೇಕಾಗುತ್ತದೆ. ಜನತೆಯ ಪಾಲುಗೊಳ್ಳುವಿಕೆಯಿಲ್ಲದೆ ಖಾಸಗಿ ಆಸ್ಪತ್ರೆಗಳ ಲೋಪದೋಷಗಳನ್ನು ಸರಿಪಡಿಸುವುದು ಕಷ್ಟ. ಅದೇ ರೀತಿ ಸರಕಾರಿ ಆಸ್ಪತ್ರೆಗಳಲ್ಲಿ ಭ್ರಷ್ಟಾಚಾರದ ರೂಪದಲ್ಲಿರುವ ವೈದ್ಯರ "ಧನದಾಹ"ವನ್ನು ಮತ್ತು ಕಳಪೆ ಸೇವಾ ಗುಣಮಟ್ಟ ಹೇಗೆ ನಿಭಾಯಿಸುವುದು ಎಂಬುದನ್ನು ವಿಧೇಯಕ ಗಣನೆಗೆ ತೆಗೆದುಕೊಳ್ಳಬೇಕು. ಕೊನೆಗೂ ಸಾರ್ವಜನಿಕ ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ಸಾಕಷ್ಟು (ಜಿಡಿಪಿಯ ಕನಿಷ್ಟ ಶೇ. 3) ಹಣ ಹೂಡುವುದು, ಅದರ ಕೆಲಸ ಉತ್ತಮ ಪಡಿಸುವುದು, ವೈದ್ಯಕೀಯ ಶಿಕ್ಷಣದಲ್ಲೂ ಸರಕಾರಿ ಕಾಲೇಜು ವ್ಯವಸ್ಥೆಯನ್ನು ಗಟ್ಟಿಗೊಳಿಸುವುದು ಮಾತ್ರ ವೈದ್ಯಕೀಯ ಸೇವೆಯಲ್ಲಿ "ಧನದಾಹ"ಕ್ಕೆ ಮದ್ದು. ●

## ರಾಜ್ಯ ಪೌರಕಾರ್ಮಿಕರ ಐಕ್ಯ ಮುಷ್ಕರ.......

ಪುಟ 16 ರಿಂದ

ನಡೆಸಿದ್ದಾರೆ. ಮುಖಂಡರಾದ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ರಾದ ಮಾಜಿ ಮೇಯರ್ ನಾರಾಯಣ್, ಕಾರ್ಮಿಕ ನಾಯಕರುಗಳಾದ ಕ್ಲಿಫ್ಟನ್, ಬಾಲನ್, ಅಂಜಿನಿ ಮುಂತಾದವರು ನೇತ್ರತ್ವ ನೀಡಿದ್ದಾರೆ, ಹೋರಾಟದ ಟೆಂಟಿಗೆ ಸಚಿವರುಗಳಾದ ಆಂಜನಯ್ಯ, ಕೆ.ಕೆ. ಜಾರ್ಜ, ನಗರಾಬಿವೃದ್ದಿ ಇಲಾಖೆ, ಪೌರಾಡಳಿತ ನಿರ್ದೇಶಕರು ಬಂದು ಸಮಸ್ಯೆಯನ್ನು ಬಗೆಹರಿಸುವ ಹಳಸಲು ಭರವಸೆಯನ್ನು ನೀಡಿದ್ದಾರೆ.

**ತುಮಕೂರು:**

ಕರ್ನಾಟಕ ರಾಜ್ಯ ಪೌರಕಾರ್ಮಿಕ ಸಂಘಟನೆಗಳ ಜಂಟಿ ಹೋರಾಟ ಸಮಿತಿಯ ನೇತೃತ್ವದಲ್ಲಿ ರಾಜ್ಯ ಧ್ಯಂತ ನಡೆಯುತ್ತಿರುವ ಅನಿದಿಷ್ಟ ಮುಷ್ಕರವನ್ನು ತುಮಕೂರಿನ ಜಿಲ್ಲಾಧಿಕಾರಿಗಳ ಕಛೇರಿ ಎದುರು ಹಿರಿಯ ಹೋರಾಟಗಾರ, ಚಿಂತಕ ಪ್ರೊ. ಕೆ ದೊರೆ–ರಾಜು ಅವರು ಉದ್ಘಾಟಿಸಿ ಮಾತನಾಡಿದರು ಹಲವು ರೀತಿಯ ಹೋರಾಟಗಳನ್ನು ನಡೆಸಿಕೊಂಡು ಬರುತ್ತಿರುವ ಪೌರಕಾರ್ಮಿಕರಿಗೆ ಸರ್ಕಾರವೇ ಖಾಯಂಮಾಡುವ ಭರವಸೆಯ್ನು ನೀಡಿ ಈಗ ಮೌನವಹಿಸಿರುವುದು ಸರಿಯಾದ ಕ್ರಮವಲ್ಲ ಎಂದ ಅವರು ಮುನಿಸಿಪಲ್ ಕಾರ್ಮಿಕರ ಹೊರಗುತ್ತಿಗೆ ಪದ್ದತಿ ರದ್ದುಪಡಿಸಿ, ಗುತ್ತಿಗೆ ಆಧಾರದ ಮೇಲೆ ದುಡಿಯುತ್ತಿರುವ ಕಾರ್ಮಿಕರನ್ನು ಕಾಯಂಗೊಳಿಸಬೇಕು ಎಂದು ಒತ್ತಾಯಿಸಿದರು

ತುಮಕೂರು ನಗರದ ಟೌನ್‌ಹಾಲ್‌ನಲ್ಲಿ ಸಮಾವೇಶಗೊಂಡ ನೂರಾರು ಪೌರಕಾರ್ಮಿಕರು ಅಶೋಕ ರಸ್ತೆ, ಎಂ.ಜಿ.ರಸ್ತೆ, ಮೂಲಕ ಶಿರಾಣಿ ರಸ್ತೆಯ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದರು. ರಾಜ್ಯ ಸರ್ಕಾರ ಮಾತಿಗೆ ತಪ್ಪಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಟೌನ್‌ಹಾಲ್‌ನಿಂದ ಎಂ.ಜಿ ರಸ್ತೆಯ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿ ನಂತರ ಅನಿರ್ದಿಷ್ಟ ಮುಷ್ಕರ ಆರಂಭಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್, ಸ್ಲಂ ಜನಾಂದೋಲನದ ಸಂಚಾಲಕರಾದ ಎ. ನರಸಿಂಹ ಮೂರ್ತಿ, ಸಫಾಯಿ ಕರ್ಮಚಾರಿ ಕಾವಲು ಸಮಿತಿಯ ಸಂಚಾಲಕ ಓಬಳೇಶ್, ರಾಜ್ಯ ಖಜಾಂಚಿ ಸಿ.ವೆಂಕಟೇಶ್ ಮಾತನಾಡಿದರು. ಹೋರಾಟವನ್ನು ಬೆಂಬಲಿಸಿ ದಲಿತ ಸಂಘರ್ಷ ಸಮಿತಿಯ ಪಿ.ಎನ್. ರಾಮಯ್ಯ, ಮಾದಿಗ ದಂಡೋರದ ಶಿವರಾಜು, ಅಂಬೇಡ್ಕರ್ ಯುವ ಸೇನೆಯ ಜಿ. ಗಣೇಶ್, ಉಪನ್ಯಾಸಕ ರಂಗಧಾಮಯ್ಯ, ಪ್ರಜಾಪ್ರಗತಿ ಸಂಪಾದಕರಾದ ಎಸ್. ನಾಗಣ್ಣ, ಪುಟ್ಟಕಾಮಣ್ಣ ಎಸ್.ಎಫ್.ಐ ಶಿವಣ್ಣ, ಹಿರಿಯ ಸ್ವಾತಂತ್ರ ಹೋರಾಟಗಾರ ಟಿ.ಅರ್. ರೇವಣ್ಣ, ಸಿ ಯತಿ ರಾಜು ಬೆಂಬಲಿಸಿ ಮಾತನಾಡಿದರು. ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಯಿತು.

ಹೋರಾಟದ ನೇತೃತ್ವವನ್ನು ನಗರಾ ಧ್ಯಕ್ಷ ರಾಮಕೃಷ್ಣಪ್ಪ, ನರಸಿಂಹಮೂರ್ತಿ, ದೇವರಾಜು, ಮಂಜು, ಉಮೇಶ್, ಚಿಕ್ಕಗಂಗಾ, ಸಿದ್ದಲಿಂಗ, ಚಂದ್ರಪ್ಪ, ಮುಂತಾದವರು ನೇತೃತ್ವವಹಿಸಿದ್ದರು.

**ವಿಜಯಪುರ:**

ರಾಜ್ಯ ಪೌರ ಕಾರ್ಮಿಕರ ಸಂಘಟನೆಗಳ ಜಂಟಿ ಹೋರಾಟ ಸಮಿತಿಯ ಕರೆಯ ಮೇಲೆ ಗುತ್ತಿಗೆ ಮುನಿಸಿಪಾಲ್ ಕಾರ್ಮಿಕರು ವಿಜಯಪುರ ನಗರದ ಡಾ. ಬಿ.ಆರ್. ಅಂಬೇಡ್ಕರ ವೃತ್ತದಿಂದ ಮೆರವಣಿಗೆ ಮುಖಾಂತರ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಜಿಲ್ಲಾಧಿಕಾರಿ ಕೆ.ಬಿ. ಶಿವುಕುಮಾರ ಅವರ ಮುಖಾಂತರ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ,ಸಿಐಟಿಯು ಕಾರ್ಯದರ್ಶಿ ಸೋಮಪ್ಪ ಆಯಟ್ಟಿ ,ರೈತ ಸಂಘದ ಮುಖಂಡರಾದ ಭೀಮಶಿ ಕಲಾದಗಿ ಮಾತನಾಡಿದರು. ಈ ಸಂದರ್ಭದಲ್ಲಿ ಪರಮಾನಂದ ಬಸರಕೋಡ, ಚನ್ನಪ್ಪ ಚಲವಾದಿ, ಸಿದ್ರಾಮ ಉಕ್ಕಲಿ, ಭೀಮ ಪೂಜಾರಿ, ರಾಜು ಪುಕಾಳೆ, ಸುಶೀಲಾ ಕಂಬಳಿ, ಭಾಸ್ಕರ ಭೋರಗಿ, ತಿಮ್ಮವ್ವ ಮುದ್ದೇಬಿಹಾಳ, ಸದಾಶಿವ ಚಂಚಲಕರ, ದಯಾನಂದ ಅಲಿಬಾದಿ ಮುಂತಾದ ಪೌರಕಾರ್ಮಿಕರು ಇದ್ದರು.

**ಹಾಸನ:**

ಜಂಟಿ ಮುಷ್ಕರದ ಭಾಗವಾಗಿ ಹಾಸನದಲ್ಲಿ ಸುರಿಯುವ ಮಳೆಯನ್ನು ಲೆಕ್ಕಿಸದೆ ನೂರಾರು ಮುನಿಸಿಪಾಲ್ ಕಾರ್ಮಿಕರು ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ ರಿ. ಸಿಐಟಿಯು ಮುಂದಾಳತ್ವದಲ್ಲಿ ಹೇಮಾವತಿ ಪ್ರತಿಮೆಯ ಮುಂದಿನಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ಮೆರವಣಿಗೆ ನಡೆಸಿದ್ದರೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆಯನ್ನು ಉದ್ದೇಶಿಸಿ ಸಂಘದ ಜಿಲ್ಲಾ ಅಧ್ಯಕ್ಷರಾದ ಧರ್ಮೇಶ್, ಮಂಜಣ್ಣ, ರಾಜ್ಯ ಸಮಿತಿ ಮುಖಂಡರಾದ ಅನುರಾಧ ಮಾತನಾಡಿದರು. ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಲಾಯಿತು.

**ಉತ್ತರ ಕನ್ನಡ:**

ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಮುನಿಸಿಪಾಲಿಟಿಗಳಲ್ಲಿ ಮುಷ್ಕರದ ಬಾಗವಾಗಿ ಕೆಲಸ ನಿಲ್ಲಿಸಿ ಮನವಿಪತ್ರ ಸಲ್ಲಿಸಲಾಗಿದೆ, ಸಂಘದ ಜಿಲ್ಲಾಧ್ಯಕ್ಷ ಸ್ಯಾಮ್ಸನ್, ನಾಗಪ್ಪ ಮತ್ತಿತರರು ಭಾಗವಹಿಸಿದ್ದರು.

**ಇತರೇ:**

ಬೆಳಗಾವಿಯಲ್ಲಿ ಸಂಘದ ರಾಜ್ಯಾಧ್ಯಕ್ಷರಾದ ಹರಿಶ್ ನಾಯಕ್ ಅವರು ಮುಂದಾಳತ್ವದಲ್ಲಿ ಮುಷ್ಕರ ನಡೆದಿದೆ, ವಿಜಯಪುರದಲ್ಲಿ ಲಕ್ಷ್ಮಣ್ ಹಂದ್ರಾಳ್, ಸೋಮಪ್ಪ ಅಯಿಕಟ್ಟಿ, ಇದ್ದು ಹೋರಾಟ ನಡೆದಿದೆ. ಬಾಗಲಕೋಟೆ, ಹಾನಗಲ್, ಶಿವಮೊಗ್ಗ, ಚಿಕ್ಕಮಗಳೂರು, ತರಿಕೇ–ರೆ, ಯಾದಗೀರ್, ಕೋಲಾರ, ಗುಲ್ಬರ್ಗಗಳಲ್ಲಿ ಸಹ ಮುಷ್ಕರದ ಬಾಗವಾಗಿ ಧರಣಿ ನಡೆದಿದೆ.

ರಾಜ್ಯದ ಇತರೆ ಜಿಲ್ಲೆಗಳಾದ ಮಂಡ್ಯ, ರಾಮನಗರ, ಮೈಸೂರು, ಚಾಮರಾಜನಗರ, ಮಡಕೇರಿ, ಹುಬ್ಬಳಿ–ಧಾರವಾಡ, ಬಳ್ಳಾರಿ, ಕೊಪ್ಪಳ, ಮುಂತಾದ ಕಡೆಗಳಲ್ಲಿ ಕರ್ನಾಟಕ ರಾಜ್ಯ ಪೌರಕಾರ್ಮಿಕ ಸಂಘಟನೆಗಳ ಜಂಟಿ ಹೋರಾಟ ಸಮಿತಿಯ ಪಾಲುದಾರ ಸಂಘಟನೆಗಳು ಮುಷ್ಕರದ ಯಶಸ್ವಿಗೆ ಶ್ರಮ ವಹಿಸಿವೆ. ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿ ಮೂಡಿಬಂದಿರುವ ಐಕ್ಯ–ಚಳುವಳಿ ಸಾಕಷ್ಟು ದೂರ ಕ್ರಮಿಸಬೇಕಾಗಿದೆ. ಮತ್ತೆ ಮೂಡುವ ಪ್ರಶ್ನೆ ರಾಜ್ಯ ಸರ್ಕಾರ ಮಾತಿಗೆ ತಪ್ಪದೆ ನುಡಿದಂತೆ ನಡೆಯುವುದೇ? ●

# ನೋಟುರದ್ಧತಿಯಿಂದ ಬೆಲೆ ಕುಸಿತ: ಸಾಲಮನ್ನಾದ ವಿರುದ್ಧ ಬೊಬ್ಬೆಯೂ-ಅಚ್ಛೇ ದಿನ್ ಮೌನವ್ರತವೂ

ಕಳೆದ ನವಂಬರ್‌ನಲ್ಲಿ ಮೋದಿ ಸರಕಾರ ನೋಟು ರದ್ಧತಿ ಮಾಡಿದಾಗ, ಆಗಷ್ಟೇ ಆರಂಭವಾಗಿದ್ದ ಹಿಂಗಾರು ಬೇಸಾಯವನ್ನು ಅದು ತಟ್ಟಬಹುದು ಎಂದು ಹಲವರು ಭೀತಿ ಪಟ್ಟಿದ್ದರು. ಆದರೆ ಉತ್ತಮ ಮಳೆಯಿಂದಾಗಿ ಹಾಗಾಗಲಿಲ್ಲ, ರೈತರು ಅಲ್ಲಿ-ಇಲ್ಲಿ ಸಾಲ ಮಾಡಿ ಬಿತ್ತನೆ ಮಾಡಿದರು, ಕಟಾವು ಮಾಡಿದರು. ಆದರೆ ಬೆಳೆ ಮಾರುಕಟ್ಟೆಗೆ ಬಂದಾಗ ಸಮಸ್ಯೆ ಆರಂಭವಾಯಿತು ಎನ್ನುತ್ತಾರೆ ಈಗ ಅರ್ಥಿಕ ತಜ್ಞರು-ದೇಶಾದ್ಯಂತ ಭುಗಿಲೆದ್ದಿರುವ ರೈತರ ಆಕ್ರೋಶದ ಹಿನ್ನೆಲೆಯಲ್ಲಿ.

ನೋಟು ರದ್ಧತಿಯು ಕ್ರಮ ಒಂದಲ್ಲ, ಎರಡಲ್ಲ, ಐದಲ್ಲ, ಸುಮಾರಾಗಿ ರೈತರ ಎಲ್ಲ ಉತ್ಪನ್ನಗಳ ಬೆಲೆಗಳೂ ಕುಸಿಯುವಂತೆ ಮಾಡಿವೆ ಎಂದೀಗ ಸ್ಪಷ್ಟವಾಗಿದೆ. ಚುನಾವಣಾ ವಿಜಯಗಳತ್ತ ತೋರಿಸಿ ನೋಟುರದ್ಧತಿಯನ್ನು ಜನ ಒಪ್ಪಿದ್ದಾರೆ ಎಂದು ಹೇಳುತ್ತಿರುವಾಗಲೇ ಈ ಬೆಲೆ ಕುಸಿತದ ಆಕ್ರೋಶದ ಬೆಳೆಯನ್ನು ಮೋದಿ ಸರಕಾರ ಮತ್ತು ಇತರ ರಾಜ್ಯಸರಕಾರಗಳು ಕಟಾವು ಮಾಡುವಂತಾಗಿದೆ ಎನ್ನುತ್ತಾರೆ ಪರಿಣಿತರು.

ಉತ್ತರ ಪ್ರದೇಶದ ಫರುಕಾಬಾದ್‌ನಲ್ಲಿ ಒಂದು ಕ್ವಿಂಟಲ್ ಆಲೂಗಡ್ಡೆಗೆ ಕಳೆದ ವರ್ಷ 600ರೂ. ಸಿಕ್ಕಿತ್ತು, ಮೇ 2016 ರ ವೇಳೆಗೆ 1000ಕ್ಕೂ ತಲುಪಿತ್ತು. ಆದರೆ ಈಗ ಅದು 350 ರೂ. ಗೆ ಇಳಿದಿದೆ.

ಮಹಾರಾಷ್ಟ್ರದ ಲಾಸಲ್‌ಗಾಂವ್‌ನಲ್ಲಿ ಈರುಳ್ಳಿ ಬೆಲೆ ಈ ಮೇ ತಿಂಗಳಲ್ಲಿ 450 ರೂ. ಕಳೆದ ಮೇನಲ್ಲಿ ಇದು 750-800ರೂ. ಇತ್ತು ಎನ್ನಲಾಗಿದೆ.

ಕರ್ನಾಟಕದ ಕೋಲಾರದಲ್ಲಿ ಟೊಮೆಟೊ ಬೆಲೆ ಕಳೆದ ವರ್ಷದ 1500-1600ರೂ.ನಿಂದ ಈ ವರ್ಷ 300-400ರೂ.ಗೆ ಇಳಿದಿದೆ.

ಮಧ್ಯಪ್ರದೇಶದ ಮಾಳವಾ ಪ್ರದೇಶದಲ್ಲಿ ಬೆಳ್ಳುಳ್ಳಿ ಮತ್ತು ಮೆಂತೆ ಬೀಜಕ್ಕೆ ಸಿಕ್ಕ ಬೆಲೆ ಕಳೆದ ವರ್ಷ ಕ್ವಿಂಟಲಿಗೆ ಅನುಕ್ರಮವಾಗಿ 4100ರೂ. ಮತ್ತು 4800 ರೂ.ಇತ್ತು. ಈ ಎಪ್ರಿಲ್‌ನಲ್ಲಿ ಅದು 3400, 3200ರೂ. ಗೆ ಕುಸಿದಿದೆ.

ಮಹಾರಾಷ್ಟ್ರದ ನಾಶಿಕ್‌ನಲ್ಲಿ ಕಳೆದ ವರ್ಷ ಕೆಜಿಗೆ 45 ರೂ.ಗೆ ಬೀಜರಹಿತ ಸೊನಕ ದ್ರಾಕ್ಷೆಯನ್ನು ಮಾರಿದ್ದ ರೈತರು ಈ ಬಾರಿ 12ರೂ. ಗೆ ಚೆಲ್ಲಿ ಹೋಗಬೇಕಾಗಿ ಬಂತು.

**ಅಂದರೆ ಈಗ ಕಾಣುತ್ತಿರುವುದು ಕೆಲವು ಬೆಳೆಗಳ ಬೆಲೆಗಳಲ್ಲಿ ಕುಸಿತ ಮಾತ್ರವಲ್ಲ, ಎಲ್ಲ ಕೃಷಿ ಉತ್ಪನ್ನಗಳ ಸಾರ್ವತ್ರಿಕ ಬೆಲೆ ಕುಸಿತ ಎನ್ನುತ್ತಾರೆ ಹರೀಶ್ ದಾಮೋದರನ್(ಇಂಡಿಯನ್ ಎಕ್ಸ್‌ಪ್ರೆಸ್, ಜೂನ್ 12). ನಾವು ಕೃಷಿ ಉತ್ಪನ್ನಗಳ ವಿಷಯದಲ್ಲಿ ಹಣದುಬ್ಬರಕ್ಕೆ ತದ್ವಿರುದ್ಧವಾದ ಪರಿಸ್ಥಿತಿಯನ್ನು ಪ್ರವೇಶಿಸಿದ್ದೇವೆ, ಇದಕ್ಕೆ ತಕ್ಷಣದಲ್ಲಿ ಪ್ರಚೋದನೆ ನೀಡಿರುವುದು ನೋಟುರದ್ಧತಿ ಎನ್ನುತ್ತಾರೆ ಇವರು.**

ನಿಜ, ಕೇವಲ ನೋಟು ರದ್ಧತಿಯಿಂದಾಗಿಯೇ ಈ ಪರಿಸ್ಥಿತಿ ನಿರ್ಮಾಣವಾಯಿತು ಎಂದು ಹೇಳಲು ಸಾಧ್ಯವಿಲ್ಲ. ಆದರೆ ರೈತರಿಗೆ ಫಲದಾಯಕ ಬೆಲೆ ಕೊಡುವ ಆಶ್ವಾಸನೆ ಕೊಟ್ಟು, ಈಗ ಅದು ತಮ್ಮ ಕೆಲಸವಲ್ಲ ಎನ್ನುವ ಸರಕಾರದ ಧೋರಣೆ, ಮತ್ತು ಅದೇ ಸರಕಾರದ ನೋಟುರದ್ಧತಿಯ 'ಪರಾಕ್ರಮ' ಇಂತಹ ಪರಿಸ್ಥಿತಿಯನ್ನು ಸೃಷ್ಟಿಸಿದೆ ಎಂಬುದರಲ್ಲಿ ಸಂದೇಹವಿಲ್ಲ.

ಇಷ್ಟು ಮಾತ್ರವಲ್ಲ, ನೀವು ಆಶ್ವಾಸನೆ ನೀಡಿದಂತೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಬೆಂಬಲ ಬೆಲೆ, ಕೊಡದ್ದರಿಂದ, ಅದರ ಮೇಲೆ ನೋಟು ರದ್ಧತಿ ಹೇರಿದ್ದರಿಂದ ಆಗಿರುವ ನಷ್ಟಗಳಿಂದಾಗಿ ಸಾಲ ತೀರಿಸಲಾಗುತ್ತಿಲ್ಲ, ಅದಕ್ಕೆ ಪರಿಹಾರ ಕೊಡಿ ಎಂದಾಗ ಅದನ್ನೂ ನಿರಾಕರಿಸಲಾಗಿದೆ.

**ಈಗ ಒಂದೆರಡು ರಾಜ್ಯ ಸರಕಾರಗಳು ಅದಕ್ಕೆ ಒಪ್ಪಲೇಬೇಕಾಗಿ ಬಂದಾಗ 'ಅಚ್ಛೇ ದಿನ್' ಸರಕಾರ ಅದಕ್ಕೆ ಹಣ ಕೊಡಲು ಸಾಧ್ಯವಿಲ್ಲ ಎಂದು ಹೇಳಿರುವುದು ರೈತರ ಆಕ್ರೋಶವನ್ನು ಪ್ರಧಾನಿ ಮತ್ತು ಕಣಕಾಸು ಮಂತ್ರಿಗಳ ಪ್ರತಿಕೃತಿಗಳನ್ನು ಸುಡುವ ಮಟ್ಟಕ್ಕೆ ಒಯ್ದಿದೆ.**

ನಿಜ, ಸಾಲಮನ್ನಾ ಕೃಷಿಯನ್ನು ಆವರಿಸಿರುವ ಬಿಕ್ಕಟ್ಟಿಗೆ ಪರಿಹಾರವಲ್ಲ. ಆದರೆ ಕಾರ್ಪೊರೇಟ್‌ಗಳ ಕೋಟ್ಯಂತರ ರೂ.ಸಾಲಗಳನ್ನು ದೊಡ್ಡ ಮನಸ್ಸಿನಿಂದ ಸದ್ದಿಲ್ಲದೆ ಮನ್ನಾ ಮಾಡುವ, ಹಳೆ ಸಾಲ ತೀರಿಸಲು ಹೊಸ ಸಾಲ ಕೊಡುವ ಸರಕಾರ ರೈತರ ಒಂದೆರಡು ಲಕ್ಷ ರೂ.ಗಳ ಸಾಲಮನ್ನಾ ಕೇಳಿದರೆ ಇಷ್ಟೊಂದು ಬೊಬ್ಬೆ ಏಕೆ?

ಮುಕೇಶ್ ಅಂಬಾನಿಯ ರಿಲಯಂಸ್ ಗ್ಯಾಸ್ ಟ್ರಾನ್ಸ್‌ಪೋರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿ. ಕಂಪನಿಯ ಸಾಲ ಬಾಕಿಯನ್ನು ತೀರಿಸಲು 4500 ಕೋಟಿ ರೂ.ಗಳ ಹೊಸ ಸಾಲ ನೀಡಲಾಯಿತು, ಅದಾನಿಯ ಸಾಲ ಬಾಕಿ ಮೊತ್ತ 72,000 ಕೋಟಿ ರೂ. ಎನ್ನಲಾಗಿದೆ.


ಈ ಸರಕಾರದ ಆಳ್ವಿಕೆಯಲ್ಲಿ ಹಿಂದಿರುಗಿ ಬಾರದ ಬ್ಯಾಂಕ್ ಸಾಲಗಳ ಮೊತ್ತ ಅಧಿಕೃತವಾಗಿ 2.3ಲಕ್ಷ ಕೋಟಿ ರೂ.ನಿಂದ 6.8ಲಕ್ಷ ಕೊಟಿ ರೂ. ಗೇರಿದೆ. ಇದರಲ್ಲಿ ಸುಮಾರು 18% ಮಾತ್ರ ಕೃಷಿ ವಲಯದ್ದು, ಇದರಲ್ಲಿ ಕೃಷಿ ಕಾರ್ಪೊರೇಟ್‌ಗಳ ಸಾಲಗಳೂ ಸೇರಿವೆ. ಅಂದರೆ ಕೋಟ್ಯಂತರ ರೈತರದ್ದು ಇನ್ನೂ ಕಡಿಮೆ. 70%ದಷ್ಟು ಸಾಲಬಾಕಿ ಕೆಲವೇ ಹಿಡಿಯಷ್ಟು ದೊಡ್ಡ ಕಾರ್ಪೊರೇಟ್‌ಗಳದ್ದು ಎನ್ನುವುದೀಗ ಎಲ್ಲರಿಗೂ ತಿಳಿದಿರುವ ಸಂಗತಿ. ಅಲ್ಲದೆ ಇದೇ ಶ್ರೀಮಂತರಿಗೆ ಈ ಸರಕಾರದ ಆಳ್ವಿಕೆಯಲ್ಲಿ 2014-15ರಲ್ಲಿ 52,542 ಕೋಟಿ ರೂ. ಮತ್ತು 2015-16ರಲ್ಲಿ 59, 547 ಕೋಟಿ ರೂ.ಗಳಷ್ಟು ಸಾಲಗಳನ್ನು ಸದ್ದಿಲ್ಲದೆ ಮನ್ನಾ ಮಾಡಲಾಗಿದೆ. ರೈತರ ಬದುಕಿಗೇ ಸಂಚಕಾರ ತರುತ್ತಿರುವ ಸಾಲದ ಪ್ರಶ್ನೆ ಬಂದಾಗ ಇಷ್ಟೊಂದು ಬೊಬ್ಬೆ.

**ಆದರೆ ಈ ಎಲ್ಲ ಬೊಬ್ಬೆ, ಆಕ್ರೋಶಗಳ ನಡುವೆ 'ಅಚ್ಛೇ ದಿನ್' ನಾಯಕರು ತನ್ನ ಮೌನವ್ರತವನ್ನು ತತ್ಪರತೆಯಿಂದ ಪಾಲಿಸುತ್ತಲೇ ಇದ್ದಾರೆ. ಈಗ ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಸೀತಾರಾಮ್ ಯೆಚುರಿಯವರು ಅವರ ಮುಂದೆ ರೈತರಿಗೆ ಕನಿಷ್ಟ ಬೆಂಬಲ ಬೆಲೆಯ ಹಕ್ಕು ಮತ್ತು ಅದರ ವಾರ್ಷಿಕ ಪರಾಮರ್ಶೆಯ ಖಾತ್ರಿ ಕೊಡುವ ಶಾಸನದ ಮೂರ್ತ ಪ್ರಸ್ತಾಪವನ್ನು ಇಟ್ಟ ಮೇಲೂ ಅವರ ಮೌನವ್ರತ ಮುಂದುವರೆಯಲು ಸಾಧ್ಯವೇ ಎಂದು ಕಾದು ನೋಡಬೇಕಾಗಿದೆ.**

ಈ ವರ್ಷದ ಯೋಗ ದಿನ(ಜೂನ್ 21)ದಂದು ಒಂದು ಗಂಟೆ-ಯ ಕಾಲ ದೇಶಾದ್ಯಂತ ರೈತರು ಮೋದಿಯವರೊಂದಿಗೆ ಯೋಗ ಮಾಡುತ್ತಾರೆ. ಆದರೆ ಈ ರೈತರು ಶವಾಸನ ಮಾತ್ರ ಮಾಡುತ್ತಾರೆ- ತಮ್ಮ ಮನೆಗಳಲ್ಲಿ ಅಥವ ಪಾರ್ಕ್‌ಗಳಲ್ಲಿ ಅಲ್ಲ, ಬದಲಿಗೆ ರೈಲು ನಿಲ್ದಾಣಗಳಲ್ಲಿ, ರಸ್ತೆಗಳಲ್ಲಿ, ಜಂಕ್ಷನ್‌ಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ... ಎಂದು ಮಧ್ಯಪ್ರದೇಶದಲ್ಲಿ ಇತ್ತೀಚಿನ ವರೆಗೆ ಸಂಘ ಪರಿವಾರದ ಭಾರತ್ ಕಿಸಾನ್ ಸಂಘದ ಮುಖಂಡರಾಗಿದ್ದ ಶಿವಕುಮಾರ್ ಶರ್ಮ ಹೇಳಿದ್ದಾರೆ

-ಸುದ್ದಿ

ಓಹ್! ಅವರಿಗೆ ರೈತರ ಸಾವಿನ ಬಗ್ಗೆ ಕೇಳಿ ಎಷ್ಟು ಕಳವಳ ಆಗಿದೆಯೆಂದರೆ ಅಂದಿನಿಂದ ಅವರು ಕೇವಲ ಹಲಾಸನ ಮಾಡುತ್ತಿದ್ದಾರೆ.




ವ್ಯಂಗ್ಯಚಿತ್ರ: ಮಂಜುಲ್

# ವೆಮುಲ, ಜೆಎನ್‌ಯು ಮತ್ತು ಕಾಶ್ಮೀರ ಕುರಿತ ಡಾಕ್ಯುಮೆಂಟರಿಗಳಿಗೆ ಅನುಮತಿ ನಿರಾಕರಣೆ

ಕೇರಳದಲ್ಲಿ ಜೂನ್ 16ರಿಂದ ಆರಂಭವಾಗಲಿರುವ ಅಂತರ್ರಾಷ್ಟ್ರೀಯ ಡಾಕ್ಯುಮೆಂಟರಿ ಮತ್ತು ಸಣ್ಣ ಫಿಲ್ಮ್‌ಗಳ ಉತ್ಸವದಲ್ಲಿ ಪ್ರದರ್ಶಿಸಬೇಕೆಂದಿದ್ದ ಮೂರು ಡಾಕ್ಯುಮೆಂಟರಿಗಳಿಗೆ ಕೇಂದ್ರ ಸರಕಾರ ಅನುಮತಿ ನಿರಾಕರಿಸಿದೆ. ಈ ಚಿತ್ರಗಳೆಂದರೆ ರೋಹಿತ್ ವೆಮುಲ ಕುರಿತಾದ 'ಅನ್‌ಬೇರಿಂಗ್ ಬಿಯಿಂಗ್ ಆಫ್ ಲೈಟ್‌ನೆಸ್', ಜೆಎನ್‌ಯು ಚಳುವಳಿ ಕುರಿತಾದ 'ಮಾರ್ಚ್ ಮಾರ್ಚ್ ಮಾರ್ಚ್' ಹಾಗೂ ಕಾಶ್ಮೀರದ ಯುವ ಕಲಾವಿದರನ್ನು ಕುರಿತಾದ 'ಇನ್ ದಿ ಶೇಡ್ ಆಫ್ ಫಾಲನ್ ಚಿನಾರ್'.

ಕೇರಳ ರಾಜ್ಯ ಚಲಚಿತ್ರ ಅಕಾಡೆಮಿ ಏರ್ಪಡಿಸಿರುವ ಈ ಉತ್ಸವದಲ್ಲಿ 262 ಸಣ್ಣ ಫಿಲ್ಮ್‌ಗಳು ಮತ್ತು ಡಾಕ್ಯುಮೆಂಟರಿಗಳನ್ನು ಪ್ರದರ್ಶಿಸಲಾಗುತ್ತದೆ. ಇವಕ್ಕೆ ಸೆನ್ಸಾರ್ ಮಂಡಳಿಯ ಸರ್ಟಿಫಿಕೇಟ್ ಬೇಕಾಗಿಲ್ಲ, ಆದರೆ ಸಂಬಂಧಪಟ್ಟ ಮಂತ್ರಾಲಯದಿಂದ ವಿನಾಯ್ತಿ ಪತ್ರ ಪಡೆಯಬೇಕು. ಕೇಂದ್ರ ಸುದ್ದಿ ಮತ್ತು ಪ್ರಸಾರ ಮಂತ್ರಾಲಯ ಈ ಮೂರು ಚಿತ್ರಗಳಿಗೆ ಇದನ್ನು ನೀಡಿಲ್ಲ. ಕಾರಣಗಳನ್ನೂ ನೀಡಿಲ್ಲ. ಏನೆಂದು ನೀಡುತ್ತಾರೆ ಈ ಉತ್ತಮ ಆಳ್ವಿಕೆಯ ಮುಖವಾಡದ ಮಂದಿ? ಆದರೆ ಅದು ಎಲ್ಲರಿಗೂ ಸ್ಪಷ್ಟ.

ಇದು ಸಾಂಸ್ಕೃತಿಕ ಫ್ಯಾಸಿಸಂ ಎಂದು ಕೇರಳದ ಸಾಂಸ್ಕೃತಿಕ ವ್ಯವಹಾರಗಳ ಮಂತ್ರಿ ಇದನ್ನು ಟೀಕಿಸಿದ್ದಾರೆ. ಎಲ್ಲ ಕಲಾವಿದರು ಇದನ್ನು ಪ್ರತಿಭಟಿಸಬೇಕು ಎಂದು ಅವರು ಹೇಳಿದ್ದಾರೆ.

ಕೇರಳ ರಾಜ್ಯ ಫಿಲ್ಮ್ ಅಕಾಡೆಮಿ ಅಧ್ಯಕ್ಷರು ಕೂಡ ಇದನ್ನು ಖಂಡಿಸುತ್ತ ಕೇಂದ್ರ ಸರಕಾರದ ವಿರುದ್ಧ ಅಪೀಲ್ ಹೋಗುವುದಾಗಿ ಹೇಳಿದ್ದಾರೆ. ದೇಶದಲ್ಲಿ ಸಾಂಸ್ಕೃತಿಕ ಎಮರ್ಜೆನ್ಸಿ ಇದೆ ಎಂದು ಅವರು ಹೇಳಿದ್ದಾರೆ.

ರೋಹಿತ್ ವೆಮುಲ ಕುರಿತಾದ ಚಿತ್ರ ಪ್ರಶಸ್ತಿ ವಿಜೇತ ನಿರ್ದೇಶಕ ಪಿಎನ್ ರಾಮಚಂದ್ರನ್ ಹೈದರಾಬಾದ್ ವಿವಿಯ ವಿದ್ಯಾರ್ಥಿಗಳಿಗೆ ನಡೆಸಿಕೊಟ್ಟ ಒಂದು ವರ್ಕ್‌ಶಾಪ್‌ನಲ್ಲಿ ತಯಾರಿಸಿದ್ದು. ಆಗಷ್ಟೇ ವಿಶ್ವವಿದ್ಯಾಲಯ ಕ್ಯಾಂಪಸ್ ವೆಮುಲಾ ಅತ್ಮಹತ್ಯೆಯ ಹಿನ್ನೆಲೆಯಲ್ಲಿ ತಳಮಳದಿಂದಿದ್ದ ಸಮಯವಾದ್ದರಿಂದ ವಿದ್ಯಾರ್ಥಿ ಪ್ರತಿಭಟನೆಗಳ ಸುತ್ತ ಚಿತ್ರಿಸಿದ ಡಾಕ್ಯುಮೆಂಟರಿ ಇದಾಗಿದೆ.




## ಗೃಹಮಂತ್ರಿಗಳಿಗೆ ಮಿಝೊರಾಂನಲ್ಲಿ ಬೀಫ್ ಉತ್ಸವದ ಸ್ವಾಗತ!

ಜೂನ್ 12ರಂದು ಕೇಂದ್ರ ಗೃಹ ಮಂತ್ರಿಗಳು ಮಿಝೋರಾಂನ ರಾಜಧಾನಿ ಐಝ್ವಾಲ್‌ಗೆ ಭೇಟಿ ನೀಡುವ ದಿನವೇ, ಅದೇ ಪಟ್ಟಣದಲ್ಲಿ ಒಂದು ಸ್ಥಳೀಯ ಸಂಘಟನೆ ಬೀಫ್ ಉತ್ಸವವನ್ನು ಏರ್ಪಡಿಸಿತು.

ಮಿಝೋಗಳಿಗೆ ಬೀಫ್ ಒಂದು ವಿಶೇಷ ಸಾಂಸ್ಕೃತಿಕ ಮಹತ್ವ ಹೊಂದಿದೆ ಎಂದು ಈ ಉತ್ಸವದಲ್ಲಿ ಭಾಗವಹಿಸಿದ ಒಬ್ಬ ಲೇಖಕರು ಹೇಳಿದರೆ, ಇನ್ನೊಬ್ಬರು ಇದು ಹಿಂದುಗಳ ಭಾವನೆಗಳನ್ನು ಕದಡಲು ಅಲ್ಲ, ನಮ್ಮ ಪ್ರತಿಭಟನೆಯನ್ನು ದಾಖಲಿಸಲು ಎಂದು ಹೇಳಿರುವುದಾಗಿ ವರದಿಯಾಗಿದೆ.

ನಿರ್ವಾಹವಿಲ್ಲದೆ ಗೃಹಮಂತ್ರಿಗಳು ಜನ ತಮಗೆ ಏನು ಬೇಕೋ ಅದನ್ನು ತಿನ್ನಬಹುದು, ಜನಗಳ ಆಹಾರದ ಆಯ್ಕೆಯ ಮೇಲೆ ಕೇಂದ್ರ ಸರಕಾರ ಯಾವುದೇ ನಿರ್ಬಂಧ ಹಾಕುವುದಿಲ್ಲ ಎಂದಿರುವುದಾಗಿ ವರದಿಯಾಗಿದೆ.

***

**ಆದರೆ ಇದನ್ನು ಸ್ವತಃ ಬಿಜೆಪಿಯವರೇ ನಂಬಿರುವಂತೆ ಕಾಣುತ್ತಿಲ್ಲ. ಏಕೆಂದರೆ ಮೇಘಾಲಯದಲ್ಲಿ ಅವರ ಇಬ್ಬರು ಮುಖಂಡರು, ಸೇರಿದಂತೆ ಸುಮಾರು 5000 ಬಿಜೆಪಿ ಸದಸ್ಯರು ಪಕ್ಷವನ್ನು ತ್ಯಜಿಸಿರುವುದಾಗಿ ವರದಿಯಾಗಿದೆ.**

***


**ಕೇಂದ್ರ ಸರಕಾರದ ಮಾಂಸಕ್ಕಾಗಿ ಜಾನುವಾರು ಮಾರಾಟ ನಿಷೇಧದ ಅಧಿಸೂಚನೆಗೆ ಮೇಘಾಲಯ ವಿಧಾನಸಭೆಯೂ ತನ್ನ ವಿರೋಧವನ್ನು ವ್ಯಕ್ತಪಡಿಸುವ, ಅದನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸುವ ಠರಾವನ್ನು ಅಂಗೀಕರಿಸಿದೆ. ಈ ಮೊದಲು ಕೇರಳ ವಿಧಾನಸಭೆ ಇಂತಹ ಠರಾವನ್ನು ಅಂಗೀಕರಿಸಿ ಕೇಂದ್ರ ಸರಕಾರಕ್ಕೆ ಕಳಿಸಿತ್ತು.**

***

ಗೃಹಮಂತ್ರಿಗಳು ಜನ ಏನು ಬೇಕಾದರೂ ತಿನ್ನಬಹುದು ಎನ್ನುತ್ತಿರುವಾಗಲೇ ಜನ ಏನನ್ನು ತಿನ್ನಬಾರದು ಎಂದು ವಿಧಿಸುವ ಅವರ ಕೃಪಾಪೋಷಿತ ಕಾವಲುಕೋರರು ಮತ್ತೊಂದು ದಾಳಿ ನಡೆಸಿದ ಸುದ್ದಿ ಬಂದಿದೆ. ಜೂನ್ 10 ರಂದು ರಾಜಸ್ತಾನದ ಬರ್ಮೇರ್ ಜಿಲ್ಲೆಯಲ್ಲಿ 50 ಹಸುಗಳನ್ನು ಆ ರಾಜ್ಯದ ಜೈಸಲ್ಮೇರ್‌ನಿಂದ ತಮಿಳುನಾಡಿಗೆ ಒಯ್ಯುತ್ತಿದ್ದ ಅಲ್ಲಿನ ಪಶುಪಾಲನೆ ಇಲಾಖೆಯ ವಾಹನದ ಮೇಲೆ 50 ಮದಿ 'ಗೋರಕ್ಷಕರು' ದಾಳಿ ಮಾಡಿ ಸಿಬ್ಬಂದಿಯನ್ನು ಥಳಿಸಿದರು, ವಾಹನಕ್ಕೆ ಬೆಂಕಿ ಹಚ್ಚಲು ಪ್ರಯತ್ನಿಸಿದರು ಎಂದು ವರದಿಯಾಗಿದೆ.

ಇಷ್ಟಕ್ಕೂ ಇದು ಕಸಾಯಿಖಾನೆಗೆ ಹಸುಗಳನ್ನು ಒಯ್ಯುತ್ತಿದ್ದ ವಾಹನವೂ ಅಲ್ಲ. ಹಸುಗಳ ಸ್ಥಳೀಯ ತಳಿಗಳನ್ನು ರಕ್ಷಿಸುವ 'ರಾಷ್ಟ್ರೀಯ ಗೋಕುಲ ಮಿಶನ್'ಗಾಗಿ ಸರ್ವ ಪರವಾನಿಗೆಗಳೊಂದಿಗೆ ಒಯ್ಯುತ್ತಿದ್ದ ವಾಹನ ಎಂದು ಮಾಧ್ಯಮಗಳು ವರದಿ ಮಾಡಿವೆ. ಆದರೆ ಖಾಸಗಿ 'ಪಡೆ'ಗಳನ್ನು ಪೋಷಿಸುವ ವಾತಾವರಣದಲ್ಲಿ ಅ ಪಡೆಗಳು ಹೇಳಿದ್ದೇ ಕಾನೂನು ತಾನೇ?

ಭಾರತದ ಗರ್ಭಿಣಿ ಮಹಿಳೆಯರಿಗೆ ಕೇಂದ್ರ ಸರಕಾರದ ಆಯುಷ್ ಮಂತ್ರಾಲಯದ ಸಲಹೆ




ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

# ಜಿಡಿಪಿ ಬೆಳವಣಿಗೆಯಲ್ಲಿ ನಿಧಾನಗತಿ ಮತ್ತು ಭಾರತದ ವಿಚಾರಶೂನ್ಯ ಸರಕಾರ




**ನೋಟುರದ್ಧತಿ ಆರ್ಥಿಕ ಪ್ರಗತಿಯ ಮೇಲೆ ಗಂಭೀರ ಪರಿಣಾಮ ಬೀರಿದೆ ಎಂಬುದರಲ್ಲಿ ಏನೂ ಸಂದೇಹ ಉಳಿದಿಲ್ಲ. ಆದರೆ ಜಿಡಿಪಿ ಬೆಳವಣಿಗೆಯಲ್ಲಿ ನಿಧಾನಗತಿಗೆ ಇದೊಂದೇ ಕಾರಣವಲ್ಲ. ನವ-ಉದಾರವಾದಿ ವ್ಯವಸ್ಥೆ ಮುಂದೆ ದಾರಿಗಾಣದಂತಹ ಮಟ್ಟವನ್ನು ತಲುಪಿರುವುದೇ ಮುಖ್ಯ ಕಾರಣ. ಆದರೆ ನವ-ಉದಾರವಾದದ ಈ ಬಿಕ್ಕಟ್ಟಿನ ಎದುರಲ್ಲಿ ಮೋದಿ ಸರಕಾರ ಈ ಬಿಕ್ಕಟ್ಟನ್ನು  ನವ-ಉದಾರವಾದ ಬಯಸುವುದಕ್ಕಿಂತ ಭಿನ್ನವಾದ ರೀತಿಯಲ್ಲಿ ಎದುರಿಸುವ ಬಗ್ಗೆ ಯೋಚಿಸುವ ಬದಲು ಇನ್ನೂ ಉಗ್ರ ನವ-ಉದಾರವಾದಿಯಾಗಿದೆ, ಏಕೆಂದರೆ ಅದು ವಿಚಾರಶೂನ್ಯವಾಗಿದೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೂ ಇಂತಹ ವಿಧೇಯ ಸೇವಕರೇ ಬೇಕಾಗಿದೆ. ಏಕೆಂದರೆ ಇಂತಹ ಸರಕಾರಗಳು ಸದಾ  'ಜಾಗತಿಕ ಹಣಕಾಸು ಸಮುದಾಯ'ವನ್ನೇ ಅವಲಂಬಿಸುವ ವೈಚಾರಿಕ ಪರಾವಲಂಬಿಗಳಾಗಿಯೇ ಉಳಿಯುತ್ತವೆ.**

— **ಪ್ರೊ. ಪ್ರಭಾತ್ ಪಟ್ನಾಯಕ್** —

ಕೇಂದ್ರ ಅಂಕಿಅಂಶ ಕಚೇರಿ (ಸಿಎಸ್‌ಒ) 2016-17ನೇ ಸಾಲಿನ ಅಕ್ಟೋಬರ್-ಡಿಸೆಂಬರ್ (ನೋಟು ರದ್ಧತಿ ನಡೆದ ಅವಧಿಯ) ತ್ರೈಮಾಸಿಕದ ಜಿಡಿಪಿ ಅಂದಾಜು ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದಾಗ ಜಿಡಿಪಿ ಇನ್ನೂ ಶೇ.7ರ ವೃದ್ಧಿ ದರದಲ್ಲಿತ್ತು. ಇದು ಕೇಂದ್ರ ಸರ್ಕಾರದ ಕಾರಿಡಾರ್‌ಗಳಲ್ಲಿ ಬಹಳಷ್ಟು ಹಬ್ಬದ ವಾತಾವರಣಕ್ಕೆ ಕಾರಣವಾಗಿತ್ತು. ಇದನ್ನು ನೋಟುರದ್ಧತಿ ಕುರಿತು ಬಂದಿದ್ದ ವಿಮರ್ಶೆಗಳು ಹೇಳಿದಂತೆ ಆರ್ಥಿಕತೆ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮ ಬೀರಿಲ್ಲ ಎಂದು ತರ್ಕಿಸಲು ಸರ್ಕಾರ ಬಳಸಿಕೊಂಡಿತು.

ಈ ಶೇ.7ರಷ್ಟು ಅಭಿವೃದ್ಧಿ ಸಹ 2015-16ನೇ ಸಾಲಿನ ಮೂರನೆ ತ್ರೈಮಾಸಿಕ ಜಿಡಿಪಿ ಅಂಕಿಅಂಶಗಳನ್ನು ಕೆಳದಿಕ್ಕಿನಲ್ಲಿ ಪರಿಷ್ಕರಿಸಿದ್ದರಿಂದ ಆಗಿತ್ತು ಎಂಬುದು ಆಗಲೇ ಸ್ಪಷ್ಟವಾಗಿತ್ತು.

ಈಗ ನಾಲ್ಕನೆ ತ್ರೈಮಾಸಿಕ (ಜನವರಿ-ಮಾರ್ಚ್) ಅಂಕಿಅಂಶಗಳನ್ನು ಕೆಲವು ದಿನಗಳ ಹಿಂದೆ ಸಿಎಸ್‌ಒ ಬಿಡುಗಡೆ ಮಾಡಿದ್ದು ಇದು ಗಣನೀಯವಾಗಿ ಕುಸಿದು ಶೇ.6.1ಕ್ಕೆ ತಲುಪಿದೆ. ಈ ಅಂಕಿಅಂಶಗಳು ಸಹ ಆರ್ಥಿಕತೆ ಕುಸಿತದ ಸಂಪೂರ್ಣ ಚಿತ್ರಣವನ್ನು ಹೊಂದಿಲ್ಲ. ಜಿಡಿಪಿ ಅಂಕಿಅಂಶಗಳನ್ನು ಮಾರುಕಟ್ಟೆ ದರಗಳ ಆಧಾರದಲ್ಲಿ ಸಂಗ್ರಹಿಸಲಾಗುತ್ತದೆ ಮತ್ತು ಇದು ಸರ್ಕಾರ ವಿಧಿಸುವ ನಿವ್ವಳ ಪರೋಕ್ಷ ತೆರಿಗೆಗಳನ್ನು ಒಳಗೊಂಡಿರುತ್ತದೆ ಮತ್ತು ಇದೂ ಸಹ ಉತ್ಪಾದನಾ ಟ್ರೆಂಡನ್ನು ನಿಖರವಾಗಿ ಪ್ರತಿಬಿಂಬಿಸುವುದಿಲ್ಲ. ಈ ಉತ್ಪಾದನಾ ಟ್ರೆಂಡನ್ನು ಸರಿಯಾಗಿ ತಿಳಿಯಬೇಕಾದರೆ ನಿವ್ವಳ ಮೌಲ್ಯ ಸಂಕಲನ (ಜಿವಿಎ)ದತ್ತ ನೋಟ ಹರಿಸಬೇಕು. ಇದರ ಪ್ರಕಾರ ಕಳೆದ ವರ್ಷದ ನಾಲ್ಕನೆ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ.5.6ರಷ್ಟು ಮಾತ್ರ ಪ್ರಗತಿ ದಾಖಲಿಸಿದೆ. ಮೂರನೆ ತ್ರೈಮಾಸಿಕದಲ್ಲಿ ದಾಖಲಿಸಿದ್ದ ಶೇ.6.7ಕ್ಕಿಂತಲೂ ಕಡಿಮೆ. 2015-16ನೇ ಸಾಲಿನಲ್ಲಿ ಮೂರು ಮತ್ತು ನಾಲ್ಕನೆ ತ್ರೈಮಾಸಿಕ ಅವಧಿಯ ಪ್ರಗತಿ ಕ್ರಮವಾಗಿ ಶೇ.7.3 ಮತ್ತು ಶೇ.8.7ರಷ್ಟಿತ್ತು. ಇದಕ್ಕೆ ಹೋಲಿಸಿದರೆ 2016-17ನೇ ಸಾಲಿನ ನಾಲ್ಕನೆ ತ್ರೈಮಾಸಿಕ ಪ್ರಗತಿ ಶೇ.3.1ರಷ್ಟು ಕುಸಿತ ದಾಖಲಿಸಿದೆ.

ಈ ಅಂಕಿಅಂಶಗಳು ಸಹ ನೋಟು ರದ್ಧತಿಯಿಂದ ಆರ್ಥಿಕ ಪ್ರಗತಿ ಮೇಲೆ ಆಗಿರುವ ನಿಖರ ದುಷ್ಪರಿಣಾಮವನ್ನು ಬಿಂಬಿಸುವುದಿಲ್ಲ. ವಾಸ್ತವವಾಗಿ ನೋಟುರದ್ಧತಿ ಅತಿ ಹೆಚ್ಚು ಭಾದಿಸಿದ್ದು ಸಣ್ಣ ಉತ್ಪಾದನೆ ವಲಯವನ್ನು, ಆದರೆ ಈ ಯಾವುದೇ ಅಂಕಿಅಂಶಗಳು ಈ ವಲಯವನ್ನು ಒಳಗೊಂಡಿಲ್ಲ.

ಎರಡು ವರ್ಷ ಸತತ ಬರಗಾಲದಿಂದ ದೇಶ ತತ್ತರಿಸಿದರೂ 2016-17ನೇ ಸಾಲಿನಲ್ಲಿ ಕೃಷಿ ಸ್ವಲ್ಪ ಚೇತರಿಕೆ ಕಂಡಿತು. ಈ ನೋಟು ರದ್ಧತಿ ಕೃಷಿ ವರ್ಷದ ಅಂತ್ಯ ಭಾಗದಲ್ಲಿ ಸಂಕಷ್ಟವನ್ನು ಉಂಟು ಮಾಡಿತ್ತಾದರೂ ಮಳೆ ಅನುಕೂಲಕರವಾಗಿದ್ದರಿಂದ ಕೃಷಿ ಉತ್ಪಾದನೆಯನ್ನು ಉತ್ತಮವಾಗಿರಿಸಿತ್ತು. ನಾಲ್ಕನೆ ತ್ರೈಮಾಸಿಕದಲ್ಲಿ ಕೃಷಿ ಬೆಳವಣಿಗೆ ಶೇ.5.2ರಷ್ಟು ಇತ್ತು. ಇದರ ಹಿಂದಿನ ವರ್ಷ ಇದೇ ಅವಧಿಯಲ್ಲಿ ಈ ಪ್ರಗತಿ ಶೇ.1.5ರಷ್ಟಿತ್ತು. ಒಂದು ವೇಳೆ ಕೃಷಿ ಕ್ಷೇತ್ರದ ಬೆಳವಣಿಗೆಯನ್ನು ಬಿಟ್ಟು ಕೃಷಿಯೇತರ ಕ್ಷೇತ್ರಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಈ ನೋಟು ರದ್ಧತಿ ಎಷ್ಟು ಭೀಕರವಾದ ಪರಿಣಾಮ ಬೀರಿದೆ ಎಂಬುದು ತಿಳಿಯುತ್ತದೆ. ಅಂದರೆ 2015-16ನೇ ಸಾಲಿನ ನಾಲ್ಕನೆ ತ್ರೈಮಾಸಿಕದಲ್ಲಿ ಶೇ.10.5ರಷ್ಟು ಅಭಿವೃದ್ಧಿ ದಾಖಲಿಸಿದ್ದ ಕೃಷಿಯೇತರ ವಲಯ 2016-17ನೇ ಸಾಲಿನಲ್ಲಿ ಶೇ.5.7ಕ್ಕೆ ಕುಸಿದಿದೆ. ಇದು ಭಾರಿ ಕುಸಿತವಾಗಿದೆ.

**ಹಣಕಾಸು ಮಂತ್ರಿಗಳು ಹೇಳುವುದೇನೋ ನಿಜ, ಆದರೆ ಈ ನಿಧಾನಗತಿ ಬಹಳ ಹಿಂದೆಯೇ ಆರಂಭಗೊಂಡಿದೆ. ನೋಟುರದ್ಧತಿ ಮತ್ತಷ್ಟು ಹಿನ್ನಡೆ ಉಂಟು ಮಾಡಿದೆಯಷ್ಟೆ. ಆದರೆ ಈ ಹಣಕಾಸು ಮಂತ್ರಿಗಳು ಒಪ್ಪುತ್ತಾರೋ, ಇಲ್ಲವೋ, ನವ-ಉದಾರವಾದಿ ಧೋರಣೆಗಳು ಮುಂದೆ ದಾರಿಗಾಣದ ಹಂತಕ್ಕೆ ತಲುಪಿರುವುದು ಇದಕ್ಕೆ ಪ್ರಮುಖ ಕಾರಣ. ಈ ಹಂತದಲ್ಲಿ ಆರ್ಥಿಕ ಸ್ಥಗಿತತೆ ಸಾಮಾನ್ಯ ಸಂಗತಿಯಾಗುತ್ತದೆ. ನಡು-ನಡುವೆ ಅಪರೂಪಕ್ಕೊಮ್ಮೆ ಆಸ್ತಿ ಸ್ವತ್ತುಗಳ ಕ್ಷಣಿಕ ಗುಳ್ಳೆಗಳು ಕಾಣಿಸಿಕೊಳ್ಳಬಹುದು. ಈ ನವ-ಉದಾರವಾದಿ ವ್ಯವಸ್ಥೆಯಿಂದ ಕಳಚಿಕೊಳ್ಳದಿದ್ದರೆ ಅಂದರೆ ಜಾಗತೀಕರಣದಿಂದ ಒಂದು ಮಟ್ಟದ ವರೆಗೆ ಕಳಚಿಕೊಳ್ಳದಿದ್ದರೆ ಭಾರತದಂತಹ ದೇಶಗಳು ಕೂಡ ಇಂತಹ ಸ್ಥಗಿತತೆಯಲ್ಲಿ ಸಿಲುಕಿಕೊಳ್ಳುತ್ತವೆ. ಆದರೆ ಮೋದಿ ಸರಕಾರಕ್ಕೆ ಇಂತಹ ಧೈರ್ಯ, ಸಾಮರ್ಥ್ಯ ಇದೆಯೇ?**

ಪ್ರತ್ಯೇಕ ವಲಯಗಳಿಗೆ ಸಂಬಂಧಿಸಿದಂತೆ ನಿವ್ವಳ ಮೌಲ್ಯ ಸಂಕಲನ ಅಂಕಿಅಂಶಗಳು ಭಾರಿ ಹೊಡೆತಕ್ಕೆ ಸಿಲುಕಿವೆ. ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ನಿರ್ಮಾಣ ವಲಯದಲಲಿ ಇದು ಶೇ.3.7ರಷ್ಟು ಕುಸಿದಿದೆ. ತಯಾರಿಕಾ ವಲಯ ಶೇ.5.3ರಷ್ಟು ಮಾತ್ರ ಬೆಳವಣಿಗೆ ದಾಖಲಿಸಿದೆ. ನಾಲ್ಕನೆ ತ್ರೈಮಾಸಿಕದ ಅಂಕಿಅಂಶಗಳು ಇದರ ಹಿಂದಿನ ಎಲ್ಲ ತ್ರೈಮಾಸಿಕ ಅಂಕಿಅಂಶಗಳಿಗಿಂತಲೂ ಗಣನೀಯವಾಗಿ ಕಡಿಮೆ ಇದೆ. ಹಾಗೆಯೇ ಕಳೆದ ಹಣಕಾಸು ಸಾಲಿನ ನಾಲ್ಕನೆ ತ್ರೈಮಾಸಿಕ ಅಂಕಿಅಂಶಗಳಿಗಿಂತಲೂ ಸಹ.


ವಾರ್ಷಿಕ ಅಂಕಿಅಂಶಗಳನ್ನು ತೆಗೆದುಕೊಂಡರೆ 2016-17ನೇ ಸಾಲಿನಲ್ಲಿ ಜಿವಿಎ ಶೇ.6.6ರಷ್ಟು ಏರಿಕೆ ಕಂಡಿದೆ. ಕಳೆದ ಸಾಲಿನಲ್ಲಿದ್ದ ಶೇ.7.9ಕ್ಕೆ ಹೋಲಿಸಿದರೆ ಇದು ತುಂಬಾ ಕಡಿಮೆ ಇದೆ. ಇಲ್ಲಿ ಪರಿಗಣಿಸಬೇಕಾದ ಪ್ರಮುಖ ಅಂಶವೆಂದರೆ 2015-16ನೇ ಸಾಲಿನಲ್ಲಿ ಶೇ.0.7ರಷ್ಟು ಮಾತ್ರ ಪ್ರಗತಿ ಕಂಡಿದ್ದ ಕೃಷಿ ವಲಯ 2016-17ನೇ ಸಾಲಿನಲ್ಲಿ ಶೇ.4.9ರಷ್ಟು ಪ್ರಗತಿ ದಾಖಲಿಸಿದೆ. ಇಲ್ಲೂ ಸಹ ಕೃಷಿ ವಲಯವನ್ನು ಹೊರತುಪಡಿಸಿದರೆ 2015-16ರಲ್ಲಿ ಶೇ.9.7ರಷ್ಟು ಪ್ರಗತಿ ಕಂಡಿದ್ದ ಕೃಷಿಯೇತರ ವಲಯ 2016-17ರಲ್ಲಿ ಶೇ.7ಕ್ಕೆ ಕುಸಿದಿದೆ. ಇದು ಭಾರಿ ಕುಸಿತವೇ ಸರಿ.

ಹೀಗಾಗಿ ನೋಟುರದ್ಧತಿ ಆರ್ಥಿಕ ಪ್ರಗತಿ ಮೇಲೆ ಗಂಭೀರ ಪರಿಣಾಮ ಬೀರಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಇದು ನಿಶ್ಚಿತವಾಗಿ ವಿಮರ್ಶಕರು ನಿರೀಕ್ಷಿಸಿದಂತೆಯೇ ಆಗಿದೆ. ಇದೇ ಸಂದರ್ಭದಲ್ಲಿ 2016-17ರಲ್ಲಿ ದೇಶದ ಆರ್ಥಿಕತೆ ಕುಸಿತವನ್ನು ನೋಟು ರದ್ಧತಿಯ ಹಿನ್ನೆಲೆಯಲ್ಲಷ್ಟೇ ನೋಡುವುದು ಗಂಭೀರ ಲೋಪವಾಗಲಿದೆ. ಇದರ ಮೇಲೆ ಹೊಸ ಆರ್ಥಿಕ ನೀತಿಗಳ ಪರಿಣಾಮಗಳು ಗಂಭೀರವಾಗಿದೆ ಎಂಬುದನ್ನು ಕಾಣಬೇಕು. ಈ ಆರ್ಥಿಕ ಕುಸಿತ ಬಹಳ ಹಿಂದೆಯೇ ಆರಂಭಗೊಂಡಿದೆ. ನೋಟುರದ್ಧತಿ ಇದಕ್ಕೆ ಮತ್ತಷ್ಟು ಹಿನ್ನಡೆ ಉಂಟು ಮಾಡಿದೆ. ಮರು ನಗದೀಕರಣ ಪ್ರಕ್ರಿಯೆ ಪೂರ್ಣಗೊಂಡ ನಂತರವೂ ಈ ಕುಸಿತ ನಿಂತಿಲ್ಲ. ಈ ಬೆಳವಣಿಗೆ ದರ ಈ ಹಿಂದಿನ ಮಟ್ಟಕ್ಕೆ ಇನ್ನೂ ತಲುಪಿಲ್ಲ.

ನವ-ಉದಾರವಾದಿ ನೀತಿಗಳು ಮುಂದೆ ದಾರಿಗಾಣದ ಹಂತಕ್ಕೆ ತಲುಪಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಈ ಹಂತದಲ್ಲಿ ಆರ್ಥಿಕ ಸ್ಥಗಿತತೆ ಸಾಮಾನ್ಯ ಸಂಗತಿಯಾಗುತ್ತದೆ. ನಡು-ನಡುವೆ ಅಪರೂಪಕ್ಕೊಮ್ಮೆ ಆಸ್ತಿ ಸ್ವತ್ತುಗಳ ಕ್ಷಣಿಕ ಗುಳ್ಳೆಗಳು ಕಾಣಿಸಿಕೊಳ್ಳಬಹುದು. ಭಾರತದಂತಹ ದೇಶಗಳು ಕೂಡ ಈ ನವ-ಉದಾರವಾದಿ ವ್ಯವಸ್ಥೆಯಿಂದ ಕಳಚಿಕೊಳ್ಳದಿದ್ದರೆ ಅಂದರೆ ಜಾಗತೀಕರಣದಿಂದ ಒಂದು ಮಟ್ಟದ ವರೆಗೆ  ಕಳಚಿಕೊಳ್ಳದಿದ್ದರೆ ಇಂತಹ ಸ್ಥಗಿತತೆಯಲ್ಲಿ ಸಿಲುಕಿಕೊಳ್ಳುತ್ತವೆ.

2016-17ನೇ ಸಾಲಿನ ಪರಿಷ್ಕೃತ ತ್ರೈಮಾಸಿಕ ಜಿಡಿಪಿ ದರಗಳು ಕ್ರಮವಾಗಿ ಶೇ.7.9, ಶೇ.7.5, ಶೇ.7.0 ಮತ್ತು ಶೇ.6.1ರಷ್ಟಿದೆ. ಇದನ್ನು ಗಮನವಿಟ್ಟು ನೋಡಿದಾಗ ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ ಕುಸಿಯುತ್ತಾ ಸಾಗಿರುವುದು ಕಾಣುತ್ತದೆ.

ಕೃಷಿಯೇತರ ಕ್ಷೇತ್ರಗಳಲ್ಲಿ ಇಲ್ಲಿನ ಉತ್ಪನ್ನಗಳಿಗೆ ಸಿಗುವ ಬೇಡಿಕೆ ಆಧಾರದ ಮೇಲೆ ಜಿಡಿಪಿ ಪ್ರಗತಿ ಅವಲಂಬಿಸಿರುತ್ತದೆ. ಇಲ್ಲಿ ಬೇಡಿಕೆಯೂ ಸಹ ಈ ಕ್ಷೇತ್ರಗಳಲ್ಲಿ ಆಗುವ ಉತ್ಪಾದನೆ ಪ್ರಮಾಣದ ಮೇಲೆ ಅವಲಂಬಿಸಿದ್ದು ಉತ್ಪಾದನೆಯಲ್ಲಿ ತೊಡಗಿಸಿಕೊಂಡವರ ಕೈಗೆ ಹಣವನ್ನು ತಂದುಕೊಡಲಿದೆ. ಇದು ಈ ಕ್ಷೇತ್ರದಲ್ಲಿ ಉತ್ಪಾದನೆಯಾಗುವ ಉತ್ಪನ್ನಗಳಿಗೆ ತನ್ನಿಂತಾನೆ ಅಥವಾ ಸ್ವಾಯತ್ತ ಬೇಡಿಕೆ ಸೃಷ್ಟಿಸಲಿದೆ. ಇದು ಕೃಷಿಯೇತರ ಕ್ಷೇತ್ರಗಳ ಉತ್ಪಾದನೆಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ.




ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

**ಮೋದಿ ಸರಕಾರಕ್ಕೆ ಈ ಬಿಕ್ಕಟ್ಟನ್ನು ನವ-ಉದಾರವಾದ ಬಯಸುವುದಕ್ಕಿಂತ ಭಿನ್ನವಾದ ರೀತಿಯಲ್ಲಿ ಎದುರಿಸುವ ವೈಚಾರಿಕ ಸಾಮರ್ಥ್ಯವಿಲ್ಲ. ನವ-ಉದಾರವಾದಕ್ಕೆ ವಿಚಾರಶೂನ್ಯ ಬದ್ಧತೆ, ಅದರ ಜತೆಗೆ ಆಗಾಗ ನೋಟು ರದ್ಧತಿಯಂತಹ ವಿಚಾರಹೀನ 'ಗಂಡಸ್ತನ'ದ ಕೃತ್ಯಗಳು-ಇವೇ ಈ ಸರಕಾರದ ಮುಖ್ಯ ಗುಣಲಕ್ಷಣವಾಗಿ ಬಿಟ್ಟಿದೆ. ಏಕೆಂದರೆ ಹೊಗಳುಭಟ್ಟಂಗಿಗಳ ಚಪ್ಪಾಳೆಯನ್ನು ಮಾತ್ರ ಕೇಳುವ 'ನಾಯಕ'ನಿಗೆ ಇಂತಹ ವೈಚಾರಿಕತೆಯ ಪರಿಕರಗಳ ಕೊರತೆ ಇದೆ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಮೂರನೇ ಜಗತ್ತಿನ ದೇಶಗಳಲ್ಲಿ ಇಂತಹ ಸರಕಾರಗಳೇ ಬೇಕಾಗಿದೆ.**

ಈ ಉತ್ಪನ್ನಗಳಿಗೆ ಒಂದಷ್ಟು ಬೇಡಿಕೆ ಕೃಷಿ ವಲಯದಿಂದಲೂ ಬರಲಿದೆ. ಆದರೆ ಕೃಷಿ ಮೇಲೆ ಅವಲಂಬಿತರ ತಲಾ ಆದಾಯ ಏರಿಕೆ ಕಾಣದಿರುವುದರಿಂದ ಬೇಡಿಕೆ ಸಂಪೂರ್ಣ ಸ್ಥಗಿತಗೊಂಡಿದೆ. ಇತರೆ ಎರಡು ಸ್ವಾಯತ್ತ ಅಂಶಗಳೆಂದರೆ ನಿವ್ವಳ ರಫ್ತು ಮತ್ತು ಸರ್ಕಾರದ ಹೂಡಿಕೆ. ಜಾಗತಿಕ ಆರ್ಥಿಕತೆಯಲ್ಲಿನ ಕುಸಿತ ದೇಶದ ರಫ್ತಿನ ಮೇಲೆ ಗಂಭೀರ ಪರಿಣಾಮ ಬೀರಿದೆ. ಇದರ ಜೊತೆಗೆ ಡೊನಾಲ್ಡ್ ಟ್ರಂಪ್ ಅವರ ಸ್ವಯಂ ರಕ್ಷಣೆ ನೀತಿಗಳು ನಿರುದ್ಯೋಗ ಮತ್ತು ಆರ್ಥಿಕ ಹಿಂಜರಿತ ಹೊರೆ ಭಾರತದಂತಹ ದೇಶಗಳ ಮೇಲೆ ಬೀರುತ್ತಿದೆ.

ಮತ್ತೊಂದು ಕಡೆ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ದರಗಳಲ್ಲಿ ಕಂಡ ಕುಸಿತ ದೇಶದಲ್ಲಿ ಬೇಡಿಕೆಯನ್ನು ಹೆಚ್ಚಿಸಬೇಕಿತ್ತು. ಆದರೆ ಕೇಂದ್ರ ಸರ್ಕಾರ ಈ ದರ ಕುಸಿತದ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸದೆ ಅಬಕಾರಿ ಸುಂಕಗಳನ್ನು ಏರಿಸುವ ಮೂಲಕ ಬೊಕ್ಕಸಕ್ಕೆ ಹಣ ಸಂಗ್ರಹಿಸಿತು. ಇದು ನೇರವಾಗಿ ರಫ್ತಿನ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿತು.

ಇಂತಹ ಪರಿಸ್ಥಿತಿಯಲ್ಲಿ ಆರ್ಥಿಕ ಪ್ರಗತಿಯ ಕುಸಿತವನ್ನು ತಡೆಯಲು ಆಂತರಿಕ ಬೇಡಿಕೆಯನ್ನು ಹೆಚ್ಚಿಸಲು ಸರ್ಕಾರದಿಂದ ಹೆಚ್ಚಿನ ಹೂಡಿಕೆ ನಿರೀಕ್ಷಿಸುವುದು ಸಹಜ.

ಆದರೆ ಮೋದಿ ಅಧಿಕಾರದ ಅವಧಿಯಲ್ಲಿ ಒಟ್ಟಾರೆ ಸರ್ಕಾರಿ ಹೂಡಿಕೆ ಅಲ್ಪವಾಗಿದ್ದು ನಾಮಿನಲ್ (ಹಣದುಬ್ಬರದೊಂದಿಗೆ ಹೊಂದಿಕೆ ಮಾಡದೆ ಲೆಕ್ಕ ಹಾಕುವ ಪ್ರಗತಿ) ಜಿಡಿಪಿ ಪ್ರಗತಿಯ ಪ್ರಮಾಣಕ್ಕಿಂತಲೂ ಕಡಿಮೆ. ಇದರರ್ಥ ಕೇಂದ್ರ ಸರ್ಕಾರ ಆರ್ಥಿಕತೆಗೆ ಉತ್ತೇಜನ ನೀಡುವ ಬದಲು ಮತ್ತಷ್ಟು ಕುಸಿತಕ್ಕೆ ಬೇಕಾದಂತ ಪಾತ್ರವನ್ನು ನಿರ್ವಹಿಸುತ್ತಿದೆ. 2014-15ರಲ್ಲಿ ಕೇಂದ್ರ ಸರ್ಕಾರದ ಒಟ್ಟಾರೆ ವೆಚ್ಚ ಬಜೆಟ್‌ನ ಶೇ.6.7ರಷ್ಟಿತ್ತು, 2015-16ರಲ್ಲಿ ಶೇ.7.6 ಮತ್ತು 2016-17ರಲ್ಲಿ (ವೇತನ ಆಯೋಗದ ಶಿಫಾರಸು ಜಾರಿಗೊಳಿಸಿದ್ದರಿಂದ) ಶೇ.12.5ರಷ್ಟಿದೆ. 2017-18ನೇ ಸಾಲಿನಲ್ಲಿ ಶೇ.6ರಷ್ಟು ಮಾತ್ರ ಏರಿಕೆ ಮಾಡಲಾಗಿದೆ. ಈ ಮಧ್ಯೆ ನಾಮಿನಲ್ ಜಿಡಿಪಿ ಪ್ರಗತಿ ಸರಾಸರಿ ಶೇ.12ರಷ್ಟಿದೆ. ಅಂದರೆ ಸರ್ಕಾರದ ವೆಚ್ಚ ನಾಮಿನಲ್ ಜಿಡಿಪಿ ಪ್ರಗತಿಯೊಂದಿಗೂ ಸರಿಹೊಂದುತ್ತಿಲ್ಲ.

ಒಟ್ಟಿನಲ್ಲಿ, ನವ-ಉದಾರವಾದದ ಈ  ಬಿಕ್ಕಟ್ಟಿನ ಎದುರಲ್ಲಿ ಮೋದಿ ಸರಕಾರ ಈ ಬಿಕ್ಕಟ್ಟನ್ನು  ನವ-ಉದಾರವಾದ ಬಯಸುವುದಕ್ಕಿಂತ ಭಿನ್ನವಾದ ರೀತಿಯಲ್ಲಿ ಎದುರಿಸುವ ಬದಲು ಇನ್ನೂ ಉಗ್ರ ನವ-ಉದಾರವಾದಿಯಾಗಿದೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ವಿಧೇಯ ಸೇವಕನಾಗಿದೆ. ನವ-ಉದಾರವಾದಕ್ಕೆ ವಿಚಾರಶೂನ್ಯ ಬದ್ಧತೆ, ಅದರ ಜತೆಗೆ ಆಗಾಗ ನೋಟು ರದ್ಧತಿಯಂತಹ ವಿಚಾರಹೀನ 'ಗಂಡಸ್ತನ'ದ ಕೃತ್ಯಗಳು (ಇವು ಯಾವ ರೀತಿಯಲ್ಲೂ ನವ-ಉದಾರವಾದಕ್ಕೆ ಸವಾಲು ಹಾಕುವಂತದ್ದಲ್ಲ) ಈ ಸರಕಾರದ ಮುಖ್ಯ ಗುಣಲಕ್ಷಣವಾಗಿ ಬಿಟ್ಟಿದೆ. ಇದು ಬಿಂಬಿಸುವುದು ಇದೊಂದು ವಿಚಾರಶೂನ್ಯ ಸರಕಾರ, ಅಷ್ಟೇ ಏಕೆ, ವೈಚಾರಿಕತೆಯ ಸಾಮರ್ಥ್ಯವೂ ಇಲ್ಲದ ಎಂಬ ಸಂಗತಿಯಿಂದ. ಏಕೆಂದರೆ ಹೊಗಳುಭಟ್ಟಂಗಿಗಳ ಚಪ್ಪಾಳೆಯನ್ನು ಮಾತ್ರ ಕೇಳುವ 'ನಾಯಕ'ನಿಗೆ ಇಂತಹ ವೈಚಾರಿಕತೆಯ ಪರಿಕರಗಳ ಕೊರತೆ ಇದೆ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಮೂರನೇ ಜಗತ್ತಿನ ದೇಶಗಳಲ್ಲಿ ಇಂತಹ ಸರಕಾರಗಳೇ ಬೇಕಾಗಿದೆ.ಏಕೆಂದರೆ ಇವು ಸದಾ  'ಜಾಗತಿಕ ಹಣಕಾಸು ಸಮುದಾಯ'ವನ್ನೇ ಅವಲಂಬಿಸುವ ವೈಚಾರಿಕ ಪರಾವಲಂಬಿಗಳಾಗಿಯೇ ಉಳಿಯುತ್ತವೆ.

**ಅನು: ಮುರಳಿ**

# ಕನಿಷ್ಟ ಕೂಲಿ, ಆಹಾರ ಭದ್ರತೆಗಾಗಿ ಪಶ್ಚಿಮ ಬಂಗಾಲದಲ್ಲಿ ಚಹಾ ತೋಟ ಕಾರ್ಮಿಕರ ಮುಷ್ಕರ



ಪಶ್ಚಿಮ ಬಂಗಾಲದ 5 ಲಕ್ಷ ಚಹಾತೋಟ ಕಾರ್ಮಿಕರು ತಮ್ಮ ಜಂಟಿ ವೇದಿಕೆಯ ಕರೆ-ಯ ಮೇರೆಗೆ ಪಶ್ಚಿಮ ಬಂಗಾಲದಲ್ಲಿ ಜೂನ್ 12 ಮತ್ತು 13 ರಂದು ರಾಜ್ಯದ ಉತ್ತರ ಭಾಗದಲ್ಲಿ ಎರಡು ದಿನಗಳ ಮುಷ್ಕರ ನಡೆಸಿದ್ದಾರೆ. ಕನಿಷ್ಠ ಕೂಲಿಯ ಪರಿಷ್ಕರಣೆ ನಡೆಯಬೇಕು, ಆಹಾರ ಹಕ್ಕು ಕಾನೂನಿನ ಅಡಿಯಲ್ಲಿನ ಸೌಲಭ್ಯಗಳು ಚಹಾ ತೋಟ ಕಾರ್ಮಿಕರಿಗೂ ಅನ್ವಯವಾಗಬೇಕು, ಮತ್ತಿತರ ಬೇಡಿಕೆಗಳ ಮೇಲೆ 23 ಸಂಘಟನೆಗಳ ಜಂಟಿ ವೇದಿಕೆ ಈ 48 ಗಂಟೆಗಳ ಮುಷ್ಕರಕ್ಕೆ ಕರೆ ನೀಡಿತು.

ಟಿಎಂಸಿ ಸರಕಾರದ ಬೆದರಿಕೆಗಳಿಗೂ ಜಗ್ಗದೆ ಈ ಮುಷ್ಕರದಲ್ಲಿ 90% ಕಾರ್ಮಿಕರು ಭಾಗವಹಿಸಿದ್ದಾರೆ.

## ವಿಶಾಖಪಟ್ಟಣಂನಲ್ಲಿ ದೊಡ್ಡ ಭೂಕಬಳಿಕೆ: ಸಿಬಿಐ ತನಿಖೆಗೆ ಒತ್ತಾಯ

ಆಂಧ್ರಪ್ರದೇಶದ ವಿಶಾಖಪಟ್ಟಣಂ ನಗರದಲ್ಲಿ ದೊಡ್ಡ ಪ್ರಮಾಣದಲ್ಲಿ ಭೂಕಬಳಿಕೆ ನಡೆಯುತ್ತಿದ್ದು, ಇದು ಸುಮಾರು 25,000 ಕೋಟಿ ರೂ.ಗಳ ಹಗರಣವಾಗುತ್ತಿದೆ. ಈ ಬಗ್ಗೆ ಒಂದು ಸ್ವತಂತ್ರ ತನಿಖೆಯನ್ನು ಸಿಬಿಐನಿಂದ ನಡೆಸಬೇಕು ಎಂದು ಸಿಪಿಐ(ಎಂ) ಆಂಧ್ರಪ್ರದೇಶ ಕಾರ್ಯದರ್ಶಿ ಮಂಡಳಿ ಸದಸ್ಯ ನರಸಿಂಗ ರಾವ್ ಆಗ್ರಹಿಸಿದ್ದಾರೆ. ಸರಕಾರ ಈ ಬಗ್ಗೆ ಒಂದು ಶ್ವೇತಪತ್ರವನ್ನು ಪ್ರಕಟಿಸಬೇಕು, ತಪ್ಪಿತಸ್ಥರ ಪಟ್ಟಿಯನ್ನೂ ಪ್ರಕಟಿಸಬೇಕು ಎಂದು ಅವರು ಹೇಳಿದ್ದಾರೆ.

ಬಹಳಷ್ಟು ಪ್ರಭಾವೀ ವ್ಯಕ್ತಿಗಳು, ಮಂತ್ರಿಗಳು, ಎಂಪಿಗಳು, ಅಧಿಕಾರಿಗಳು ಈ ಭೂಕಬಳಿಕೆಯಲ್ಲಿ ಇದ್ದಾರೆ, ಇವೆಲ್ಲ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಅವರ ಮಗ ಹಾಗೂ ಐಟಿ ಮಂತ್ರಿ ನರ ಲೋಕೇಶ್ ಕೃಪಾಪೋಷಣೆಯಲ್ಲಿ ನಡೆಯುತ್ತಿದೆ. ರೆವಿನ್ಯೂ ಅಧಿಕಾರಿಗಳ ಶಾಮೀಲಿನಿಂದ ಬೆಲೆಬಾಳುವ ಸರಕಾರೀ ಭೂಮಿಯನ್ನು ಖಾಸಗಿ ಎಂದು ಬದಲಿಸಿ ಈ ಹಗರಣ ವ್ಯಾಪಕ ಪ್ರಮಾಣದಲ್ಲಿ ನಡೆಯುತ್ತಿದೆ. ಕೆಲಸದಿಂದ ಸಸ್ಪೆಂಡ್ ಆಗಿ ಹಲವಾರು ಕ್ರಿಮಿನಲ್ ಕೇಸುಗಳನ್ನು ಎದುರಿಸುತ್ತಿರುವ ಶಂಕರ ರಾವ್ ಎಂಬ ಅಧಿಕಾರಿಯನ್ನು ಮತ್ತೆ ಕೆಲಸಕ್ಕೆ ತಗೊಂಡಿರುವುದು ಇದಕ್ಕೊಂದು ಸಾಕ್ಷಿ ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಆಪಾದಿಸಿದ್ದಾರೆ.

ಸರಕಾರದ 'ಲ್ಯಾಂಡ್ ಪೂಲಿಂಗ್' ಎಂಬುದು ಸರಕಾರದ ಬೆಲೆಬಾಳುವ ಜಮೀನುಗಳನ್ನು ಕಬಳಿಸುವ ಆಳುವ ಪಕ್ಷದ ಪಿತೂರಿ ಎಂದು ಹೇಳಲಾಗುತ್ತಿದೆ.

## 'ಭೂತೋಚ್ಚಾಟಕ'ರಿಗೆ ಮಂತ್ರಿಗಳಿಂದ ಸನ್ಮಾನ: ಗುಜರಾತ್ ದಲಿತರ ಪ್ರತಿಭಟನೆ

ಜೂನ್ 10 ರಂದು ಗುಜರಾತಿನ ಬೊಟಡ್ ಜಿಲ್ಲೆಯ ಗಢಾಡದಲ್ಲಿ ದೇವಸ್ಥಾನದಲ್ಲಿ ಸ್ಥಳೀಯ ಬಿಜೆಪಿ ಘಟಕ ನಡೆಸಿದ ಒಂದು ಸಮಾರಂಭದಲ್ಲಿ 100ಕ್ಕೂ ಹೆಚ್ಚು 'ಭುವ'ಗಳನ್ನು ರಾಜ್ಯದ ಇಬ್ಬರು ಮಂತ್ರಿಗಳು ಸನ್ಮಾನಿಸಿದ ಘಟನೆ ರಾಜ್ಯದಲ್ಲಿ ಭಾರೀ ವಿವಾದವನ್ನು ಎಬ್ಬಿಸಿದೆ.

ಭುವ'ಗಳು ಎಂದರೆ ಮಾಟ ಮಂತ್ರ ಮಾಡುವವರು, ದೆವ್ವ ಬಿಡಿಸುತ್ತೇವೆ ಎಂದು ಹೇಳಿಕೊಳ್ಳುವವರು. ಇವರನ್ನು ಸನ್ಮಾನಿಸಿದವರು ರಾಜ್ಯದ ಶಿಕ್ಷಣ ಮಂತ್ರಿ ಭೂಪೇಂದ್ರಸಿಂಹ ಚುಡಾಸಾಮ ಮತ್ತು ಸಾಮಾಜಿಕ ಸಬಲೀಕರಣ ಮಂತ್ರಿ ಆತ್ಮಾರಾಂ ಪರಮಾರ್.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಈ 'ಭುವ'ಗಳ ಮೂಢನಂಬಿಕೆ ವ್ಯಾಪಕವಾಗಿದೆ. ಇದು ಹಿಂದುಳಿದ ಜಾತಿಗಳು ಮತ್ತು ದಲಿತರಲ್ಲೇ ಬಹಳ ಹೆಚ್ಚಿದೆ. ಇದಕ್ಕೆ ಕಾರಣ ಜಾತಿ ದಬ್ಬಾಳಿಕೆಯೇ, ಜನರ ಮೂಢನಂಬಿಕೆಗಳ ದುರುಪಯೋಗ ಪಡೆಯಲು ಪಟ್ಟಭದ್ರರು ಈ 'ಭುವ'ಗಳನ್ನು ಬಳಸಿಕೊಳ್ಳುವುದು ಸಾಮಾನ್ಯವಾಗಿದೆ ಎಂದೇ ಇದರ ವಿರುದ್ಧ ಪ್ರಚಾರ ನಡೆಯುತ್ತಿರುವಾಗ ರಾಜ್ಯ ಮಂತ್ರಿಗಳಿಂದಲೇ ಈ ರೀತಿಯ ಪ್ರೋತ್ಸಾಹವನ್ನು ವ್ಯಾಪಕವಾಗಿ ಖಂಡಿಸಲಾಗಿದೆ.

ಈ ಸಮಾರಂಭ ನಡೆದ ಮರುದಿನವೇ ಸುಮಾರು 400 ದಲಿತರು ಸೇರಿದ್ದ ಸಭೆ ಇದನ್ನು ಬಲವಾಗಿ ಪ್ರತಿಭಟಿಸಿದೆ. ಸಾಮಾಜಿಕ ಸಬಲೀಕರಣ ಮಂತ್ರಿ ಆತ್ಮಾನಂದ ಪರಮಾರ್ ಸ್ವತಃ ದಲಿತರು. ಅವರ ಪ್ರತಿಕೃತಿಗೆ ಬೆಂಕಿ ಹಚ್ಚಿ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ದಲಿತರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಇಲ್ಲಿ ದಲಿತರ ಸಾಮಾಜಿಕ ಸಬಲೀಕರಣಕ್ಕೆ ಬೇಕಾಗಿರುವುದು ಸರಿಯಾದ ಶಿಕ್ಷಣ ಮತ್ತು ಆರೋಗ್ಯ ಸೇವೆ, ಈ ಬುವ'ಗಳಲ್ಲ ಎಂದು ಈ ಪ್ರತಿಭಟನೆಯಲ್ಲಿ ಭಾಗವಹಿಸದ ದಲಿತ ಕಾರ್ಯಕರ್ತ ನಾತು ಪರಮಾರ್. ಇದು ಯುವ ದಲಿತರ ಅಭಿಪ್ರಾಯ.

ಆದರೆ ಸಾಮಾಜಿಕ ಸಬಲೀಕರಣದ ಮಂತ್ರಿಗಳ ಅಂಬೋಣವೇ ಬೇರೆ-ಈ ಮಂದಿಗೆ ಹಿಂದೂ ಸಂಸ್ಕೃತಿಯ ಬಗ್ಗೆ ತಿಳಿದಿಲ್ಲ. ಈ ಭುವಗಳು ದೈವಿಕ ಶಕ್ತಿಯಿರುವ ಪವಿತ್ರ ಮಂದಿ, ಅವರಲ್ಲಿ ಕೆಲವರು ಕೆಟ್ಟವರಿರಬಹುದಷ್ಟೇ! ಬಹುಶಃ 'ಮಾದರಿ' ಬಿಜೆಪಿ ಸರಕಾರದ ಮಂತ್ರಿಗಳಿಂದ ಇಂತಹ ಸಮರ್ಥನೆ ಸಹಜವೇ.

## ರೈತರ ದುಸ್ಥಿತಿಯ ಅಪಹಾಸ್ಯ ಮಾಡುವುದನ್ನು ತಕ್ಷಣವೇ ನಿಲ್ಲಿಸಿ -ಎಐಕೆಸ್

ಪುಟ 10 ರಿಂದ

ಪರಿಸ್ಥಿತಿಯನ್ನು ವಿವರಿಸುತ್ತ ಕೊಲ್ಲಲೆಂದೇ ಅನಗತ್ಯ ಗೋಲೀಬಾರ್ ನಡೆಸಲಾಗಿದೆ ಎಂದರು. ಪೋಲೀಸರು ಅತ್ಯಂತ ಅಮಾನುಷವಾಗಿ ವರ್ತಿಸಿದರು ಎಂದೂ ಅವರು ಹೇಳಿದರು.

ಈ ಪ್ರದೇಶದಲ್ಲಿ ಹೆಚ್ಚಿನ ಬೆಳೆಗಳ ಬೆಲೆಗಳು ಕುಸಿದಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 60ಶೇ. ಕ್ಕಿಂತಲೂ ಕಡಿಮೆ ಬೆಲೆ ದೊರೆತಿರುವ ಅತ್ಯಂತ ಸಂಕಟದ ಸ್ಥಿತಿ ಇದೆ ಎಂಬುದನ್ನು ನಿಯೋಗ ಗುರುತಿಸಿತು. ನೋಟು ರದ್ದತಿ ಮತ್ತು ಗೋಧಿ ಹಾಗೂ ದ್ವಿದಳ ಧಾನ್ಯಗಳ ಆಮದಿನಂತಹ ತಪ್ಪು ಧೋರಣೆಗಳ ಪರಿಣಾಮವಾಗಿ ಈ ಕುಸಿತ ಉಂಟಾಗಿರುವುದು ಕಂಡು ಬಂದಿದೆ. ವಿಡಂಬನೆಯೆಂದರೆ ಉತ್ತಮ ಬೆಳೆ ಬಂದಿರುವುದೂ ಈ ಕುಸಿತಕ್ಕೆ ಕಾರಣವಾಗಿದೆ.

* ಕಳೆದ ವರ್ಷ ಕ್ವಿಂಟಾಲಿಗೆ 5ರಿಂದ 6ಸಾವಿರ ರೂ. ದೊರೆತಿದ್ದ ಸೋಯಾಬೀನ್‌ಗೆ ಈ ಬಾರಿ 2200-2400ರೂ. ಮಾತ್ರ ದೊರೆತಿದೆ.
* ಕಡಲೆಗೆ ಕಳೆದ ವರ್ಷ 9-10ಸಾವಿರ ದೊರೆತಿದ್ದರೆ, ಈ ವರ್ಷ ಕೇವಲ 4000/ಕ್ವಿಂಟಲ್‌ಗೆ ದೊರೆತಿದೆ.
* ಕಳೆದ ವರ್ಷ ಉತ್ತಮ ಗೋದಿಗೆ 1900-2000 ರೂ. ಕ್ವಿಂಟಲ್‌ಗೆ ಸಿಕ್ಕಿದ್ದರೆ ಈ ವರ್ಷ ಅದು ಕನಿಷ್ಟ ಬೆಲೆ ರೂ.1650ಕ್ಕಿಂತಲೂ ಕಡಿಮೆ, ಅಂದರೆ 1200 ರೂ. ಮಾತ್ರ ದೊರೆತಿದೆ.
* ಬೆಳ್ಳುಳ್ಳಿ ಬೆಲೆ ಕ್ವಿಂಟಲ್‌ಗೆ 13,000ರೂ.ನಿಂದ 1000ರೂ.ಗೆ ಕುಸಿಯಿತು.
* 9-10 ಸಾವಿರ ರೂ.ಇದ್ದ ಮೆಂತೆಗೆ ಸಿಕ್ಕಿರುವುದು 2200-3000ರೂ. ಮಾತ್ರ.

ಇದಲ್ಲದೆ ನೋಟುರದ್ದತಿಯ ನಂತರ ವ್ಯಾಪಾರಿಗಳು ನಗದು ವ್ಯವಹಾರಗಳಿಗೆ ಇನ್ನೂ ಕಡಿಮೆ ಕೊಡುತ್ತಿದ್ದಾರೆ. ಲಾಗುವಾಡುಗಳ ಬೆಲೆಗಳು ಮಾತ್ರ ಈ ವರ್ಷ ಬಹಳಷ್ಟು ಹೆಚ್ಚಿದೆ. ಸಾಲದ್ದಕ್ಕೆ ಸರಕಾರ ಕನಿಷ್ಟ ಬೆಂಬಲ ಬೆಲೆಯಲ್ಲಿ ಕೇವಲ 3 ತಿಂಗಳು ಮಾತ್ರ ಖರೀದಿಸಿದೆ. ಗೋದಿಯ ಆಮದು ಸುಂಕವನ್ನು ತೆಗೆದು ಹಾಕಿದ್ದು ಕೂಡ ರೈತರನ್ನು ಬಹಳವಾಗಿ ಬಾಧಿಸಿದೆ.

ಮಂತ್ರಿಗಳು ಮತ್ತು ಆಳುವ ಪಕ್ಷಗಳ ಶಾಸಕರು, ಸ್ಥಳೀಯ ಎಂಪಿ ಇಲ್ಲಿಂದ ಹಾದುಹೋದರೂ ಅವರ ಪೋಲೀಸ್ ಗೋಲೀಬಾರ್‌ಗೆ ಬಲಿಯಾದವರ ಕುಟುಂಬಗಳನ್ನು ಭೇಟಿಯಾಗಿ ಸಾಂತ್ವನ ನೀಡುವ ಗೋಜಿಗೂ ಹೋಗಿಲ್ಲ, ರಾಜ್ಯ ಸರಕಾರದ ಅಧಿಕಾರಿಗಳೂ ಭೇಟಿ ನೀಡಿಲ್ಲ ಎಂದೂ ನಿಯೋಗಕ್ಕೆ ತಿಳಿದು ಬಂತು.

ಶಾಂತಿ ತರಲು ಅನಿರ್ದಿಷ್ಟ ಕಾಲದ ಉಪವಾಸಕ್ಕೆಂದು ಕೂತು 26 ಗಂಟೆಯಲ್ಲೇ ಅದನ್ನು ನಿಲ್ಲಿಸಿದಾಗ ಮುಖ್ಯಮಂತ್ರಿಗಳು ನೀಡಿದ ಆಶ್ವಾಸನೆಗಳನ್ನೂ ಪಾಲಿಸಿಲ್ಲ. ಅವರು ಹೇಳಿದಂತೆ ಬಲಿಯಾದವರ ಕುಟುಂಬಗಳಿಗೆ 1 ಕೋಟಿ ರೂ. ಪರಿಹಾರ ನೀಡಲು ಸಾಧ್ಯವಿಲ್ಲ, ಅದು ತನ್ನ ಅಧಿಕಾರ ವ್ಯಾಪ್ತಿಗೆ ಮೀರಿದ್ದು, ಅಲ್ಲದೆ ಬಜೆಟಿನಲ್ಲಿ ಇದಕ್ಕೆ ಹಣ ನೀಡಿಲ್ಲ ಎಂದು ಜಿಲ್ಲಾ ಕಲೆಕ್ಟರ್ ಹೇಳಿರುವುದಾಗಿ ವರದಿಯಾಗಿದೆ.

ಕನಿಷ್ಟ ಬೆಂಬಲ ಬೆಲೆಗಿಂತ ಕಡಿಮೆಗೆ ಬೆಳೆಗಳನ್ನು ಮಂಡಿಗಳಲ್ಲಿ ಕೊಳ್ಳುವುದು ಅಪರಾಧ ಎಂದು ಪರಿಗಣಿಸಲಾಗುತ್ತದೆ ಎಂದೂ ಈ ಫೈವ್‌ಸ್ಟಾರ್ ಉಪವಾಸದ ಮುಗಿಸುವಾಗ ಮುಖ್ಯಮಂತ್ರಿಗಳು ಹೇಳಿದರು. ಆದರೆ ಮಂಡಿಗಳಲ್ಲಿ ಘೋಷಿತ ಕನಿಷ್ಟ ಬೆಂಬಲ ಬೆಲೆಗಳಲ್ಲಿ ಖರೀದಿಸಲು ಈಗಲೂ ನಿರಾಕರಿಸಲಾಗುತ್ತಿದೆ.

ಈ ರೀತಿ ರೈತರ ದುಸ್ಥಿತಿಯ ಅಪಹಾಸ್ಯ ಮಾಡುವುದನ್ನು ತಕ್ಷಣವೇ ನಿಲ್ಲಿಸಿ ರೈತರಿಗೆ ಆಶ್ವಾಸನೆ ನೀಡಿದಂತೆ ಪರಿಹಾರ ನೀಡಬೇಕು, ಕುಟುಂಬದ ಒಬ್ಬರಿಗಾದರೂ ಸರಕಾರಿ ಉದ್ಯೋಗ ಕೊಡಬೇಕು ಮತ್ತು ಅವರ ಮಕ್ಕಳ ಶಿಕ್ಷಣಕ್ಕೆ ಹಣ ಕೊಡಬೇಕು, ರೈತರ ಮೇಲೆ ಹೇರಿರುವ ಎಲ್ಲ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು, ಹಾಗೂ ರೈತರ ನೈಜ ಬೇಡಿಕೆಗಳ ಬಗ್ಗೆ ಮಾತುಕತೆಗಳನ್ನು ಕೂಡಲೇ ಆರಂಭಿಸಬೇಕು ಎಂದು ಎಐಕೆಎಸ್ ನಿಯೋಗ ಆಗ್ರಹಿಸಿದೆ.

## ರಾಜ್ಯಗಳ ಸುತ್ತ

### ಬಿಜೆಪಿ ಕಚೇರಿಯ ಮೇಲೆ ದಾಳಿಯನ್ನು ಮುಂಗಂಡ ಕೇರಳ ಯುವ ಮೋರ್ಚಾ ಫೇಸ್‌ಬುಕ್ ದೃಷ್ಟಾರ!

ಜೂನ್ 7 ರಂದು ತಿರುವನಂತಪುರದ ಬಿಜೆಪಿ ಕಚೇರಿಯ ಮೇಲೆ ಸಿಪಿಐ(ಎಂ) ಪೆಟ್ರೋಲ್ ಬಾಂಬ್ ದಾಳಿ ನಡೆಸಿದೆ ಎಂದು ಖಂಡಿಸಿ ಸಂಘ ಪರಿವಾರದ ಕೇರಳ ಯುವ ಮೋರ್ಚಾ ಮುಖಂಡ ಜಯದೇವ ಹರೀಂದ್ರ ನಾಯರ್ ತನ್ನ ಫೇಸ್‌ಬುಕ್‌ನಲ್ಲಿ ಅದೇ ದಿನ ಮೂರು ಪೋಸ್ಟ್‌ಗಳನ್ನು ಹಾಕಿದ್ದ- ಬೆಳಿಗ್ಗೆ 8.01ಕ್ಕೆ, ಸಂಜೆ 5.01ಕ್ಕೆ ಮತ್ತು 6.31ಕ್ಕೆ. ಆದರೆ ನಿಜವಾದ ಘಟನೆ ನಡೆದದ್ದು ರಾತ್ರಿ 8.30ರಿಂದ 9ರ ನಡುವೆ ಎಂದು ಏಶ್ಯನೆಟ್ ನ್ಯೂಸೇಬಲ್ ವರದಿ ಮಾಡಿದೆ. ಅಂದರೆ ಇದು ಕೇಸರಿ ಪಡೆಗಳು ತಾವೇ ಯೋಜಿಸಿ ನಡೆಸಿದ ಕೃತ್ಯವೆಂಬುದು ಸ್ಪಷ್ಟವಲ್ಲವೇ?

ಸುಳ್ಳನ್ನು ಸತ್ಯ ಮಾಡುವ ಚಾಳಿಯ ಸಂಘ ಪರಿವಾರದ ಮಂದಿ ಕೇರಳದಲ್ಲಂತೂ ಸಿಪಿಐ(ಎಂ)ನ ಹೆಸರುಗೆಡಿಸುವ ಹುಚ್ಚು ಹತ್ತಿಸಿಕೊಂಡು ತಮ್ಮ ಹತಾಶೆಯಿಂದಾಗಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವುದು ಇಂತಹ ಇನ್ನೂ ಹಲವು ಘಟನೆಗಳಿಂದ ಬಯಲಾಗುತ್ತಿದೆ.

ಆದರೂ ಇನ್ನೂ ಎರಡು ಗಂಟೆ ಕಾಯಬಾರದಿತ್ತೇ ಎಂದೊಬ್ಬ ಫೇಸ್‌ಬುಕ್‌ನಲ್ಲಿ ಕೇಳಿದ್ದಕ್ಕೆ "ನಾನು ಕೇವಲ ಹಿಂಬಾಲಕನಲ್ಲ, ದಾಳಿ ನಡೆಯುವ ವರೆಗೆ ಕಾಯಲು, ನಾನು ಬೌದ್ಧಿಕ್ ಪ್ರಮುಖ್, ಬೌದ್ಧಿಕ್ ಪ್ರಮುಖ" ಎಂದು ಉತ್ತರಿಸಿದ್ದಾನಂತೆ!

### ಮಹಾರಾಷ್ಟ್ರದ ರೈತರ 10 ದಿನಗಳ ಚಾರಿತ್ರಿಕ ಹೋರಾಟ

ಪುಟ 10 ರಿಂದ

5. ರಾಜ್ಯ ಸರಕಾರ ರೈತರ ಮನವಿ ಪತ್ರದ ಇತರ ಅಂಶಗಳ ಬಗ್ಗೆ ಲಿಖಿತ ಉತ್ತರ ನೀಡಬೇಕು.
6. ಈ ಹೋರಾಟದಲ್ಲಿ ರೈತರ ಮೇಲೆ ಹಾಕಿರುವ ಪೋಲಿಸ್ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು.

ರೈತ ಸಂಘಟನೆಗಳ ಪರವಾಗಿ ರೈತರ ಜಂಟಿ ಸಮಿತಿಯ ಸಂಯೋಜಕ ಮತ್ತು ಮಹಾರಾಷ್ಟ್ರ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಡಾ. ಅಜಿತ್ ನವಳೆ, ಸಂಸದ್ ಸದಸ್ಯ ರಾಜು ಶೆಟ್ಟಿ, ಶಾಸಕ ಬಚ್ಚು ಕಡು, ಎಂಎಲ್‌ಸಿ ಜಯಂತ್ ಪಾಟೀಲ್, ಎಐಕೆಎಸ್ ಜಂಟಿ ಕಾರ್ಯದರ್ಶಿ ಡಾ. ಅಶೋಕ ಧವಳೆ, ನಾಮದೇವ ಗವಾಡೆ ಮತ್ತಿತರರು ಮಾತುಕತೆಗಳಲ್ಲಿ ಭಾಗವಹಿಸಿದರು.

ಸಾಲಮನ್ನಾ ಮಾನದಂಡವನ್ನು ವಿಧಾನಸಭೆಯ ಅಧಿವೇಶನ ಆರಂಭವಾಗುವ ಮುನ್ನ, ಅಂದರೆ ಜುಲೈ 24 ರೊಳಗೆ ತೃಪ್ತಿಕರವಾಗಿ ನಿರ್ಧರಿಸದಿದ್ದರೆ ಜುಲೈ 26 ರಂದು, ರಾಜ್ಯದ ಪ್ರಖ್ಯಾತ ಸಾಮಾಜಿಕ ಸುಧಾರಕ ಛತ್ರಪತಿ ಶಾಹು ಮಹಾರಾಜ್ ಜನ್ಮ ದಿನಾಚರಣೆ-ಯಂದು ಮಹಾರಾಷ್ಟ್ರದ ರೈತರು ಮತ್ತೆ ಹೋರಾಟದ ಕಣಕ್ಕೆ ಇಳಿಯುತ್ತಾರೆ ಎಂದೂ ರೈತರ ಸಮನ್ವಯ ಸಮಿತಿ ಎಚ್ಚರಿಸಿದೆ.

**ಈ ಹತ್ತು ದಿನಗಳ ಹೋರಾಟದಲ್ಲಿ ಎಐಕೆಎಸ್‌ಗೆ ಸೇರಿದ ಮಹಾರಾಷ್ಟ್ರ ಕಿಸಾನ್ ಸಭಾ, ಅದರಲ್ಲೂ ಅದರ ಪ್ರಧಾನ ಕಾರ್ಯದರ್ಶಿಯಾದ ಡಾ.ಜಿತ್ ನವಳೆ ಎಲ್ಲ ಸಂಘಟನೆಗಳನ್ನು ಒಂದುಗೂಡಿಸುವಲ್ಲಿಯೂ ಮತ್ತು ಮುಷ್ಕರವನ್ನು ಮುರಿಯುವ ಸರಕಾರದ ಮತ್ತು ಕೆಲವು ಸ್ವಯಂ ಘೋಷಿತ 'ರೈತ ನಾಯಕರು'ಗಳ (ಸರಕಾರದ ಮಟ್ಟಿಗೆ ಇವರೇ ನೈಜ ರೈತ ಪ್ರತಿನಿಧಿಗಳು, ಉಳಿದವರೆಲ್ಲ ಹುಸಿ!) ಹುನ್ನಾರಗಳನ್ನು ವಿಫಲಗೊಳಿಸುವಲ್ಲಿಯೂ ಮಹತ್ವದ ಪಾತ್ರ ವಹಿಸಿದರು ಎಂಬುದು ಗಮನಾರ್ಹ.**

# ವೆನೆಜುವೆಲಾ ಏಕೆ ಹಿಂಸಾಚಾರದಿಂದ ಹೊತ್ತಿ ಉರಿಯುತ್ತಿದೆ?

## ಬೊಲಿವೆರಿಯನ್ ಕ್ರಾಂತಿಯ ರಕ್ಷಣೆಗೆ ಅಣಿನೆರೆಯುತ್ತಿರುವ ವೆನೆಝುವೆಲ ಜನತೆ

ಜಗದ ಸುತ್ತ

**ನಾಗರಾಜ ನಂಜುಂಡಯ್ಯ**

ಕಳೆದ ಆರು–ಏಳು ವಾರಗಳಿಂದ; ವೆನೆಜುವೆಲಾದಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಅಧ್ಯಕ್ಷ ನಿಕೋಲಸ್ ಮಡುರೋ ಅವರನ್ನು ಅಧಿಕಾರದಿಂದ ಹೊರಹಾಕಲು ವಿರೋಧಿ ಗುಂಪುಗಳು ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತಿವೆ. ಕೆಲವು ವರದಿಗಳ ಪ್ರಕಾರ ಈ ಪ್ರತಿಭಟನೆಯಲ್ಲಿ ಇಲ್ಲಿಯವರೆಗೂ 42 ಜನರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಪ್ರಮುಖ ವಾಧ್ಯಮಗಳು ನಡೆಯುತ್ತಿರುವ ಹಿಂಸಾತ್ಮಾಕ ಪ್ರತಿಭಟನೆ ಕುರಿತಂತೆ, ನಿಕೋಲಸ್ ಆಡಳಿತದ ಸರ್ಕಾರವನ್ನು ದೂಷಿಸುತ್ತಿವೆ. ವಾಧ್ಯಮಗಳ ಮೂಲಕ ವೆನೆಜುವೆಲಾದ ಬೆಳವಣಿಗೆಗಳ ಬಗ್ಗೆ ತಿಳಿದ ಅನೇಕರು ಜಗತ್ತಿನಾದ್ಯಂತ ಪ್ರಾಮಾಣಿಕವಾಗಿ ಚಿಂತೆಗೊಳಗಾಗಿ, ಮುಂದಿನ ಬೆಳವಣಿಗೆಗಳ ಬಗ್ಗೆ ಆತಂಕಕ್ಕೆ ಒಳಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅಲ್ಲಿ ಏನಾಗುತ್ತಿದೆ ಎಂಬುದನ್ನು ನೆಲಮಟ್ಟದಿಂದ ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿದೆ.

ದಕ್ಷಿಣ ಅಮೆರಿಕಾ ಖಂಡದ ವೆನೆಜುವೆಲಾ ಎಂದ ತಕ್ಷಣ ಮೊಟ್ಟ ಮೊದಲು ನೆನಪಾಗುವುದು, ಅಮೆರಿಕಾದ ಎಲ್ಲ ವಿರೋಧಗಳ ನಡುವೆಯೂ ಕ್ರಾಂತಿಕಾರಿ ಬದಲಾವಣೆಗಳನ್ನು ತಂದ ಕ್ರಾಂತಿ ಪುರುಷ 'ಹ್ಯೂಗೋ ರಾಫೆಲ್ ಜಾವೆಜ್ ಪ್ರಿಯಾಜ್, ಹದಿನೈದು ವರ್ಷಗಳ ಕಾಲ ವೆನೆಜುವೆಲಾದ ಅಧ್ಯಕ್ಷರಾಗಿ ಆಡಳಿತ ನಡೆಸಿದ ಚಾವೆಜ್ ತನ್ನ ನಾಡಿನ ಲಕ್ಷಾಂತರ ಬಡ ಜನರ ಜೀವನನವನ್ನು ಮಾರ್ಪಡಿಸಿ ಉತ್ತಮ ಗೊಳಿಸಿದವರು, ಮಾತ್ರವಲ್ಲದೆ ಇಪ್ಪತ್ತೊಂದನೆ ಶತಮಾನದ ಜಾಗತಿಕ ರಾಜಕಾರಣದಲ್ಲಿ – ಸಮಾಜವಾದಿ ವಿಚಾರಗಳಿಗೆ ಪುನಶ್ಚೇತನ ನೀಡಿದ ಅವರು ಅಮೆರಿಕದ ಮುಕ್ತಮಾರುಕಟ್ಟೆ ಆರ್ಥಿಕತೆಗೆ ಪರ್ಯಾಯವಿದೆ ಎಂದು ಜಗತ್ತಿಗೆ ತೋರಿಸಿದ ಕ್ರಾಂತಿಕಾರಿ. ಚಾವೆಜ್‌ರವರ ಉತ್ತರಾಧಿಕಾರಿಯಾಗಿ ನಿಕೋಲಸ್ ಮಡುರೋ ಚಾವೆಜ್ ಬಿಟ್ಟು ಹೋಗಿರುವ ಬೊಲಿವರಿಯನ್ ಚಳುವಳೀಯ ಕ್ರಾಂತಿಯ ಹಾದಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ವೆನೆಜುವೆಲಾ ದೇಶವು ಸಾಮ್ರಾಜ್ಯಶಾಹಿ ವಿಶ್ವ ವ್ಯವಸ್ಥೆ ಹಾಗೂ ನವ–ಉದಾರವಾದ ಜಾಗತೀಕರಣಕ್ಕೆ ಸೆಡ್ಡು ಹೊಡೆದು – ಪ್ರತಿರೋಧ ಒಡ್ಡಿ ALBA ಮತ್ತು CLAC ಸ್ಥಾಪನೆ ಮಾಡಿದ ಹೊಸ ಹಾದಿ ಎಲ್ಲರ ಹುಬ್ಬೇರಿಸುವಂತೆ ಮಾಡಿದ್ದು, ಲ್ಯಾಟೀನ್ ಅಮೆರಿಕದಲ್ಲಿ ಮಾತ್ರವಲ್ಲದೆ ವಿಶ್ವದ ಇತರೆ ಭಾಗಗಳಲ್ಲಿನ ಸಾಮ್ರಾಜ್ಯಶಾಹಿ ವಿರೋಧಿ ಗುಂಪುಗಳ ನಡುವೆಯೂ ಅಸಮಾನತೆಯ ವಿರುದ್ಧದ ಹೋರಾಟದಲ್ಲಿ ತೊಡಗಿರುವವರ ನಡುವೆಯೂ ಅನೇಕ ಅಭಿಮಾನಿಗಳನ್ನು ಪಡೆದುಕೊಂಡಿದೆ.

ವೆನೆಜುವೆಲಾದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ತೀವ್ರತೆಯಿಂದಾಗಿ ಸಹಜವಾಗಿಯೇ ಕಂಗೆಟ್ಟ ಅಮೆರಿಕನ್ ಆಳರಸರು ಸಂಚು ಹೂಡಿದ್ದಾರೆ. ವಿರೋಧಿ ಗುಂಪುಗಳಿಗೆ ನಿಧಿ ನೀಡುವುದು, ಹಾಗೂ ಮಿಲಿಟರಿ ಮೇಲೆ ಪ್ರಭಾವ ತರುವುದು, ದಂಗೆಗಳಿಗೆ ಉತ್ತೇಜನ ನೀಡಲು ಶತ–ಶತಕೋಟಿ ಡಾಲರ್‌ಗಳನ್ನು ಇಲಲಿಗೆ ಸುರಿಯಲಾಗುತ್ತಿದೆ.

ವೆನಿಜುವೆಲಾದ ಅಧ್ಯಕ್ಷರಾದ 'ನಿಕೋಲಸ್ ಮಡುರೋ' ಚಾವೆಜ್ ನಂತರ, ಬೊಲಿವೇರಿಯಸ್ ಕ್ರಾಂತಿಯನ್ನು ಬಲಪಡಿಸಲು, ಸಾಮ್ರಾಜ್ಯಶಾಹಿ ವಿರೋಧಿ ನೀತಿಗಳನ್ನು ಮುಂದುವರಿಸಲು ಶಪತ ಕೈಗೊಂಡಿದ್ದಾರೆ. ಇದರಿಂದಾಗಿ, ಅಮೆರಿಕಾದ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಮಡುರೋ ಅಧ್ಯಕ್ಷರಾಗಿ, ಆಡಳಿತ ಆರಂಭಿಸಿದ ದಿನದಿಂದಲೂ ಬಲಪಂಥೀಯ ವಿರೋ ಧ ಪಕ್ಷಗಳು ಕೆಲವೇ ಶ್ರೀಮಂತರಿರುವ ಒಂದು ಕೂಟದ ನೇತೃತ್ವದಲ್ಲಿ ಹಿಂಸಾತ್ಮಕ ಪ್ರತಿಭಟನೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹ್ಯೂಗೋ ಚಾವೆಜ್ ರವರ ಬೊಲಿವೇರಿಯನ್ ಕ್ರಾಂತಿಯನ್ನು ಕ್ರೋಡಿಕರಿಸುವುದನ್ನು ಹೇಗಾದರೂ ಮಾಡಿ ತಡೆಯಬೇಕೆನ್ನುವ ಅಮೆರಿಕಾದ ಬೆಂಬಲ ಅವರಿಗೆ ದಂಡಿಯಾಗಿ ದೊರೆಯುತ್ತಿದೆ.

ಶೇ. 80 ರಷ್ಟು ದೇಶದ ಕೈಗಾರಿಕ ಉತ್ಪಾದನೆಯ ಮೇಲೆ ಈ ಶ್ರೀಮಂತರ ಕೂಟದ ನಿಯಂತ್ರಣವನ್ನು ಬಳಸಿಕೊಂಡು, ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಆರ್ಥಿಕ ಯುದ್ಧ ಆರಂಭಿಸಿದ್ದಾರೆ. ಜನರ ದೈನಂದಿನ ಬಳಕೆಯ ಅಗತ್ಯ ವಸ್ತುಗಳ ಕಳ್ಳ ದಾಸ್ತಾನುಗಳ ಮೂಲಕ ಕೃತಕ ಕೊರತೆಯನ್ನು ಸೃಷ್ಟಿಸಿದ್ದಾರೆ. ಅಮೆರಿಕದ ಸಹಾಯದಿಂದ ಇಲ್ಲಿನ ಬೊಲಿವರ ಕರೆನ್ಸಿಯ ವಿನಿಮಯ ದರಗಳಲ್ಲಿ ಆಟವಾಡುತ್ತ ಆರ್ಥಿಕ್ಕೆ ತೊಂದರೆಯುಂಟು ಮಾಡಲು ಪ್ರಯತ್ನಿಸುತ್ತಿದ್ದಾರೆ. ಇದರಿಂದಾಗಿ ವೆನೆಝುವೆಲಾದ ಆರ್ತಿಕ ವಯವಸ್ಥೆ ನಿಜಕ್ಕೂ ಬಹಳ ಕಷ್ಟಕ್ಕೀಡಾಗಿದೆ. ಇದನ್ನು ಬಳಸಿಕೊಂಡು ಜನಗಳನ್ನು ಮಡುರೊ ಸರಕಾರದ ವಿರುದ್ಧ ಎತ್ತಿಕಟ್ಟಿ ಪದಚ್ಯುತಗೊಳಿಸುವುದು ಅವರ ಹುನ್ನಾರ.

ಮಡುರೊ ಅವರ ಬೊಲಿವಿರಿಯನ್ ಸರಕಾರವು ಈ ಕಷ್ಟಕರಗೊಳಿಸಿರುವ ಪರಿಸ್ಥಿತಿಯನ್ನು ಮೆಟ್ಟಿ ನಿಲ್ಲುವ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಬೆಲೆಗಳ ನಿಯಂತ್ರಣಗಳನ್ನು ಜಾರಿಗೆ ತರುವ ಮೂಲಕ ಕಳ್ಳ ದಾಸದತಾನುಗಳನ್ನು ಹೊರಗೆಳೆದು ಅಗತ್ಯ ವಸ್ತುಗಳ ಸೂಕ್ತ ಪೂರೈಕೆಗೆ ಪ್ರಯತ್ನನಡೆಸಿದೆ. ಕರೆನ್ಸಿ ನಿಯಂತ್ರಣ, ಹಣದುಬ್ಬರ ನಿಯಂತ್ರಣ ಇಂತಹ ಹಲವು ಕ್ರಮಗಳನ್ನು ತೆಗೆದುಕೊಂಡಿತು. ಆದರೆ ಈ ಅವಧಿಯಲ್ಲಿ ತೈಲ ಬೆಲೆಗಳು ಇಳಿಮುಖಗೊಂಡು ಇದನ್ನು ಬಹುವಾಗಿ ಆಧರಿಸಿರುವ ಆರ್ಥಿಕತೆಗೆ ಹಾನಿ ಉಂಟಾಗಿದ್ದ ಕಾರಣ, ತೆಗೆದುಕೊಂಡ ಎಲ್ಲಾ ಕ್ರಮಗಳು ಪರಿಸ್ಥಿತಿ ಸುಧಾರಣೆಗೆ ಸಹಕರಿಸಲಿಲ್ಲ.

ಈ ಕಷ್ಟಗಳ ಸಂದರ್ಭದಲ್ಲಿಂಯೂ, ಬೊಲಿವೇರಿಯನ್ ಸರ್ಕಾರವು ತಾನು ಆರಂಭಿಸಿದ್ದ ಯಾವುದೇ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಕಡಿತಗೊಳಿಸಲಿಲ್ಲ ಎಂಬುದು ಗಮನಾರ್ಹ. ದೇಶದ ಜನತೆಗೆ ಒದಗಿಸುತ್ತಿದ್ದ ಉಚಿತ ಆರೋಗ್ಯ ಮತ್ತು ಶಿಕ್ಷಣವನ್ನು ಮುಂದುವರಿಸುತ್ತಿದೆ. ಇತ್ತೀಚಿನ ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ ವೆನೆಜುವೆಲಾ 188 ದೇಶಗಳ ಪೈಕಿ, 71 ನೇ ಸ್ಥಾನದಲ್ಲಿರುವುದು, ಉನ್ನತ ಮಾನವಭಿವೃದ್ಧಿಯ ಗುಂಪಿನಲ್ಲಿ ನಿಂತಿದೆ. ಇದು ಲ್ಯಾಟೀನ್ ಅಮೇರಿಕಾದದಿತರ ಹಲವು ದಏಶಗಳಿಗಿಂತ ಮೇಲಿನ ಸಥಾನದಲ್ಲಿದೆ– ಮೆಕ್ಸಿಕೋ (77) ನೇ ಸ್ಥಾನ, ಬ್ರೆಜಿಲ್ (79) ಸ್ಥಾನ, ಪೆರು (87) ನೇ ಸ್ಥಾನ ಹಾಗೂ ಕೊಲೊಂಬಿಯಾ (95) ನೇ ಸ್ಥಾನ ಹೊಂದಿವೆ.

ವೆನೆಜುವೆಲಾ ನಾಗರೀಕರಿಗೆ ವಿಶ್ವದಾದ್ಯಂತ ಒದಗಿಸುವ ಪ್ರಾಥಮಿಕ ಆರೋಗ್ಯ ರಕ್ಷಣೆಯಲ್ಲಿ ವಿಶ್ವದಾದ್ಯಂತದಲ್ಲಿ ಎರಡನೆ ಸ್ಥಾನದಲ್ಲಿದೆ ಪ್ರತಿ 250 ಕುಟುಂಬಗಳಿಗೆ ಒಂದು ಪ್ರಥಮಿಕ ಆರೋಗ್ಯ ಕೇಂದ್ರ ಹೊಂದಿದೆ. ಆರೋಗ್ಯ ಕೇಂದ್ರ ಹೊಂದಿದೆ. ಕೇವಲ ಸಮಾಜವಾದಿ ಕ್ಯೂಬಾ ಮಾತ್ರ ವೆನೆಜುವೆಲಾಕ್ಕಿಂತ ಮೇಲಿನ ಸ್ಥಾನದಲ್ಲಿದೆ. ಶೇ. 97.3 ರಷ್ಟು ವೆನೆಜುವೆಲಾದ ಜನರು ಸಮೃದ್ಧ ಪ್ರೋಟಿನ್ ಸೇವಿಸುತ್ತಾರೆ ಮತ್ತು 98 ಪ್ರತಿಶತದಷ್ಟು ಮಕ್ಕಳಿಗೆ ಹಾಲು ಲಭ್ಯವಿದೆ.

ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿಯೂ ಲ್ಯಾಟಿನ್ ಅಮೆರಿಕಾದಲ್ಲಿ ಕ್ಯೂಬಾದ ನಂತರದ ಸ್ಥಾನ ಈಗಲೂ ವೆನೆಜುವೆಲಾದ್ದೇ, ಹಾಗೂ ಪ್ರಪಂಚದಲ್ಲಿಯೇ ಐದನೆಯ ಸ್ಥಾನ ಹೊಂದಿದೆ. ಸಾರ್ವತ್ರಿಕ ಸಾಕ್ಷರತೆಯಲ್ಲಿಯೂ ಈ ಪ್ರದೇಶದಲ್ಲಿ ಎರಡನೆ ಸ್ಥಾನದಲ್ಲಿದೆ. ಇಲ್ಲಿಯಾ ಕ್ಯೂಬಾ ಮೊದಲನೆ ಸ್ಥಾನದಲ್ಲಿದೆ.



**ವೆನೆಜುವೆಲ ಈಗ ಒಂದು ತೀವ್ರ ವರ್ಗ ಹೋರಾಟವನ್ನು ಕಾಣುತ್ತಿದೆ. ಸಾಮ್ರಾಜ್ಯಶಾಹಿ–ಪ್ರೇರಿತ ಶ್ರೀಮಂತರ ಕೂಟ ಒಂದೆಡೆಯಲ್ಲಿ, ಶೋಷಿತ ಜನಕೋಟಿಗಳು ಇನ್ನೊಂದೆಡೆಯಲ್ಲಿ. ಸರಕಾರ ಚವೇಜ್ ಅನುಯಾಯಿಗಳನ್ನು ಮತ್ತು ಎಲ್ಲ ಜನತೆಯನ್ನು ಈ ಹೋರಾಟದಲ್ಲಿ ಅಣಿನೆರೆಸಲು ಶತಪ್ರಯತ್ನ ನಡೆಸುತ್ತಿದೆ. ಈ ವರ್ಷ ಮೇದಿನದಂದು ನಡೆದ ಬೃಹತ್ ರ್‍ಯಾಲಿ ಈ ನಿಟ್ಟಿನಲ್ಲಿ ಹೊಸ ಉತ್ಸಾಹ ಮೂಡಿಸಿದೆ. ತಮ್ಮ ದೇಶವನ್ನು ಮತ್ತೆ ಶೋಷಣೆಗೆ ಒಳಪಡಿಸುವ ಸಾಮ್ರಾಜ್ಯಶಾಹಿಯ ಬೃಹತ್ ಶಕ್ತಿಯನ್ನು ಎದುರಿಸಿ ನಿಂತಿರುವ ವೆನೆಜುವೆಲದ ಜನತೆಗೆ 'ಬೊಲಿವಿರಿಯನ್ ಕ್ರಾಂತಿ'ಯನ್ನು ಮುಂದುವರಿಸಲು ನಡೆಸುತ್ತಿರುವ ಈ ಹೋರಾಟಕ್ಕೆ ಎಲ್ಲ ಅಂತರ್ರಾಷ್ಟ್ರೀಯವಾದಿಗಳ ಬೆಂಬಲದ ಅತ್ಯಗತ್ಯವಿದೆ.**

ಕಳೆದ ಆರು ವರ್ಷಗಳಲ್ಲಿ 14,00,137 ಲಕ್ಷ ಮನೆಗಳನ್ನು ನಿರ್ಮಿಸಿ, ಎಲ್ಲರಿಗೂ ವಸತಿ ಕಲ್ಪಿಸಲು ಇದು ಶ್ರಮಿಸುತ್ತಿದೆ.

ಕೃತಕ ಕೊರತೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರವು ಸ್ಥಳೀಯ ಸರಬರಾಜು ಮತ್ತು ಉತ್ಪಾದನಾ ಸಮಿತಿಗಳನ್ನು (CLAC) ರಚಿಸಿ, ಇವುಗಳ ಮೂಲಕ ದೇಶದಾದ್ಯಂತ ನ್ಯಾಯಯುತ ದರಗಳಲ್ಲಿ ಮೂಲ ಆಹಾರ ಬ್ಯಾಸ್ಕಟ್‌ಗಳ ಮೂಲಕ ನೇರವಾಗಿ ಆಹಾರದ ವಿತರಣಾ ವ್ಯವಸ್ಥೆಯನ್ನು ರಚಿಸಿ ಕಾರ್ಯ ನಿರ್ವಹಿಸುತ್ತಿದೆ. ಡಾಟನಾಲಿಸಿಸ್ ಸಂಶೋಧನಾ ಸಂಸ್ಥೆಯು, ಶೇ.50 ರಷ್ಟು ಜನರು ವೆನೆಜುವೆಲಾದಲ್ಲಿ CLAC ಉತ್ಪನ್ನಗಳನ್ನು ಪಡೆಯುತ್ತಿದ್ದಾರೆ ಎಂದು ಹೇಳಿದೆ. 2017 ರ ಪೆಬ್ರವರಿಯಲ್ಲಿ 57,34,705 ಕುಟುಂಬಗಳು ಈ ಸರಕುಗಳನ್ನು ಪಡೆದಿವೆ.

ಪ್ರಮುಖವಾಗಿ ಕುಟುಂಬಗಳಿಗೆ ಆಹಾರ ಚೀಲಗಳನ್ನು ತಿಂಗಳಿಗೆ ಕೊಡುತ್ತಿದ್ದನ್ನು ಕಮ್ರೇಣ 15 ದಿನಗಳಿಗೆ ಒಮ್ಮೆ ವಿತರಿಸಲು ಆರಂಭಿಸಿದ್ದರು. ಈ ಆಹಾರ ಚೀಲಗಳಲ್ಲಿ ಹಿಟ್ಟು, ಖಾದ್ಯತೈಲ, ಅಕ್ಕಿ, ಮೆಣಸಿನ ಪುಡಿ, ಹಾಲು, ಸಕ್ಕರೆ, ಗೋಧಿ, ಟೊಮೆಟೊಗಳು, ಸಾಸ್, ಕಾಫೀ–ಟೀ ಪುಡಿ ಇತ್ಯಾದಿಗಳನ್ನು ಪೂರೈಸಲಾಗುತ್ತಿದೆ. ಹ್ಯೂಗೋ ಚಾವೆಜ್ ತಂದ ಸಂವಿಧಾನ ಆಹಾರ ಲಭ್ಯತೆಯನ್ನು ನಾಗರಿಕರ ಹಕ್ಕಾಗಿ ಮಾಡಿತ್ತು. ಇದನ್ನು ಎಲ್ಲ ಕಷ್ಟಗಳ ನಡುವೆಯೂ ಮುಂದುವರೆಸಲಾಗುತ್ತಿದೆ. ಆದರೂ ವಿರೋಧಿ ಗುಂಪುಗಳು ಗಲಭೆ, ಹಿಂಸಾಚಾರದಲ್ಲಿಯೇ ನಿರತರಾಗಿವೆ.

ಅಮೆರಿಕವು ಕೊಲಂಬಿಯಾದ ಪ್ಯಾರಾ–ಮಿಲಿಟರಿ ಗುಂಪುಗಳ ಸಹಾಯದಿಂದ ವೆನಜುವೆಲಾ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳನ್ನು ಪ್ರೇರೇಪಿಸಿ ಹಿಂಸಾತ್ಮಕ ಕ್ರಿಯೆಯಲ್ಲಿ ತೊಡಗಿದೆ. ರಾಕೆಟ್ ಲಾಂಚರ್‌ಗಳ ಮೂಲಕವು ಈ ಗುಂಪುಗಳು ಹಿಂಸೆ ನಡೆಸುತ್ತಿವೆ.

ವಿರೋಧ' ಪಕ್ಷಗಳೊಂದಿಗೆ ಸರಕಾರ ಸಂವಾದಕ್ಕೂ ಸಿದ್ಧವಾಗಿದೆ. ಹಲವರು, ಸ್ವತಃ ಪೋಪ್ ಪ್ರಾನ್ಸಿಸ್ ಹೇಳಿದರೂ ವಿರೋಧ ಪಕ್ಷಗಳು ಇಂತಹ ಸಂವಾದಕ್ಕೆ ಸಿದ್ಧವಾಗಿಲ್ಲ, ಏಕೆಂದರೆ ಅವರು ಶಾಂತಿ ಸ್ಥಾಪನೆಗೆ ಸಿದ್ದರಿಲ್ಲ. ಅವರದ್ದು ಅಮೆರಿಕ ಪ್ರೇರಿತ ವಿರೋಧವಾಗಿದೆ. ಅವರ ಒಂದೆ ಬೇಡಿಕೆ ಅಧ್ಯಕ್ಷ ನಿಕೋಲಸ್ ಮಡೋರೋ ರವರ ಪದಚ್ಯುತಿಯೊಂದೆ.

ಇಂತಹ ಸನ್ನಿವೇಶದಲ್ಲಿ ಅಧ್ಯಕ್ಷ ಮಡುರೋ ರವರು ಸಂವಿಧಾನ ಬದ್ಧವಾದ ತಮ್ಮ ಅಧಿಕಾರವನ್ನು ಬಳಸಿಕೊಂಡು, 500 ಸದಸ್ಯರಿರುವ ಸಂವಿಧಾನ ಸಭೆಗೆ ಚುನಾವಣೆಗೆ ಕರೆ ನೀಡಿದರು. ಆದರೆ ವಿರೋಧ ಪಕ್ಷಗಳು ಇಈ ಚುನಾವಣೆಯಲ್ಲಿ ಭಾಗವಹಿಸಲು ಕೂಡ ಸಿದ್ಧವಿಲ್ಲ. ಏಕೆಂದರೆ ಆಗ ತಮ್ಮ ಧೋರಣೆಗಳನ್ನು ಜನಗಳ: ಮುಂದಿಡಬೇಕಾಗುತ್ತದೆ, ಜನಗಳ ಮುಂದೆ ತಮ್ಮ ಜನ–ವಿರೋಧಿ ನಿಲುವು ಬಯಲಾಗಿ ಚುನಾವಣೆಯಲ್ಲಿ ತಮ್ಮ ಸೋಲು ಖಚಿತವೆಂಬ ಭಯ ಅವಕ್ಕೆ.

ಒಟ್ಟಾರೆಯಾಗಿ ಅಮೆರಿಕಾದ ಸಾಮ್ರಾಜ್ಯಶಾಹಿ ಬಿಗಿಮುಷ್ಠಿಯಿಂದ ಸಿಕ್ಕಿ ಉಸಿರುಕಟ್ಟುವಂಥ ಸ್ಥಿತಿಯಲ್ಲಿದ್ದ ಲ್ಯಾಟಿನ್ ಅಮೆರಿಕ ದೇಶಗಳನ್ನು ಸಮಾಜವಾದ ವ್ಯವಸ್ಥೆಯತ್ತ ಕೊಂಡೊಯ್ಯುವ ಹ್ಯೂಗೋ ಚಾವೇಜ್‌ರ 'ವೆನಿಜುವೆಲಾ' ಇಂದು ಹೊತ್ತಿ ಉರಿಯುವಂತೆ ಮಾಡುವ ಅಮೇರಿಕದ ಪಿತೂರಿಯನ್ನು ಸೋಲಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ.

ವಾಸ್ತವವಾಗಿ ವೆನೆಜುವೆಲ ಈಗ ಒಂದು ತೀವ್ರ ವರ್ಗ ಹೋರಾಟವನ್ನು ಕಾಣುತ್ತಿದೆ. ಸಾಮ್ರಾಜ್ಯಶಾಹಿ–ಪ್ರೇರಿತ ಶ್ರೀಮಂತರ ಕೂಟ ಒಂದೆಡೆಯಲ್ಲಿ, ಶೋಷಿತ ಜನಕೋಟಿಗಳು ಇನ್ನೊಂದೆಡೆಯಲ್ಲಿ. ಸರಕಾರ ಚವೇಜ್ ಅನುಯಾಯಿಗಳನ್ನು ಮತ್ತು ಎಲ್ಲ ಜನತೆಯನ್ನು ಈ ಹೋರಾಟದಲ್ಲಿ ಅಣಿನೆರೆಸಲು ಶತಪ್ರಯತ್ನ ನಡೆಸುತ್ತಿದೆ. ಈ ವರ್ಷ ಮೇದಿನದಂದು ನಡೆದ ಬೃಹತ್ ರ್‍ಯಾಲಿ ಈ ನಿಟ್ಟಿನಲ್ಲಿ ಹೊಸ ಉತ್ಸಾಹ ಮೂಡಿಸಿದೆ.

ತಮ್ಮ ದೇಶವನ್ನು ಮತ್ತೆ ಶೋಷಣೆಗೆ ಒಳಪಡಿಸುವ ಸಾಮ್ರಾಜ್ಯಶಾಹಿಯ ಬೃಹತ್ ಶಕ್ತಿಯನ್ನು ಎದುರಿಸಿ ನಿಂತಿರುವ ವೆನೆಜುವೆಲದ ಜನತೆಗೆ 'ಬೊಲಿವಿರಿಯನ್ ಕ್ರಾಂತಿ'ಯನ್ನು ಮುಂದುವರಿಸಲು ನಡೆಸುತ್ತಿರುವ ಈ ಹೋರಾಟಕ್ಕೆ ಎಲ್ಲ ಅಂತರ್ರಾಷ್ಟ್ರೀಯವಾದಿಗಳ ಬೆಂಬಲದ ಅತ್ಯಗತ್ಯವಿದೆ. •

JANASHAKTHI KANNADA VARA PATRIKE JUN 19-25, 2017 Price : Rs. 10/- Date of Publication : 16 JUN 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

# ಐತಿಹಾಸಿಕ ರಾಜ್ಯ ಪೌರಕಾರ್ಮಿಕರ ಐಕ್ಯ ಮುಷ್ಕರ ಗುತ್ತಿಗೆ ಪದ್ಧತಿ ರದ್ದು, ಹಂತಗಳಲ್ಲಿ ಖಾಯಮಾತಿ ಭರವಸೆ



**ಈ ಕೂಡಲೇ ಯಾವುದೇ ಷರತ್ತುಗಳಿಲ್ಲದೆ ಹಾಲಿ ದುಡಿಯುತ್ತಿರುವ ಎಲ್ಲಾ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂಗೊಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಪೌರ ಕಾರ್ಮಿಕರ ಸಂಘಟನೆಗಳ ಜಂಟಿ ಹೋರಾಟ ಸಮಿತಿ, ಇದೆ ಜೂನ್12 2017ರಿಂದ ಅನಿದಿಷ್ಟವಾದಿ ಮುಷ್ಕರ ಕರೆ ನೀಡಿದ್ದವು. ಕಳೆದ ಎರಡು ದಶಕಗಳಲ್ಲಿ ಇದೇ ಪ್ರಥಮ ಬಾರಿ ಒಂದು ವೇದಿಕೆ ಅಡಿಯಲ್ಲಿ ನೆಡೆದ ಐತಿಹಾಸಿಕ ಮುಷ್ಕರಕ್ಕೆ ಕಾರ್ಮಿಕರಿಂದ ಅಭೂತಪೂರ್ವ ಬೆಂಬಲ ಹಾಗು ಭಾಗವಹಿಸುವಿಕೆ ಗುರುತಿಸಬೇಕಾದ ಬೆಳವಣಿಗೆ. ಬಹುತೇಕ 12 ಮಹಾ ನಗರ ಪಾಲಿಕೆಗಳು ಹಾಗು 260 ನಗರ ಸಭೆ, ಪುರ ಸಭೆ, ಪಟ್ಟಣ ಪಂಚಾಯತುಗಳಲ್ಲಿ ಮುಷ್ಕರದಿಂದಾಗಿ ಕಸ ವಿಲೇವಾರಿ 2 ದಿನಗಳ ಮಟ್ಟಿಗೆ ತೊಂದರೆಗೆ ಸಿಲುಕಿದೆ. ಮುಷ್ಕರ ಪರಿಣಾಮ ಸರ್ಕಾರ ಮುನಿಸಿಪಾಲಿಟಿಗಳಲ್ಲಿ ಗುತ್ತಿಗೆ ಪದ್ಧತಿಯನ್ನು 20 ಜೂನ್ ರಿಂದ ರದ್ದುಗೊಳಿಸುವ ಹಾಗು ಹಂತ ಹಂತವಾಗಿ ನೇಮಕಾತಿ ಮೂಲಕ ಕಾರ್ಮಿಕರನ್ನು ಖಾಯಂಗೊಳಿಸುವ ಭರವಸೆ ಮತ್ತೆ ನೀಡಿದೆ. ಈ ಬಾರಿ ಅದನ್ನು ಈಡೇರಿಸುವುದೇ?**

**ಸೈಯದ್ ಮುಜೀಬ್**

ಕರ್ನಾಟಕ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆಗಳ ಸ್ವಚತಾ ಕಾರ್ಯವನ್ನು ಹೊರಗುತ್ತಿಗೆ ನೀಡಿದ್ದು, ಅದರ ವ್ಯವಸ್ಥೆಯ ಅಡಿಯಲ್ಲಿ ಸುಮಾರು 45 ಸಾವಿರಕ್ಕೂ ಹೆಚ್ಚು ಪರಿಶಿಷ್ಟ ಜಾತಿ, ಕುಟುಂಬಗಳು ನಿತ್ಯ ಸ್ವಚ್ಚತಾ ಕಾರ್ಯದಲ್ಲಿ ತೊಡಗಿದ್ದಾರೆ. ಇವರೊಂದಿಗೆ ಕಸದ ಗಾಡಿಗಳನ್ನು ಓಡಿಸುವ ಚಾಲಕರು, ಯು.ಜಿ.ಡಿ.ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ವಾಟರ್‌ಮ್ಯಾನ್‌ಗಳು ಹೀಗೆ ಗುತ್ತಿಗೆ ಆಧಾರದಲ್ಲಿ ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುವವರ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಬಹುತೇಕ ಮುನಿಸಿಪಾಲ್ ಕಾರ್ಮಿಕರು ಓದು ಬರಹ ಗೊತ್ತಿಲ್ಲದವರು, ರಾಜ್ಯದ ದೊಡ್ಡ ಮತ್ತು ಸಣ್ಣ ನಗರಗಳಲ್ಲಿ ಯೋಗ್ಯವಾದ ವಸತಿ, ಕುಡಿಯಲು ನೀರು, ನೈರ್ಮಲ್ಯ ಇಲ್ಲದ ಬೀದಿ ಮತ್ತು ಸ್ಲಂಗಳಲ್ಲಿ, ಬಾಡಿಗೆ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಇದಲ್ಲದೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪದೇ ಪದೇ ಮಲಬಾಚುವ ಕಾರ್ಮಿಕರು ಮಲದ ಗುಂಡಿಗಳಲ್ಲಿ ಉಸಿರುಗಟ್ಟಿ ಸಾಯುತ್ತಿದ್ದಾರೆ, 2008 ರಿಂದ 2017 ರ ಅವಧಿಯಲ್ಲಿ 61 ಜನ ಸಾವನ್ನಪ್ಪಿದ್ದಾರೆ. ಸತ್ತವರಲ್ಲಿ ಬಹುತೇಕರು 35–40 ವರ್ಷಕ್ಕಿಂತ ಕಡಿಮೆ ವಯಸ್ಸಿನವರು, ರಾಜ್ಯದ ರಾಜಧಾನಿ ಬೆಂಗಳೂರಿನಲ್ಲೂ ಈ ಸಾವುಗಳು ನಡೆಯುತ್ತಲೇ ಇವೆ. ಕೆಲ ಸಮಯದ ಹಿಂದೆಯಷ್ಟೆ ಸಚಿವರ ಮನೆಗಳ ಬಳಿ ಯು.ಜಿ.ಡಿ ಸ್ವಚ್ಚಗೊಳಿಸುವ 3 ಮಂದಿ ಸಾವು ರಾಜ್ಯ ಸರ್ಕಾರ ಈ ಪ್ರಶ್ನೆಯನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದೆ ಎಂಬುದಕ್ಕೆ ಸಾಕ್ಷಿ! ಸತ್ತ ಕುಟುಂಬಕ್ಕೆ ಪರಿಹಾರಕ್ಕೆ ಕೊಡಿಸುವುದಕ್ಕೆ ಸಿಮಿತಗೊಳ್ಳದೆ, ಈ ಬಗ್ಗೆ ಇರುವ ಕಾಯಿದೆಯ ಬಗ್ಗೆ ಅರಿವು ಮೂಡಿಸುವುದು ರಾಜ್ಯದ ಸಫಾಯಿ ಕರ್ಮಚಾರಿ ಅಯೋಗದ ಇಂದಿನ ತುರ್ತು ಅಗತ್ಯವಾಗಿದೆ.

ಹಲವು ವರ್ಷಗಳಿಂದ ನಗರ – ಪಟ್ಟಣಗಳನ್ನು ಸ್ವಚ್ಚಗೊಳಿಸುವ ಕೆಲಸದಲ್ಲಿ ತೊಡಗಿರುವ ಪೌರಕಾರ್ಮಿಕರ, ಯು.ಜಿ.ಟಿ ಕಾರ್ಮಿಕರರು ಹಾಗೂ ಕಸದ ಜೊತೆ ಕೆಲಸ ಮಾಡುವ ಚಾಲಕರು ಮತ್ತಿತರೆ ಕಾರ್ಮಿಕರು ಹಾಗು ವಾಟರ್ ಮ್ಯಾನ್‌ಗಳ ಸೇವೆಗಳನ್ನು ಖಾಯಂಗೊಳಿಸುವ ಭರವಸೆಯನ್ನು ನೀಡಿದ್ದ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ತಾನು ಕೊಟ್ಟ ಮಾತಿಗೆ ತಪ್ಪಿದೆ. ಗುತ್ತಿಗೆ ಪೌರ ಕಾರ್ಮಿಕರ ಸೇವೆಗಳನ್ನು ಕಾಯಂಗೊಳಿಸುವಂತೆ ಹಲವು ನ್ಯಾಯಲಯಗಳು ತೀರ್ಪನ್ನು ನೀಡಿವೆ. (ಅಂತಹ ತೀರ್ಪುಗಳ ವಿವರ ಪ್ರತ್ಯೇಕ ಬಾಕ್ಸಿನಲ್ಲಿದೆ) ಈ ಎಲ್ಲಾ ಕಾನೂನಾತ್ಮಕ ಅಂಶಗಳು ಗುತ್ತಿಗೆ ಪದ್ಧತಿಯನ್ನು ಸ್ವಚ್ಚತಾ ಕೆಲಸದಲ್ಲಿ ರದ್ದು ಮಾಡಿ ಅ ಕಾರ್ಮಿಕರನ್ನು ಕಾಯಂಗೊಳಿಸುವಂತೆ ನಿರ್ದೇಶನ ನೀಡಿದ್ದರೂ, ರಾಜ್ಯ ಸರ್ಕಾರಕ್ಕೆ ಅಡ್ಡಿಯಾಗುತ್ತಿರವುದೇನು ಎಂಬುದು ಪ್ರಶ್ನೆಯಾಗಿದೆ.

ರಾಜ್ಯ ಸರ್ಕಾರ ಗುತ್ತಿಗೆ ಪದ್ದತಿ ರದ್ದುಗೊಳಿಸುವ ಅದೇಶವನ್ನು ಈ ಹಿಂದೆ 2015 ಜೂನ್‌ರಲ್ಲಿ ಹೊರಡಿಸಿತ್ತು. ಅದರೆ 15 ದಿನಗಳ ಒಳಗೆ ಮತ್ತೆ ಗುತ್ತಿಗೆ ರದ್ದತಿ ಅದೇಶವನ್ನು ಗುತ್ತಿಗೆ ಲಾಭಿಗೆ ಮಣಿದು ಹಿಂದಕ್ಕೆ ಪಡೆದಿತ್ತು ಅದಕ್ಕೂ ಮುನ್ನ ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಅಶ್ವಾಸನೆ ನೀಡಿತ್ತು. ರಾಜ್ಯ ಸರ್ಕಾರ ತನ್ನ ಮೊದಲ ಬಜೆಟಿನಲ್ಲಿ ತದ ನಂತರ ರಾಜ್ಯಸರ್ಕಾರ ತನ್ನ ಸಚಿವ ಸಂಪುಟದಲ್ಲಿ ಸಹ ಈ ವಿಚಾರದ ಬಗ್ಗೆ ತೀರ್ಮಾನ ಕೈಗೊಂಡು ಮಾರ್ಚಿ 31, 2017 ಒಳಗೆ ಎಲ್ಲಾ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂಮಾಡುವುದಾಗಿ ನೀಡಿದ್ದ ಭರವಸೆಗಳೆಲ್ಲವೂ ಜಾರಿಯಾಗದೆ ಹಾಗೆ ಉಳಿದಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗುತ್ತಿಗೆ ಪೌರಕಾರ್ಮಿಕರ ಖಾಯಂ ಗೊಳಿಸುವ ಸಂಬಂಧ ಸುಮಾರು ನೂರಕ್ಕು ಹೆಚ್ಚು ಬಾರಿ ಮಾಧ್ಯಮಗಳ ಮುಂದೆ ಗುತ್ತಿಗೆ ವ್ಯವಸ್ಥೆಯನ್ನು ರದ್ದು ಮಾಡಲಾಗುವುದು ಎಂದು ಹೇಳಿಕೆ ನೀಡಿದ್ದಾರೆ, ಅದರೆ ಕಳೆದ 4 ವರ್ಷಗಳಿಂದ ಅಧಿಕೃತವಾದ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಜಾಣ ಕುರುಡರಂತೆ ಅಧಿಕಾರಿಗಳ ಮಾತಿಗೆ ಒತ್ತು ನೀಡುತ್ತಿದ್ದಾರೆ

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪೌರ ಕಾರ್ಮಿಕರ ಸಂಘಟನೆಗಳ ಜಂಟಿ ಹೋರಾಟ ಸಮಿತಿ, ಜೂನ್ 12 2017ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದವು. ಈ ಜಂಟಿ ಹೋರಾಟ ಸಮಿತಿಯಲ್ಲಿ–ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ(ರಿ.) ಸಿಐಟಿಯು, ತುಮಕೂರು ಜಿಲ್ಲಾ ಪೌರಕಾರ್ಮಿಕರ ಸಂಘ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಕಾವಲು ಸಮಿತಿ, ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ(ರಿ) ಸಮಾನತೆ ಯೂನಿಯನ್, ಎಐಸಿಸಿಟಿಯು ಮತ್ತಿತರ ಪೌರ ಕಾರ್ಮಿಕರ ಸಂಘಟನೆಗಳಿವೆ.

ಕಳೆದ ಎರಡು ದಶಕಗಳಲ್ಲಿ ಇದೇ ಪ್ರಥಮ ಬಾರಿ ಒಂದು ವೇದಿಕೆ ಅಡಿಯಲ್ಲಿ ನಡೆದ ಐತಿಹಾಸಿಕ ಮುಷ್ಕರಕ್ಕೆ ಕಾರ್ಮಿಕರಿಂದ ಅಭೂತಪೂರ್ವ ಬೆಂಬಲ ಹಾಗು ಭಾಗವಹಿಸುವಿಕೆ ಗುರುತಿಸಬೇಕಾದ ಬೆಳವಣಿಗೆ. ಬಹುತೇಕ 12 ಮಹಾನಗರ ಪಾಲಿಕೆಗಳು ಹಾಗು 260 ನಗರ ಸಭೆ, ಪುರ ಸಭೆ, ಪಟ್ಟಣ ಪಂಚಾಯತುಗಳಲ್ಲಿ ಮುಷ್ಕರದಿಂದಾಗಿ ಕಸ ವಿಲೆವಾರಿ 2 ದಿನಗಳ ಮಟ್ಟಿಗೆ ತೊಂದರೆಗೆ ಸಿಲುಕಿದೆ. ಮುಷ್ಕರ ಪರಿಣಾಮ ಸರ್ಕಾರ ಮುನಿಸಿಪಾಲಿಟಿಗಳಲ್ಲಿ ಗುತ್ತಿಗೆ ಪದ್ದತಿಯನ್ನು 20 ಜೂನ್ ರಿಂದ ರದ್ದುಗೊಳಿಸುವ ಹಾಗು ಹಂತ ಹಂತವಾಗಿ ನೇಮಕಾತಿ ಮೂಲಕ ಕಾರ್ಮಿಕರನ್ನು ಖಾಯಂಗೊಳಿಸುವ ಭರವಸೆ ಮತ್ತೆ ನೀಡಿದೆ. ಈ ಭರವಸೆಯನ್ನು ಕಳೆದ ನಾಲ್ಕು ವರ್ಷಗಳಲ್ಲಿ ಈಡೇರಿಸದ ಸರ್ಕಾರ ಈ ಬಾರಿ ಈಡೇರಿಸುವುದೆ'!?

**ರಾಜ್ಯದ ಕೆಲವು ಕೇಂದ್ರಗಳಿಂದ ಈ ಐತಿಹಾಸಿಕ ಮುಷ್ಕರದ ಬಗ್ಗೆ ಬಂದಿರುವ ವರದಿಗಳು ಇಲ್ಲಿವೆ:**

**ಬೆಂಗಳೂರು**

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಸಾವಿರಾರು ಪೌರ ಕಾರ್ಮಿಕರು ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ, ಬಿ.ಬಿ.ಎಂ.ಪಿ ಗುತ್ತಿಗೆ ಕಾರ್ಮಿರ ಸಂಘ ಎಐಸಿಸಿಟಿಯು ನೇತ್ರತ್ವದಲ್ಲಿ ಬನ್ನಪ್ಪ ಪಾರ್ಕನಲ್ಲಿ ಸಮಾವೇಶಗೊಂಡು ಮುಷ್ಕರದ ಭಾಗವಾಗಿ ಧರಣಿ

**ಪುಟ 11 ಕ್ಕೆ**





## ಗುತ್ತಿಗೆ ಪೌರ ಕಾರ್ಮಿಕರ ಸೇವೆ ಖಾಯಮಾತಿಗೆ ಆಜ್ಞೆ ಮಾಡಿದ ಕೋರ್ಟು ತೀರ್ಪುಗಳು

ಗುತ್ತಿಗೆ ಪೌರ ಕಾರ್ಮಿಕರ ಸೇವೆಗಳನ್ನು ಕಾಯಂಗೊಳಿಸುವಂತೆ ಹಲವು ನ್ಯಾಯಲಯಗಳು ತೀರ್ಪನ್ನು ನೀಡಿವೆ. ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ವಿಭಾಗೀಯ ಪೀಠ ನ್ಯಾ.ಎಲ್. ನಾರಯಣಸ್ವಾಮಿ ಅವರ ತೀರ್ಪು ನಂ wp112397/2015 ಮತ್ತು ಕಲುಬುರಗಿ ವಿಬಾಗಿಯ ಪೀಠ ಸಂ. 112424 of 2015(GM-TN), ಸರ್ವೋಚ್ಚ ನ್ಯಾಯಾಲಯವು Supreme court of India and civil appellate Jurisdiction civil appeal No 213 of 2013 ಪ್ರಕಾರ ಮತ್ತು 1971 ರ ಸೆಕ್ಷನ್ 10 ರ ಪ್ರಕಾರ ಅಗತ್ಯ ಸೇವೆಗಳ ಪ್ರಕಾರ ಗುತ್ತಿಗೆ ನೇಮಾಕಾತಿ ರದ್ದು ಮತ್ತು ನೇರವಾಗಿ ವೇತನ ಪಾವತಿ ನೀಡಬೇಕು ಎಂದು ತಿಳಿಸುತ್ತದೆ. ಗುಜರಾತ್ ಇಲೆಕ್ರಿಕಲ್ ಬೋರ್ಡ vs ಹಿಂದ್ ಮಜ್ದೂರ್ ಸಭಾ ಅಂಡ್ ಅದರ್ಸ್ (1995 11 ಐ ಎ 790) ಪ್ರಕರಣ ಸಂಬಂಧ ಪಟ್ಟಂತೆ ಗೌರವನ್ವಿತ ಸರ್ವೋಚ್ಚ ನ್ಯಾಯಾಲಯವು ಸಾರ್ವಜನಿಕ ಉದ್ದಿಮೆಗಳ ಕಾಯಿದೆ ಸೆಕ್ಷನ್ 10(2) ರ ಅಡಿಯಲ್ಲಿ (ಎ)ಯಿಂದ (ಡಿ) ವರೆಗಿನ ಗುತ್ತಿಗೆ ಕಾರ್ಮಿಕ ಪದ್ದತಿಯಲ್ಲಿ ನೇಮಕ ಮಾಡಿಕೊಂಡಿರುವ ಎಲ್ಲಾ ಸ್ಥಳೀಯ ಸಂಸ್ಥೆಗಳು ತಂತಾನೆ ಗುತ್ತಿಗೆ ಪದ್ದತಿಯನ್ನು ರದ್ದುಪಡಿಸಿ ಸದರಿ ಕಾರ್ಮಿಕರನ್ನು ಸಾದ್ಯವಾದಷ್ಟು ಖಾಯಂ ಮಾಡಬೇಕು ಎಂದು ತಿಳಿಸುತ್ತದೆ. ಮೈಸೂರಿನ ಮಾಜಿ ಮಹಾಪೌರರಾದ ನಾರಾಯಣ ರವರು ಗುತ್ತಿಗೆ ಪದ್ದತಿ ವಿರುದ್ಧ ಹೈಕೋರ್ಟಿನಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ನಂ: 60-58 of 2006, ಹೈಕೋರ್ಟ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂ ಗೊಳಿಸಲು, ಗುತ್ತಿಗೆ ಪದ್ಧತಿ ರದ್ದು ಮಾಡಲು ನಿರ್ದೇಶನ ನೀಡಿತ್ತು. ರಾಜ್ಯ ಸರ್ಕಾರ 6 ತಿಂಗಳ ಸಮಯಾವಕಾಶ ಕೋರಿತ್ತು. 6 ತಿಂಗಳಲ್ಲಿ ಖಾಯಂಗೊಳ್ಳಿಸಲು ಕ್ರಮ ತೆಗೆದುಕೊಳ್ಳಬೇಕಿತ್ತು. ಅದರೆ ಏನು ಕ್ರಮ ಜರುಗಿಸದೆ ಹೈಕೋರ್ಟ ನಿರ್ದೇಶನ ಉಲ್ಲಂಘಿಸಿದೆ.

ಇನ್ನು ಇತ್ತಿಚೆಗೆ ಪಂಜಾಬ್ ರಾಜ್ಯ ಸರ್ಕಾರ ದೇಶದಲ್ಲಿಯೆ ಪ್ರಪ್ರಥಮವಾಗಿ ಅತ್ಯಂತ ಜನಪರವಾದ ಕಾಯಿದೆಯನ್ನು ಜಾರಿ ಗೊಳಿಸಿದೆ. The Punjab AD HOC, CONTRACTUAL DAILYWAGE TEMPORARY, WORK CHARGED AND OUTSOURCED EMPLYOEES WELFARE ACT 2016, ರ ಕಾಯಿಧೆ ಯಲ್ಲಿ ಹೊರಗುತ್ತಿಗೆ ಮೇಲೆ ಕೆಲಸ ಮಾಡುವ ಎಲ್ಲಾ ರೀತಿಯ ಎ ಯಿಂದ ಡಿ ಗ್ರೂಪ್ ನೌಕರರನ್ನು ಖಾಯಂಗೊಳಿಸಲು ತಿರ್ಮಾನಿಸಿ ಹೊಸ ಕಾಯಿದೆಯನ್ನ ರೂಪಿಸಿದೆ. 2017 ಏಪ್ರಿಲ್ 9 ರಂದು "ಕಾಚ್ರ ವಹಾತುಕ್ ಶ್ರಮಿಕ್ ಸಂಘ" ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸರ್ವೋಚ್ಚ ನ್ಯಾಯಾಲಯ ಮುಂಬಯಿ ಕಾರ್ಪೋರೇಷನ್‌ನ 2700 ಗುತ್ತಿಗೆ ಸ್ಯಾನಿಟೇಷನ್ ನೌಕರರನ್ನು ಖಾಯಂ ಮಾಡಬೇಕೆಂದು ತೀರ್ಪು ನೀಡಿದೆ, ಜೊತೆಗೆ 2 ವರ್ಷಗಳ ವೇತನವನ್ನು ನೀಡಬೇಕು ಎಂದು ತಾಕಿತು ಮಾಡಿದೆ. ಈ ಎಲ್ಲಾ ಕಾನೂನಾತ್ಮಕ ಅಂಶಗಳು ಗುತ್ತಿಗೆ ಪದ್ಧತಿಯನ್ನು ಸ್ವಚ್ಚತಾ ಕೆಲಸದಲ್ಲಿ ರದ್ದು ಮಾಡಿ ಅ ಕಾರ್ಮಿಕರನ್ನು ಕಾಯಂಗೊಳಿಸುವಂತೆ ನಿರ್ದೇಶನ ನೀಡಿದ್ದರೂ, ರಾಜ್ಯ ಸರ್ಕಾರಕ್ಕೆ ಅಡ್ಡಿಯಾಗುತ್ತಿರವುದೇನು ಎಂಬುದು ಪ್ರಶ್ನೆಯಾಗಿದೆ.

**JANASHAKTHI KANNADA VARA PATRIKE:** Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**